ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 3


ಜನವರಿ 20, 2008

ಕನ್ನಡ ವಾರಪತ್ರಿಕೆ

ರೂ. 5/-



ಇದೋ ಅಂಗವಿಕಲರ ಆತ್ಮಗೌರವದ ಬದುಕು



ಕೋಲಾರ : ಜನರ ದುರ್ಭರ ಜೀವನ

ಹಿಂದುತ್ವದ ಪ್ರಯೋಗ ಶಾಲೆಯಲ್ಲಿ



ದುಡಿವ ಜನರ ಸವಾಲು

ಕಬ್ಬು ಬೆಳೆಗಾರರ ಕಣ್ಣೀರು

ಏನಿದು ? ನ್ಯಾನೋ ತಂತ್ರಜ್ಞಾನ



ನಾಟಕ



ಉಪಾಹರಣ : ಯುದ್ಧದ ಕರಾಳತೆಯ ಅನಾವರಣ

ಮೈಸೂರಿನಲ್ಲಿ ಕೆಂಬಾವುಟದ 'ಕಂಪು'

ಮೈಸೂರು ನಗರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 19ನೇ ರಾಜ್ಯಸಮ್ಮೇಳನದ ಸಿದ್ಧತೆಗಳು ಭರದಿಂದ ಜರುಗಿವೆ. ಈ ಸಮ್ಮೇಳನದ ಯಶಸ್ಸಿಗೆ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸುಮಾರು ಎರಡುವರೆ ತಿಂಗಳಿಂದ ಸಮ್ಮೇಳನದ ಯಶಸ್ಸಿಗೆ ರಾತ್ರಿ, ಹಗಲಿನ ತಯಾರಿ ನಡೆಯುತ್ತಿದೆ.

ಪ್ರಚಾರಸಮಿತಿ, ಆಹಾರಸಮಿತಿ, ವಸತಿ ಸಮಿತಿ, ಬಹಿರಂಗಸಭೆ ಮತ್ತು ರ್‍ಯಾಲಿಯ ಸಮಿತಿ, ಸ್ಮರಣ ಸಂಚಿಕೆ ಸಮಿತಿ, ಮಾಧ್ಯಮ ಸಮಿತಿ, ಸಾರಿಗೆ ಸಮಿತಿ, ಕಛೇರಿ ಮತ್ತು ಸಮ್ಮೇಳನದ ಹಾಲ್ ಸಮಿತಿ ಮತ್ತು ಹಣಕಾಸು ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ಸಮಿತಿಯು ಸಾಧ್ಯವಾದಷ್ಟು ತನ್ನ ಪಾಲಿನ ಕೆಲಸಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತಿವೆ. 10ರಿಂದ 15 ದಿನಗಳ ಬೀದಿ ಸಂಗ್ರಹದಲ್ಲಿ 50 ಸಾವಿರ ರೂ.ಗಳಿಗಿಂತಲೂ ಹೆಚ್ಚು ಸಂಗ್ರಹವಾಗಿದೆ. ಸಂಗ್ರಹದ ಅನುಭವ ಬಹಳ ರೋಮಾಂಚನಕಾರಿಯಾಗಿದೆ. ರಾಜ್ಯದಲ್ಲಿ ಮುಂದೆ ಬಿಜೆಪಿ ತಾನೇ ಅಧಿಕಾರ ನಡೆಸುತ್ತೇನೆಂದೂ, ಎಲ್ಲಾ ವ್ಯಾಪಾರಿ ಜನಗಳು ತಮ್ಮವರೇ ಎಂದು ಬಿಂಬಿಸುತ್ತಿರುವಾಗ ನಮ್ಮ ಸಂಗಾತಿಗಳ ಅನುಭವ ವ್ಯತಿರಿಕ್ತವಾಗಿದೆ. "ಫುಟ್‌ಪಾತ್‌ನಲ್ಲಿ ಹಣ್ಣು ಮಾರುವ ವ್ಯಕ್ತಿಯ ಬಳಿ ಸಮ್ಮೇಳನಕ್ಕೆ ಹಣ ಕೇಳಿದಾಗ ತನ್ನ ಪುಡಿಗಾಸನ್ನು ಇಡಿಯಾಗಿ ಕೊಟ್ಟಿದ್ದು, ತಗಡು ಕೆಲಸ ಮಾಡುವ ವ್ಯಕ್ತಿ ಕೂಡಾ 25 ರೂ.ಗಳನ್ನು ಕೊಟ್ಟಿದ್ದಾರೆ. ಹಲವಾರು ಅಂಗಡಿಗಳಲ್ಲಿ 500 ರೂ.ವರೆಗೂ ಸಮ್ಮೇಳನವನ್ನು ಬೆಂಬಲಿಸಿ ಕೊಟ್ಟಿರುವುದು ಇದೆ. ಬಿಜೆಪಿ ಒಲವು ಹೊಂದಿರುವ ಜನರೂ ಕೂಡಾ 'ನಿಮ್ಮ ಬದ್ಧತೆಯನ್ನು ನೋಡಿ ಹಣ ಕೊಡುತ್ತೇವೆ' ಎಂದು ಹೇಳಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆ ಬೆಂಗಳೂರಿನಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಈಗ ಮೈಸೂರು ರಾಜ್ಯದ 2ನೇ ಕೈಗಾರಿಕಾ ಕೇಂದ್ರವಾಗುತ್ತಿದೆ. ಅಲ್ಲಿಯ ನಿರುದ್ಯೋಗ, ಕಡಿಮೆ ಕೂಲಿಗೆ ದೊರೆಯುವ ಕಾರ್ಮಿಕರು, ಹೇರಳವಾಗಿ ಅವರನ್ನು ಶೋಷಿಸಲು ಇನ್ನಷ್ಟು ಸುಲಭವಾಗಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಟೆಕ್ಸ್‌ಟೈಲ್ಸ್ ಬೇರೆ ಬೇರೆ ತರಹದ ಕಾರ್ಖಾನೆಗಳ ಕೇಂದ್ರವಾಗಿ ನಂಜನಗೂಡು ಕೈಗಾರಿಕಾ ಪ್ರದೇಶ ಅಭಿವೃದ್ಧಿಯಾಗುತ್ತಿದೆ. ಇನ್ನೊಂದೆಡೆ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿದು ದೇಶದಲ್ಲಿಯೇ ವಿಶಿಷ್ಟ ಸ್ಥಾನದಲ್ಲಿ ಮೈಸೂರಿದೆ. ಮೈಸೂರಿನ ಪಾಳೆಗಾರಿ ರಾಜ ಪರಂಪರೆಯ ವಿರುದ್ಧ ಹಲವು ಹೋರಾಟಗಳು ನಡೆದಿದ್ದರೂ ಇನ್ನು ಆ ಪರಂಪರೆಯ ಭಕ್ತಿಯೂ ಇದೆ.

ಅಷ್ಟೇ ಅಲ್ಲದೆ ಇಡೀ ರಾಜ್ಯದ ರಾಜಕೀಯ ಧ್ರುವೀಕರಣಕ್ಕೆ ಕಾರಣವಾಗಿರುವ ಇಲ್ಲಿನ ರಾಜಕಾರಣ, ಆ ರಾಜಕಾರಣದ ಪ್ರತಿಫಲವಾಗಿ ಇಂದು ರಾಜ್ಯದಲ್ಲಿ ರಾಷ್ಟ್ರಪತಿಗಳ ಆಳ್ವಿಕೆಗೂ ಕಾರಣವಾಗಿದೆ.

ಇಂತಹ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿ ಭಾರಿ ಪ್ರಬಲವಾಗಿಲ್ಲದಿದ್ದರೂ ಅಲ್ಲಿರುವ ವಿಮಾ, ವಿಕ್ರಾಂತ್, ನಂಜನಗೂಡಿನ ಕಾರ್ಮಿಕರು, ಮೈಸೂರು ಹೋಟೆಲ್ ಕಾರ್ಮಿಕರು, ಜಿಲ್ಲೆಯ ಅಂಗನವಾಡಿ ಮತ್ತು ಬಿಸಿಯೂಟ ನೌಕರರು ಒಂದುಗೂಡಿ ಈ ಸಮ್ಮೇಳನ ಯಶಸ್ಸಿಗೆ ಕಂಕಣ ತೊಟ್ಟಿದ್ದಾರೆ.

ಎಲ್ಲಾ ಸಂಗಾತಿಗಳು ತಮ್ಮ ನೌಕರಿಯನ್ನು ಮುಗಿಸಿ, ಸಮ್ಮೇಳನದ ಕೆಲಸಗಳಿಗೆ ತೊಡಗಿರುವುದು ವಿಶೇಷ.

ಇದರ ಮಧ್ಯದಲ್ಲಿಯೇ ಮೈಸೂರು ನಗರದಲ್ಲಿ ಸುಮಾರು 250 ಸ್ಥಳಗಳಲ್ಲಿ ಗೋಡೆಬರಹವಾಗಿದೆ. ಸುಮಾರು 70 ಸ್ಥಳಗಳಲ್ಲಿ ಬಂಟಿಂಗ್ಸ್ ಅಂಟಿಸಲು 50 ಸಾವಿರ ಬಂಟಿಂಗ್ಸ್‌ನ್ನು ಮುದ್ರಿಸಿದೆ. ಲಕ್ಷಾಂತರ ಕರಪತ್ರಗಳನ್ನು ಜಿಲ್ಲೆಯಾದ್ಯಂತ ಹಂಚಲಾಗುತ್ತಿದೆ.

ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು, ಮೈಸೂರು ನಗರದ ಶ್ರೀರಾಮಪುರ, ಹೆಬ್ಬಾಳ, ಅಗ್ರಹಾರಗಳಲ್ಲಿ ಸ್ವಾಗತ ಸಮಿತಿಗಳನ್ನು ರಚಿಸಿ ಆ ಮುಖಾಂತರ ಪ್ರಚಾರ, ಹಣ ಸಂಗ್ರಹವನ್ನು ಮಾಡಲಾಗುತ್ತಿದೆ. ಎಲ್ಲಾ ವಿಮಾ ಸಂಗಾತಿಗಳು, ಕಾರ್ಖಾನೆಗಳ ಕಾರ್ಮಿಕರು, ಅಂಗನವಾಡಿ ನೌಕರರು ತಮ್ಮ ತಮ್ಮ ಕಾಣಿಕೆಗಳನ್ನು ನೀಡುತ್ತಿದ್ದಾರೆ ಮತ್ತು ಆಹಾರ ಮತ್ತು ಇತರ ಸಾಮಗ್ರಿಗಳನ್ನು ಸಂಗ್ರಹಿಸುತ್ತಿದ್ದಾರೆ.

ರ್‍ಯಾಲಿಗೆ ಸಂಬಂಧಿಸಿಯೂ ಎಲ್ಲಾ ಕಾರ್ಮಿಕರು ಭಾಗವಹಿಸಬೇಕೆಂದೂ ತೀರ್ಮಾನಿಸಿ ಜಿಲ್ಲೆಯ ಅಂಗನವಾಡಿ ನೌಕರರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದಷ್ಟೇ ಅಲ್ಲದೇ ಆಹಾರ ಸಾಮಗ್ರಿಗಳ ಸಂಗ್ರಹದಲ್ಲಿ ತೊಡಗಿದ್ದಾರೆ.

ಜನವರಿ 21ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರು ಸಿಟಿ ಕಾರ್ಪೊರೇಷನ್ ಮುಂಭಾಗದಿಂದ ರ್‍ಯಾಲಿ ಹೊರಟು ಟೌನ್‌ಹಾಲ್‌ನಲ್ಲಿ ಬಹಿರಂಗ ಸಭೆ ನಡೆಯಲಿದೆ.

ಅಂದು ಸಂಜೆ ಸಮ್ಮೇಳನದ ಉದ್ಘಾಟನೆಯೂ ನಡೆಯಲಿದೆ.

ಸಮ್ಮೇಳನ ನಡೆಯುವ ಸ್ಥಳ ಅಂಬೇಡ್ಕರ್ ಸಮುದಾಯ ಭವನ, ಪೋಸ್ಟಲ್ ಕಾಲೋನಿ, ವಿಶ್ವೇಶ್ವರಯ್ಯ ನಗರ 2ನೇ ಹಂತ, ಸ್ಟರ್ಲಿಂಗ್ ಟಾಕೀಸ್ ಹಿಂಭಾಗ, ಮೈಸೂರು-08. ಮೊ: 9448600100, 9980084867, 9449806767

ಏಜೆನ್ಸಿದಾರರೇ,
ಕೋರ್ ಬ್ಯಾಂಕಿಂಗ್ ಸೌಲಭ್ಯ ಬಳಸಿ
ದಯಮಾಡಿ ಬಾಕಿ ಹಣ ತಕ್ಷಣ ಪಾವತಿಸಿ

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಗೆ ಚಂದಾಹಣ ಅಥವಾ ಏಜೆನ್ಸಿ ಬಿಲ್ ಪಾವತಿಸುವವರಾದರೆ ಈ ವಿಚಾರ ಗಮನಿಸಿ.

'ಜನಶಕ್ತಿ' ಕನ್ನಡ ವಾರಪತ್ರಿಕೆ ಯ ಖಾತೆಗೆ ನೀವು ನಿಮ್ಮ ಊರುಗಳಿಲ್ಲಿದ್ದೇ ನೇರವಾಗಿ ಹಣ ತುಂಬಬಹುದು. ಈ ಕೆಳಗೆ ಬ್ಯಾಂಕ್ ಅಕೌಂಟ್ ಸಂಖ್ಯೆ ನೀಡಲಾಗಿದೆ.

ನೀವು ಮಾಡಬೇಕಾದುದಿಷ್ಟೆ, ನಿಮ್ಮ ಊರಿನಲ್ಲಿರುವ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ) ಶಾಖೆಗೆ ಹೋಗಿ ಇಲ್ಲಿ ನೀಡಲಾಗಿರುವ ಹೆಸರಿನ, ಸಂಖ್ಯೆಯ ಖಾತೆಗೆ ಹಣ ತುಂಬಿ. ಮತ್ತು ಇದನ್ನು ಮರೆಯಬೇಡಿ.

ಈ ರೀತಿ ನೀವು ಹಣ ತುಂಬಿದ ಕೂಡಲೇ ದಯಮಾಡಿ ಹಣ ತುಂಬಿದ ವಿವರ, ಉದ್ದೇಶವನ್ನು ಕಛೇರಿಯ ವಿಳಾಸಕ್ಕೆ ಒಂದು ಕಾರ್ಡ್ ಬರೆದು ತಿಳಿಸಿ. ಚಂದಾ ಆದರೆ ವಿಳಾಸ ನೀಡಿ. ಪತ್ರ ಕಛೇರಿಗೆ ತಲುಪಿರುವ ಬಗ್ಗೆ ಫೋನ್ ಮಾಡಿ ಖಚಿತ ಮಾಡಿಕೊಳ್ಳಿ.

ಈ ಸಂಬಂಧ ನೀವು ಸಂಪರ್ಕಿಸಬೇಕಾದದ್ದು ವೀರಣ್ಣ ಕಲ್ಮನಿ : 9480430594,

ಪತ್ರಿಕೆಯ ಕಾರ್ಯಾಲಯದ ವಿಳಾಸ:
ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560 027,

ಖಾತೆ ಹೆಸರು
Janashakthi Kannada Varapathrike'
ಜನಶಕ್ತಿ ಕನ್ನಡ ವಾರಪತ್ರಿಕೆ,

ಬ್ಯಾಂಕ್ ಖಾತೆ ಸಂಖ್ಯೆ: 64020446625
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ), ಸಂಪಂಗಿರಾಮನಗರ ಶಾಖೆ, ಬೆಂಗಳೂರು.


ಡಿ.ಡಿ. ಮಾಡಿಸುವಾಗ ಕೊಡಬೇಕಾಗುವ ಶುಲ್ಕವನ್ನು ಇಲ್ಲೂ ಭರಿಸಬೇಕಾಗುತ್ತದೆ. ಚಲನ್‌ನಲ್ಲಿ ಏಜೆನ್ಸಿದಾರರ ಅಥವಾ ಚಂದಾದಾರರ ಹೆಸರು ಹಾಕುವುದು ಮರೆಯಬೇಡಿ.

ಸಂಪಾದಕೀಯ

ಅಕ್ರಮ ಮತದಾರರು ಮತ್ತು ಪಕ್ಷಪಾತತೆ

ಮತದಾರರ ಪಟ್ಟಿಯಲ್ಲಿ ಹಲವಾರು ದೋಷಗಳಿದ್ದು ಅದನ್ನು ಸರಿಪಡಿಸಬೇಕು ಎಂದು ಮಾರ್ಚ್ 10ರ ಗಡುವನ್ನು ಚುನಾವಣಾ ಆಯುಕ್ತರು ನೀಡಿರುವುದು ಮತ್ತು ಮೇ 28ರೊಳಗೆ ಚುನಾವಣೆ ಪ್ರಕ್ರಿಯೆ ಮುಗಿಸುವುದಾಗಿ ಹೇಳಿರುವುದು ಒಂದು ರೀತಿಯಲ್ಲಿ ಈ ಹಂತದಲ್ಲಿ ಅನಿಶ್ಚಿತತೆಗೆ ತೆರೆಹಾಕಿದಂತಾಗಿದೆ. ವಿಧಾನಸಭೆಯ ಚುನಾವಣೆಗಳು ತುಂಬಾ ಮುಂದೆ ಹೋಗಬಹುದು ಎಂಬ ಬಗ್ಗೆ ಅನೇಕ ಊಹಾಪೋಹಗಳು ಎದ್ದಿದ್ದವು.

ಪ್ರಸಕ್ತ ಪಟ್ಟಿಯಲ್ಲಿರುವ ಸುಮಾರು 33.48 ಲಕ್ಷ ಹೆಸರುಗಳನ್ನು ಕೈಬಿಡಬೇಕೆಂದು ಇನ್ನೂ 9.27 ಲಕ್ಷ ಮಂದಿ ಹೆಸರುಗಳನ್ನು ಸೇರಿಸಬೇಕೆಂದು ಹೇಳಿರುವುದು ಸಮಸ್ಯೆಯ ಅಗಾಧತೆಯನ್ನು ತೋರಿಸುತ್ತದೆ. ಮತದಾರರ ಪಟ್ಟಿಯಲ್ಲಿ ಇಂತಹ 'ಕೈವಾಡ' ಹೇಗೆ ಸಂಭವಿಸಿತು. ಹೇಗೆ ಅಧಿಕ ಮತದಾರರು ಸೃಷ್ಟಿಯಾದರು ಎಂಬುದು ಗಂಭೀರವಾದ ಪ್ರಶ್ನೆಯಾಗಿದೆ.




ಇಂತಹ ಮತದಾರರ ಹೆಚ್ಚಳವನ್ನು ಪ್ರಮುಖ ರಾಜಕೀಯ ಪಕ್ಷಗಳು ನ'ಡ'ಸಿವ'ಯ'ಂದ'ಂ ದೂರಲಾಗುತ್ತಿದೆ. ವಿಶೇಷವಾಗಿ ಬಿಜೆಪಿ ನಡೆಸಿರುವುದಾಗಿ ಆರೋಪಿಸಲಾಗಿದೆ. ಬಿಜೆಪಿಯು ಕಾಂಗ್ರೆಸ್ ಚುನಾವಣೆ ಮುಂದೂಡಲು ಬಯಸುತ್ತದೆ ಎಂದು ಮರುದೂಷಣೆ ಮಾಡಿದೆ. ಇವರ ಪರಸ್ಪರ ದೋಷಾರೋಪಗಳೇನೇ ಇದ್ದರೂ ಇಂತಹದ್ದರಲ್ಲೊಂದು ಸತ್ಯಾಂಶವಿಲ್ಲದೆ ಇರಲಾರದು.

ಯಾಕೆಂದರೆ ಬಿಜೆಪಿ ಈಗ ಏನಾದರೂ ಮಾಡಿ ಸ್ವಂತ ಬಲದ ಮೇಲೆ ಗೆಲ್ಲಲೇಬೇಕು ಎಂದು ಶತಾಯಗತಾಯ ಪ್ರಯತ್ನ ನಡೆಸಿದೆ. ಉಳಿದೆಲ್ಲಾ ಪಕ್ಷಗಳಿಗಿಂತಲೂ ಬಿಜೆಪಿ ಇಂದು 'ಹೈಟೆಕ್' ಆಗಿದೆ. ಅಪಾರ ಸಂಪನ್ಮೂಲ ಬೇರೆ! ಸಂಘ ಪರಿವಾರದ ಸಂಘಟನೆಯ ಜಾಲ ಎಲ್ಲೆಲ್ಲಿ, ಹೇಗೆ ಎಂದು ಹೇಳುವುದು ಅಷ್ಟು ಸುಲಭವಲ್ಲ. ಬಿಜೆಪಿ ತನ್ನ ಗೆಲುವಿಗೆ ಅತ್ಯಂತ ನಿರ್ದಿಷ್ಟ, ಸೂಕ್ಷ್ಮವಾದ ರೀತಿಯಲ್ಲಿ 'ಕಾರ್ಪೊರೇಟ್' ಶೈಲಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಣದ ಬಲ, ಬಳಕೆ ಇತರೆ ಪಕ್ಷಗಳಿಗಿಂತಲೂ ಅಧಿಕವಾಗಿದೆ. ಅದು ಕ್ಷೇತ್ರವಾರಾಗಿ ಗೆಲ್ಲಲು ಅಗತ್ಯವಿರುವ ಕೃತಕ ಮತದಾರರನ್ನು ಸೃಷ್ಟಿಸಿತೇ? ಅಂದರೆ ಈ ಬಲಪಂಥೀಯ ಪಕ್ಷಗಳು ಜನತೆಯ ನಿಜ ಅಭಿಮತದಿಂದ ಅಧಿಕಾರಕ್ಕೆ ಬರಬೇಕೆನ್ನುವುದಕ್ಕಿಂತ ಅಕ್ರಮ, ಅನೈತಿಕತೆ ಬುಡಮೇಲು ಕ್ರಮಗಳಿಂದ ಬರಲು ಹವಣಿಸುತ್ತಿರುವುದಕ್ಕೆ ಇದು ಇನ್ನೊಂದು ಉದಾಹರಣೆ ಅಷ್ಟೆ.

ಈ ಹಿನ್ನೆಲೆಯಲ್ಲಿ ಅತ್ಯಂತ ಪಾರದರ್ಶಕವಾಗಿ ಪಟ್ಟಿಯ ಪರಿಶೀಲನೆ ಹಾಗೂ ಅಂತಿಮಪಟ್ಟಿ ಸಿದ್ಧಗೊಳ್ಳಬೇಕಿದೆ. ಇದರತ್ತ ಜನರ ಎಚ್ಚರವೂ ಅಗತ್ಯ.

ಇನ್ನೊಂದು ಸಂಗತಿಯೆಂದರೆ ಮೇ 28ರೊಳಗೆ ಚುನಾವಣೆಗಳು ನಡೆದೇ ತೀರುವುದೆಂದು ಚುನಾವಣಾ ಆಯುಕ್ತರು ಹೇಳಿರುವುದು ಬಿಜೆಪಿಗೆ ನಿಟ್ಟುಸಿರು ತಂದಿದೆಯಂತೆ! ಅಂತಹದದೊಂದು ಗ್ಯಾರಂಟಿ ನೀಡುವುದು ಬಿಜೆಪಿಗೆ ಬೇಕಿತ್ತೇ ಎಂಬುದು. ಮೇಲಾಗಿ ಮುಖ್ಯ ಚುನಾವಣಾ ಆಯುಕ್ತರು ಎಂತಹ ನಿಷ್ಠುರ, ನಿಷ್ಪಕ್ಷಪಾತಿಗಳು ಎಂಬುದು ಪಶ್ಚಿಮ ಬಂಗಾಳ, ಬಿಹಾರದ ಚುನಾವಣೆಗಳಲ್ಲಿ ನೋಡಿಯಾಗಿದೆ. ಕರ್ನಾಟಕದಲ್ಲಿ ಈ ಖದರು ತೋರಿಸಿದರೆ ಅದು ಯಾರ ಪಕ್ಷಪಾತಿ ಎಂಬುದು ಮುಂದಿನ ಘಟನೆಗಳೇ ತೋರಿಸಬೇಕಷ್ಟೆ. ನಿಷ್ಪಕ್ಷಪಾತ ಎಂಬುದೂ ಒಂದು ಪಕ್ಷಪಾತವೇ ಆಗಿಬಿಡಬಹುದು. ಏನೇ ಆಗಲಿ ಮತದಾರರ ಪಟ್ಟಿಯಲ್ಲಿ ದೋಷವಂತೂ ತುರ್ತಾಗಿ ಸರಿಯಾಗಬೇಕಿದೆ.

ಕಬ್ಬು ಬೆಳೆಗಾರರ ನಿತ್ಯದ ನೋವು



ಜನವರಿ 8ರಂದು ನೂರಾರು ರೈತರು ಮಂಡ್ಯ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದ್ದರು. ಈಗಾಗಲೇ ನೇಣಿಗೆ ಶರಣಾಗುತ್ತಿರುವ ರೈತ ಸಮುದಾಯ ಆಕ್ರೋಶಗೊಂಡು ಏನಾದರೂ ಅನಾಹುತ ಸಂಭವಿಸಬಹುದೆಂದು ದೊಡ್ಡ ಪೊಲೀಸ್ ಜಮಾವಣೆಯನ್ನೇ ಅಲ್ಲಿ ಮಾಡಲಾಗಿತ್ತಾದರೂ, ಇದಕ್ಕೆ ಸೊಪ್ಪು ಹಾಕದ ರೈತರು ಜಿಲ್ಲಾಧಿಕಾರಿ ಕಛೇರಿಗೆ ಸಹಸ್ರ ಸಂಖ್ಯೆಯಲ್ಲಿ ಯಶಸ್ವಿ ಮುತ್ತಿಗೆ ಹಾಕಿದ್ದರು. ಕರ್ನಾಟಕ ಪ್ರಾಂತ್ಯ ರೈತ ಸಂಘ ಮತ್ತು ಕೂಲಿಕಾರರ ಸಂಘ ಗಳ ನಾಯಕತ್ವದಲ್ಲಿ ನಡೆದ ಈ ಮುತ್ತಿಗೆ ಕಾರ್ಯಕ್ರಮಕ್ಕೆ ಎಸ್.ಎಫ್.ಐ, ಡಿವೈಎಫ್ಐ, ಜನವಾದಿ ಮಹಿಳಾ ಸಂಘ ಮತ್ತು ಸಿಐಟಿಯು ಬೆಂಬಲ ನೀಡಿದ್ದವು. ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆ ಹೊರಟ ರೈತರು ಜಿಲ್ಲಾಧಿಕಾರಿ ಕಛೇರಿಯನ್ನು ಸುತ್ತುವರಿದರು. ಕಬ್ಬು ಬೆಳೆಗಾರರ ಹೋರಾಟಗಳಲ್ಲಿ ಇದೊಂದು ಪ್ರಮುಖ ಹೋರಾಟವಾಗಿ ದಾಖಲಾಯಿತು. ಈ ಹಿಂದೆ ಮುಷ್ಕರ ನಿರತ ರೈತರ ಮೇಲೆ ಲಾಠಿ ಬೀಸಿದ ಜಿಲ್ಲಾಡಳಿತದ ಕ್ರಮದ ವಿರುದ್ಧ ಯಶಸ್ವಿ ಮಂಡ್ಯ ಬಂದ್‌ಗೂ ಈ ಸಂಘಟನೆಗಳು ಬೆಂಬಲ ನೀಡಿದ್ದವು.

ಇದು ಈ ವಾರದಲ್ಲಿ ಮಣ್ಣಿನ ಮಕ್ಕಳು ಬೀದಿಗಳಿದ ಆಕ್ರೋಶ, ಆಕ್ರಂದನ ಎಲ್ಲರ ಗಮನ ಸೆಳೆದ ನಿತ್ಯದ ನೋವು. ಸಿಹಿ ಕಬ್ಬು ಬೆಳೆದೂ ಕಹಿ ಅನುಭವಿಸುವವರತ್ತ ಎಲ್ಲರೂ ಒಮ್ಮೆ ಕಣ್ಣು ಹಾಯಿಸಬೇಕಿದೆ. ಹೃದಯಾಳ ಹೊಕ್ಕು ಸಂಕಟ ಹಕ್ಕಾಗಿ ಸಿಡಿಯಬೇಕಿದೆ.

ರೈತರ ಸಂಕಟದ ಮೂಲ

ಕಬ್ಬು ಬೆಳೆದು ಒಂದಷ್ಟು ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದ ಮಂಡ್ಯದ ರೈತರು ತತ್ತರಿಸಿ ಹೋಗಿದ್ದಾರೆ. ಕಬ್ಬು ಕಟಾವು ಸಮಯಕ್ಕೆ ಸರಿಯಾಗಿ ಮಂಡ್ಯದ ಸಕ್ಕರೆ ಕಾರ್ಖಾನೆಗಳೆಲ್ಲ ಒಂದಲ್ಲ ಒಂದು ನೆಪವೊಡ್ಡಿ ಕಾರ್ಖಾನೆಗಳಿಗೆ ಬೀಗ ಜಡಿಯುತ್ತಿವೆ. ವರ್ಷಂಪೂರ್ತಿ ಬೆಳೆದ ಕಬ್ಬು ಕಣ್ಣ ಮುಂದೆಯೇ ಬತ್ತಿ ಹೋಗುತ್ತಿದ್ದು, ಒಣಗಿ ಬೂದಿಯಾಗುತ್ತಿದೆ. ಸಾಲ ತಂದು ಬೆಳೆ ಬೆಳೆದು ಕಂಗಾಲಾಗಿರುವ ರೈತ ಕಬ್ಬಿಗೆ ಒದಗಿದ ದುಃಸ್ಥಿತಿ ತಾಳಲಾರದೆ ಅದಕ್ಕೆ ಬೆಂಕಿ ಹಚ್ಚಿಯೋ, ರಸ್ತೆಗೆ ಸುರಿದೋ ತನ್ನ ಸಂಕಟ ತೋಡಿಕೊಳ್ಳುತ್ತಿದ್ದಾನೆ. ತಮ್ಮ ಜೀವಮಾನದಲ್ಲೇ ಅನುಭವಿಸಿರದ ಸಂಕಟದ ಭಾರವನ್ನು ಹೊರಲಾರದೆ ಅವರು ಕುಸಿದು ಬೀಳುತ್ತಿದ್ದಾರೆ.

ಪಾತಾಳ ಕಂಡಿರುವ ಕಬ್ಬಿನ ಬೆಲೆ; ಬೆಳೆದು ನಿಂತಿರುವ ಕಬ್ಬನ್ನು ಅರೆಯದೆ ಮುಚ್ಚಿರುವ ಕಾರ್ಖಾನೆಗಳು, ಸಾಲ ತೀರಿಸುವಂತೆ ಒತ್ತಾಯಿಸುತ್ತಿರುವ ಲೇವಾದೇವಿಗಾರರು ಮತ್ತು ಬ್ಯಾಂಕುಗಳು, ಹಾಗೂ ಅಧಿಕಾರಕ್ಕಾಗಿ ಕೆಸರಾಟ ಆಡುತ್ತಾ ಕಾಲ ಕಳೆದ ಆಳುವ ಪಕ್ಷಗಳ ಉದಾಸೀನತೆ, ಇವೆಲ್ಲವುಗಳು ಸೇರಿಕೊಂಡು 'ಸಾವಿನ ದೇವತೆ' ಮಂಡ್ಯದ ರೈತರನ್ನು ಭರ್ಚಿ ಹಿಡಿದು ಸುತ್ತಲೂ ತಿವಿಯುತ್ತಿರುದೇನೋ ಎಂಬಂತೆ, ಹಿಂಸೆ ತಾಳಲಾರದ ರೈತರು ಒಬ್ಬೊಬ್ಬರಾಗಿ ಆತ್ಮಹತ್ಯೆಯ ಜಾಡು ಹಿಡಿದಿದ್ದಾರೆ.



ರೈತರ ಬೃಹತ್ ಪ್ರತಿಭಟನೆ

ಸುಮಾರು 45ಲಕ್ಷ ಟನ್ ಕಬ್ಬು ಬೆಳೆಯುವ ಮಂಡ್ಯ ಜಿಲ್ಲೆಯಲ್ಲಿ ಈ ಹಿಂದೆ ಬೆಲ್ಲದ ಗಾಣಗಳಲ್ಲಿ 10ರಿಂದ 15ಲಕ್ಷ ಟನ್ ಕಬ್ಬು ಅರೆಯಲಾಗುತ್ತಿತ್ತು. ಬೆಲ್ಲಕ್ಕೆ ಕನಿಷ್ಟ ಬೆಂಬಲ ಬೆಲೆ ಸಿಗದ ಕಾರಣ ಬಹುತೇಕ ಗಾಣಗಳೆಲ್ಲ ಇತರೆ ಗುಡಿಕೈಗಾರಿಕೆಗಳಂತೆ ಮುಚ್ಚಿಹೋದವು.

ಆಳುವ ಪಕ್ಷಗಳ ವ್ಯವಸ್ಥಿತ ಸಂಚು:

ಕಬ್ಬು ಬೆಳೆಗಾರರು ಇಂದು ಎದುರಿಸುತ್ತಿರುವ ಸಮಸ್ಯೆಗಳು ಇವತ್ತು ಧುತ್ತನೆ ಎರಗಿ ಬಂದವಲ್ಲ. ಕಳೆದ ಹದಿನೈದು ವರ್ಷಗಳಿಂದ ಆಳ್ವಿಕೆ ನಡೆಸುತ್ತಾ ಬಂದಿರುವ ಆಳುವ ಪಕ್ಷಗಳು ರೈತರ ಹಿತಾಸಕ್ತಿ ಕಡೆಗಣಿಸಿ ಸಕ್ಕರೆ ಆಮದು ಮಾಡಿಕೊಳ್ಳುತ್ತಿವೆ. ಮತ್ತೊಂದೆಡೆ, ಖಾಸಗಿ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಕೈಜೋಡಿಸುತ್ತಾ ಬಂದಿವೆ. ಸಹಕಾರಿ ಮತ್ತು ಸರ್ಕಾರಿ ಸಕ್ಕರೆ ಕಾರ್ಖಾನೆಗಳನ್ನು ವ್ಯವಸ್ಥಿತವಾಗಿ ಖಾಸಗಿಯವರ ಕೈಗೆ ಹಸ್ತಾಂತರ ಮಾಡುತ್ತಾ ಬಂದಿರುವ ಸರ್ಕಾರದ ಬಂಡವಾಳಗಾರರ ಪರ ಧೋರಣೆಯು ಗೊತ್ತಿರುವಂತದೆ. ಸರ್ಕಾರದ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಂದಾಗಿ ದೇಶದಾದ್ಯಂತ ಸಾರ್ವಜನಿಕ ಸಕ್ಕರೆ ಉದ್ಯಮವು ಹಿನ್ನಡೆ ಕಂಡಿದ್ದರೂ ಖಾಸಗಿ ಉದ್ದಿಮೆಗಳು ಸಕ್ಕರೆ ತಯಾರಿಕೆಯೊಂದಿಗೆ ವಿದ್ಯುತ್ ಕೋಜನರೇಷನ್, ಎಥೆನಾಲ್ ಘಟಕ, ಇತ್ಯಾದಿಯನ್ನು ಒಳಗೊಂಡ ಸಮಗ್ರ ಆಧುನಿಕ ಕೈಗಾರಿಕಾ ಯೋಜನೆಗಳಿಂದ ಲಾಭ ಗಳಿಸುತ್ತಿವೆ. ಆದರೆ ಸರ್ಕಾರ ಇಂಥಹ ಆಧುನೀಕರಣ ಯೋಜನೆಗಳನ್ನು ಹಮ್ಮಿಕೊಳ್ಳದೆ ಸಾರ್ವಜನಿಕ ಸಕ್ಕರೆ ಉದ್ದಿಮೆಗಳು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಸ್ಪರ್ಧಿಸದಂತೆ ತಡೆಯೊಡ್ಡಿವೆ. ಹೀಗೆ ನಷ್ಟಹೊಂದಿದ ಉದ್ದಿಮೆಗಳನ್ನು ತಾನು ನಡೆಸಲು 'ನಾಲಾಯಕ್ಕು' ಎಂದು ಖಾಸಗಿಯವರಿಗೆ ವಹಿಸುತ್ತಾ ಬಂದಿದೆ.

ಕಬ್ಬು ಬೆಳೆಯ ಸುಪರ್ದಿಗಾಗಿ ಖಾಸಗಿಯವರ ಹಂಚಿಕೆ

ಮಂಡ್ಯದ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ಸರ್ಕಾರಿ ಸ್ವಾಮ್ಯದ ಮೈಷುಗರ್ ಕಾರ್ಖಾನೆಯು ಆ ಬಾಗದ ರೈತರಿಗೆ ಕೆಲಮಟ್ಟಿಗೆ ಉತ್ತಮ ಬೆಲೆ ನೀಡುವುದರೊಂದಿಗೆ ಸಮಯಕ್ಕೆ ಸರಿಯಾಗಿ ಕಬ್ಬು ಅರೆಯುತ್ತಿತ್ತು. ಈ ಕಾರ್ಖಾನೆ ನಿಗಧಿಪಡಿಸುವ ಕಬ್ಬಿನ ದರವನ್ನೇ ಸುತ್ತಲಿನ ಖಾಸಗಿ ಕಾರ್ಖಾನೆಗಳು ಅನುಸರಿಸುತ್ತಿದ್ದವು. ಮೊದಲಿಗೆ ಪಾಂಡವಪುರ ಸಹಕಾರಿ ಕಾರ್ಖಾನೆಯನ್ನು ಸರಿಯಾಗಿ ನಿಭಾಯಿಸಲಾಗದ ಸರ್ಕಾರ ಕೊಠಾರಿ ಕಂಪನಿಗೆ ವಹಿಸಿಕೊಟ್ಟಿತು. ಮೈಷುಗರ್ ಕಾರ್ಖಾನೆಯು ಕತ್ತು ಹಿಸುಕಿದರಷ್ಟೆ ಇಡೀ ಮಂಡ್ಯ ಜಿಲ್ಲೆಯ ಕಬ್ಬು ಬೆಳೆಯನ್ನು ತನ್ನ ಏಕಸ್ವಾಮ್ಯಕ್ಕೆ ತರಲು ಸಾಧ್ಯವೆಂಬುದು ಖಾಸಗಿ ಬಂಡವಾಳಿಗರಿಗೆ ಚೆನ್ನಾಗಿ ತಿಳಿದಿದೆ ಹಾಗೂ ಅದಕ್ಕೆ ಪೂರಕವಾಗಿ ಆಳುವ ಪಕ್ಷಗಳಾದ ಕಾಂಗ್ರೆಸ್, ದಳ ಮತ್ತು ಬಿಜೆಪಿಗಳ ಕೃಪಾಕಟಾಕ್ಷ ಅವುಗಳಿಗಿದೆ. ಇದಕ್ಕಾಗಿ ಎಸ್.ಸಿ.ಎಂ ಷುಗರ್ಸ್, ಚಾಮ್‌ಷುಗರ್ಸ್ ಮತ್ತು ಕೊಠಾರಿ ಷುಗರ್ಸ್ ಇನ್ನಿಲ್ಲದ ಯತ್ನ ನಡೆಸಿವೆ. ಮೈಷುಗರ್ ಕಾರ್ಖಾನೆಯ ಕಬ್ಬು ಬೆಳೆ ವ್ಯಾಪ್ತಿಯನ್ನು ಎಸ್.ಸಿ.ಎಂ ಷುಗರ್ಸ್ ಕಂಪನಿಗೆ ಬೃಹತ್ ಪ್ರಮಾಣದಲ್ಲಿ ಎಸ್.ಎಂ ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ವರ್ಗಾಯಿಸಲಾಯಿತು. ಕಳೆದ 20 ವರ್ಷಗಳಿಂದ ಮೈಷುಗರ್ ಕಾರ್ಖಾನೆಯ ಆಧುನೀಕರಣಕ್ಕೆ ಕಿಮ್ಮತ್ತು ನೀಡದೆ ಬಂದ ಸರ್ಕಾರಗಳ ಅಧಿಪತ್ಯವನ್ನು ವಹಿಸಿದ್ದವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ತಾವೆಲ್ಲ ಮಣ್ಣಿನ ಮಕ್ಕಳೆಂದು ಇಂದಿಗೂ ಬಿಂಬಿಸಿಕೊಳ್ಳುತ್ತಿರುವವರೇ.

ಸಾರ್ವಜನಿಕ ಸ್ವಾಮ್ಯದ ಮೈಷುಗರ್ ಕಂಪನಿಯನ್ನು ತಕ್ಷಣವೇ ಆಧುನೀಕರಣಗೊಳಿಸಿ, ಕಬ್ಬು ಮತ್ತು ಬೆಲ್ಲಕ್ಕೆ ಕನಿಷ್ಟ ಬೆಂಬಲ ಬೆಲೆ ನಿಗಧಿಪಡಿಸುವುದರ ಮೂಲಕ ಕಬ್ಬು ಬೆಳೆಗಾರರ ಬಿಕ್ಕಟ್ಟನ್ನು ಶಮನಗೊಳಿಸುವತ್ತ ಸರ್ಕಾರ ಚಿಂತಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕಬ್ಬಿಗೆ ಟನ್‌ವೊಂದಕ್ಕೆ ರೂ. 1,100/- ಮತ್ತು ಬೆಲ್ಲಕ್ಕೆ ಕ್ವಿಂಟಾಲ್‌ವೊಂದಕ್ಕೆ ರೂ. 1;500/- ಗಳನ್ನು ನಿಗಧಿಪಡಿಸಬೇಕೆಂದು ಆಗ್ರಹವಿದೆ. ತಕ್ಷಣವೇ ಕಾರ್ಖಾನೆ ಪುನರಾರಂಭಿಸಲು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಭರವಸೆ ನೀಡಿದ್ದರೂ ಕಬ್ಬು ಬೆಳೆಗಾರರಿಗೆ ನ್ಯಾಯ ಒದಗಿಸುವವರೆಗೆ ಮುಂದಿನ ಹೋರಾಟಗಳನ್ನು ರೂಪಿಸಲು ಚಳುವಳಿಯನ್ನು ತೀವ್ರಗೊಳಿಸುವುದೊಂದೇ ರೈತರ ಮುಂದಿರುವ ಆಯ್ಕೆ. ರಾಜ್ಯಪಾಲರು ಇತ್ತ ತಿರುಗಿ ನೋಡುವರೇ?

ಶರಣಾಗತಿ : ವಿಶಿಷ್ಟ 'ಮಾವೋ'ವಾದಿ ಶೈಲಿ

ಭಾರತೀಯ 'ಮಾವೋವಾದಿ'ಗಳಿಗೂ ಶರಣಾಗತಿಗೂ ಏನೋ ವಿಶೇಷ ನಂಟು ಇದ್ದಂತಿದೆ. ಆಂಧ್ರ ಪ್ರದೇಶದ ಮತ್ತಷ್ಟು ಮಾವೋವಾದಿಗಳು ಸರ್ಕಾರಕ್ಕೆ ಶರಣಾಗಿದ್ದಾರೆ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ಇಂಥದ್ದು ಬಹಳ ನಡೆಯುತ್ತಿರುವುದರಿಂದ ಇದರಲ್ಲೇನು ವಿಶೇಷ ಅಂತ ಕೆಲವರಿಗೆ ಅನಿಸಬಹುದು. ಆದರೆ ಇಲ್ಲೊಂದು ವಿಶಿಷ್ಟವಾದ ವರದಿ ಇದೆ.

ಶ್ರೀನು ಅನ್ನುವಾತ ಶಸಸ್ತ್ರ 'ಮಾವೋ' ವಾದಿ ತಂಡದ ಸದಸ್ಯನಾಗಿದ್ದ. ಕ್ರಾಂತಿಯತ್ತ ಮುನ್ನುಗ್ಗುವ ಎಂದಿನ ತಮ್ಮ ನಕ್ಸಲ್‌ಬಾರಿ ದಾರಿಯಲ್ಲಿ ಹಲವಾರು ಕಗ್ಗೊಲೆಗಳಲ್ಲಿ ಆತ ಭಾಗಿಯಾಗಿದ್ದ; 2005ರಲ್ಲಿ ಕಾಂಗ್ರೆಸ್ ಮುಖಂಡ ಮುದುಲರಾವ್ ಹತ್ಯೆಯಲ್ಲಿ ಈತ ಭಾಗಿಯಾಗಿದ್ದನಂತೆ. ಮತ್ತೊಬ್ಬ ರೇಷನ್ ಶಾಪ್ ಡೀಲರ್ ನರಸಿಂಹ ಎಂಬುವವರ ಹತ್ಯೆಯಲ್ಲೂ ಈತನ ಪಾತ್ರ ಇತ್ತಂತೆ. ಹಿಂದೆ ಮೆಹಬೂಬ್ ನಗರದ ಅಮಂಗಲ್ ಮಂಡಲ್ ಪರಿಷತ್ ಅಧ್ಯಕ್ಷ ಪಂತು ನಾಯಕ ಹತ್ಯೆಯಲ್ಲೂ ಈತ ಭಾಗಿ ಎಂಬ ಆರೋಪಗಳಿವೆಯಂತೆ.

10 ವರ್ಷಗಳ ಹಿಂದೆ ಲಕ್ಷ್ಮಿಪುರ ಎಂಬ ಗ್ರಾಮದಲ್ಲಿ ನಕ್ಸಲೀಯರು ನೆಲ ಬಾಂಬ್ ಸ್ಫೋಟಿಸಿ ಪೋಲೀಸರ ಮೇಲೆ ದಾಳಿ ಮಾಡಿ ಒಬ್ಬ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ಹಾಗೂ 4 ಜನ ಪೋಲಿಸ್ ಪೇದೆಗಳನ್ನು ಕೊಂದು ಹಾಕಿ ಶಸ್ತ್ರಗಳನ್ನು ಅಪಹರಿಸಿದ್ದ ಪ್ರಕರಣದಲ್ಲಿ ದೊರೆತಿದ್ದ ಎ.ಕೆ.47 ಆಯುಧವೊಂದು ಈತನ ಬಳಿಯಲ್ಲಿ ಇತ್ತಂತೆ.

ನಕ್ಸಲ್‌ವಾದಿ ಸಶಸ್ತ್ರ ಕ್ರಾಂತಿಯ ಹಾದಿಯಲ್ಲಿ ಇಷ್ಟೊಂದು 'ಸಾಧನೆ'ಗೈದರೂ ಕ್ರಾಂತಿಯ ಗುರಿ ತಲುಪಲಾಗಲಿಲ್ಲವಲ್ಲ;. ಪಾಪ ನಿರಾಶೆ ಸಹಜವೇ ತಾನೆ? .ಅದೂ ತನ್ನ ಹಿರಿಯ, ಕಿರಿಯ ಜೊತೆಗಾರರೆಲ್ಲ ಸಾಲು ಸಾಲಾಗಿ ಸರ್ಕಾರಕ್ಕೆ ಶರಣು ಬೀಳುತ್ತಿರುವಾಗ ಈತನಾದರೂ ಏನೂ ಮಾಡಿಯಾನು? ತಾನು ಅದೇ ದಾರಿಯಲ್ಲಿ ಸಾಗಿ ಸರ್ಕಾರಕ್ಕೆ ಶರಣು ಹೇಳಲು ಸಿದ್ಧನಾದ.

ಇಲ್ಲೇ ಇರುವುದು ವಿಶೇಷ

ಶರಣಾಗುವ ಮುಂಚೆ ಒಂದೇ ಒಂದು 'ಕ್ರಾಂತಿಕಾರಿ' ಕೆಲಸವನ್ನು ಮುಗಿಸಿಯೇ ಬಿಡೋಣ ಎಂದುಕೊಂಡು ತೀರ್ಮಾನಿಸಿ ಬಿಟ್ಟ. ಇವನಿಗೆ ತಕ್ಕ ಜೊತೆಗಾರರು ಸಿಕ್ಕರು. ಮಾವೋವಾದಿ ಪಕ್ಷದ ಮೆಹಬೂಬನಗರ ಜಿಲ್ಲಾ ಸಮಿತಿಯ ಸದಸ್ಯ ಶ್ಯಾಮ್ ಮತ್ತು ಶಸಸ್ತ್ರ ತಂಡದ ಸದಸ್ಯ ಶೇಖರ್ ಎಂಬುವವರು ಶ್ರೀನುವಿನಂತೆ ಸರ್ಕಾರಕ್ಕೆ ಶರಣಾಗಲು ತುದಿಗಾಲಲ್ಲಿ ನಿಂತಿದ್ದರು. ಈ ಮೂವರೂ ಸೇರಿ ಒಟ್ಟು ಐದು ಜನರಿಂದ ಶರಣಾಗತಿಯ ನಂತರದ ಜೀವನಕ್ಕೆ ಸಾಕಷ್ಟು 'ನಿಧಿ ಸಂಗ್ರಹ' ಮಾಡಿಕೊಂಡರು.

ಜನವರಿ 2, 2007ರಂದು ಶ್ಯಾಮ್ ಶೇಖರ್ ಇಬ್ಬರು ಸರ್ಕಾರಕ್ಕೆ ಶರಣಾಗಿಬಿಟ್ಟರು. ಕ್ರಾಂತಿಕಾರಿ ಶ್ರೀನು ಸಹ ನಂತರ ಪೋಲೀಸರಿಗೆ ಶರಣಾದ. ಶರಣಾದ ಶ್ರೀನುವನ್ನು ತತ್‌ಕ್ಷಣವೇ ಪೋಲಿಸರು ಬಂಧಿಸಿ ಎಳೆದೊಯ್ದರು. ಶರಣಾಗತಿ ಎಂದಿದ್ದದ್ದು ಬಂಧನ ಎಂದಾಯಿತು ಯಾಕೆ?

ಏಕೆಂದರೆ ಶ್ರೀನು ಶರಣಾಗತಿಯ ಕೊನೆಗೊಳಿಗೆಯಲ್ಲಿ ಮತ್ತೊಂದು 'ನಿಧಿ ಸಂಗ್ರಹ'ಕ್ಕೆ ಕೈ ಹಾಕಿದ್ದಾನೆ. ಜಿಲ್ಲೆಯ ಉದ್ಯಮಿಯೊಬ್ಬರ ತಲೆಗೆ ಬಂದೂಕಿನ ಗುರಿ ಇಟ್ಟು ಅವರಿಂದ 10 ಲಕ್ಷ ರೂಪಾಯಿ ನಿಧಿ ಸಂಗ್ರಹ ಮಾಡಿದ್ದ ಶ್ರೀನು ಶರಣಾಗಿ ಬಿಡುವ ಮುಂಚೆ ಹೇಗಾದರೂ ಮತ್ತೆ 10 ಲಕ್ಷ 'ಸಂಗ್ರಹ' ಮಾಡಿಕೊಳ್ಳಲು ಮತ್ತೆ ಅದೇ ಉದ್ಯಮಿಗೆ 'ಮನವಿ' ಸಲ್ಲಿಸಿದ್ದನಂತೆ.

ಇದನ್ನೆಲ್ಲಾ ನೋಡುವಾಗ ಇನ್ನೇನು ಅಧಿಕಾರ ಹೋಗುತ್ತದೆ ಎನ್ನುವ ಘಟ್ಟದಲ್ಲಿ ನಮ್ಮ ಮಂತ್ರಿ, ಮಹೋದಯರು ಯಾವ ಯಾವುದೋ ಸಿಕ್ಕ ಸಿಕ್ಕ ಯೋಜನೆಗಳಿಗೆ ಮಂಜೂರಾತಿ ನೀಡಿ ಫಲಾನುಭವಿಗಳಿಂದ ಅಜೀರ್ಣವಾಗುವಷ್ಟು ಲಂಚ ಮುಕ್ಕಿದ ಪ್ರಕರಣಗಳು ನೆನಪಿಗೆ ಬರುತ್ತವೆ. ಅಲ್ಲವೇ?

ಪುಸ್ತಕ ಪ್ರೇಮದ ಭಿನ್ನತೆಗಳು

ಒಬ್ಬ ವ್ಯಕ್ತಿಯ ಬಳಿಯಿರುವ ಪುಸ್ತಕಗಳ ಸಂಗ್ರಹವನ್ನು ನೋಡಿ ಆತ ಎಂತಹ ವ್ಯಕ್ತಿ ಎಂದು ಹೇಳಬಹುದು ಎಂಬ ಪ್ರಸಿದ್ಧ ಮಾತೊಂದಿದೆ. ಇದೇ ಮಾತನ್ನು ವಿವಿಧ ಪ್ರದೇಶಗಳಲ್ಲಿ ಆದ-ಆಗುವ ಪುಸ್ತಕ ಮಾರಾಟಕ್ಕೆ ಅನ್ವಯಿಸಿ ಹೇಳಿದರೆ ಯಾವ ಅರ್ಥ ಹೊರಡಬಹುದು?

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಆಗುವ ಮತ್ತು ಆದ ಪುಸ್ತಕಗಳ ವ್ಯಾಪಾರದ ಪ್ರಮಾಣವನ್ನು ನೋಡಿ ಅಲ್ಲಿಯ ಜನರ ಅಭಿರುಚಿ, ಪುಸ್ತಕಕೊಳ್ಳುವ ಸಂಸ್ಕೃತಿಗಳನ್ನು ಅಲ್ಲಿನ ಜನರ ಕೊಂಡುಕೊಳ್ಳುವ ಶಕ್ತಿ, ಅಲ್ಲಿನ ಸಾಕ್ಷರತೆ, ಅಲ್ಲಿನ ಸಾಮಾಜಿಕ ಪ್ರಗತಿಯನ್ನು ಅಳೆಯಬಹುದೇ?

ಈ ಬಗ್ಗೆ ಸಣ್ಣ ಚಿಂತನೆ ಇಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ಹತ್ತೆಂಟು ಬಗೆಯ ವೈವಿಧ್ಯಮಯವಾದ, ಮತ್ತು ಸಾಕಷ್ಟು ಉತ್ತಮವೂ ಆದ ಪುಸ್ತಕಗಳು ಪ್ರಕಾಶನ ಕಂಡು ಬೆಳಕಿಗೆ ಬರುತ್ತಿರುವುದನ್ನು ಪುಸ್ತಕ ಪ್ರೇಮಿಗಳೆಲ್ಲ ಗಮನಿಸಿದ್ದಾರೆ. ಪುಸ್ತಕಗಳು ಕೇವಲ ಪ್ರಕಾಶನ ಮಾತ್ರ ಕಾಣುತ್ತಿಲ್ಲ. ವಿವಿಧ ಪುಸ್ತಕ ಮೇಳ, ಪ್ರದರ್ಶನಗಳಲ್ಲಿ ಜನರು ಮುಗಿಬಿದ್ದು ಪುಸ್ತಕಗಳನ್ನು ಕೊಂಡುಕೊಳ್ಳುವುದೂ ಸಹ ಕಂಡು ಬರುತ್ತಿದೆ. ಲೇಖಕರಿಗೂ, ಪ್ರಕಾಶಕರಿಗೂ ಪುಸ್ತಕ ಮಾರಾಟಗಾರರಿಗೂ ಮತ್ತು ಸಮಾಜದ ಹಿತವನ್ನು ಬಯಸುವ ಎಲ್ಲರಿಗೂ ಇದು ಸಂತೋಷದ ವಿಷಯವೇ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಪುಸ್ತಕ ಮೇಳ ಬಾರಿ ಯಶಸ್ಸು ಕಂಡಿತು. ಪ್ರತಿವರ್ಷ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಮುಖ್ಯವಾಗಿ ಪುಸ್ತಕ ಖರೀದಿಗಾಗಿಯೇ ಅಲ್ಲಿಗೆ ಬರುವ ಪುಸ್ತಕ ಪ್ರೇಮಿಗಳಿರುತ್ತಾರೆನ್ನಿ. 73ನೇ ಕನ್ನಡ ಸಾಹಿತ್ಯ ಸಮ್ಮೇಳನ ಶಿವಮೊಗ್ಗದಲ್ಲಿ ನಡೆದಾಗ ಉತ್ತಮ ಪುಸ್ತಕ ಮಾರಾಟ ದಾಖಲಾಯಿತು.

ಆದರೆ ಯಾಕೋ ಏನೋ 74ನೇ ಸಾಹಿತ್ಯ ಸಮ್ಮೇಳನ ಉಡುಪಿಯಲ್ಲಿ ನಡೆದಾಗ ಪುಸ್ತಕ ಮಾರಾಟ ಮಳಿಗೆಗಳು ಭಣ ಗುಟ್ಟಿದವು. ಅ[…] ಸಾಹಿತ್ಯಕ್ಕಿಂತ, ಭೋಜನವೇ ಬಹು ಆಕರ್ಷಣೆ[…] ವಿಷಯವಾಗಿತ್ತು ಎಂಬುದು ಈಗಾಗಲೇ ಹಳೆ[…] ಮಾತಾಯ್ತು. ಕರಾವಳಿಯಲ್ಲಿ ಇದೊಂದ[…] ಕಾರ್ಯಕ್ರಮವಲ್ಲ. ಮೂಡಬಿದರೆಯಲ್ಲಿ ನಡೆಯು[…] ಆಳ್ವಾಸ್ ನುಡಿಸಿರಿಯಲ್ಲೂ ಮೊನ್ನೆ ಇದೇ ಅನುಭ[…] ಜನ ಬಂದಿಲ್ಲವೆಂದಲ್ಲ. ಈ ಕಾರ್ಯಕ್ರಮಗ[…] ಜನದಂಡಿಯಾಗೇ ಹರಿದು ಬಂದಿದ್ದಾರೆ. ಆದ[…] ಪುಸ್ತಕಗಳು ಮಾರಾಟ ಅಷ್ಟಕ್ಕಷ್ಟೆ.

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಅದರಲ[…] ಉಡುಪಿ, ದಕ್ಷಿಣ ಕನ್ನಡಗಳಲ್ಲಿ ಇತರ ಜಿಲ್ಲೆಗಳ[…] ಹೋಲಿಸಿದರೆ ಸಾಕ್ಷರತೆಯೂ ಹೆಚ್ಚು. ಜನರ ಜೀವ[…] ಮಟ್ಟ- ಅಂದರೆ ಕೊಂಡುಕೊಳ್ಳುವ ಶಕ್ತಿಯೂ ಹೆ[…] ಆದರೂ ಯಾಕೆ ಹೀಗೆ. ವಿಷಯ ಬಲ್ಲ ತಜ್ಞ[…] ಯೋಚಿಸಬೇಕಿದೆ.

ಕರಾವಳಿಯ ಜನರಲ್ಲಿ ವ್ಯಾಪಾರಿ ಮನೋಭಾ[…] (Business mind) ಜಾಸ್ತಿ. ಅದಕ್ಕಾಗೇ ಪುಸ್[…] ಓದುವ ಹವ್ಯಾಸ ಕಡಿಮೆ ಎಂದ[…] ಹೇಳುವವರಿದ್ದಾರೆ. ಸಾಮಾಜಿಕ ಅಂಧಶ್ರದ[…] ಸಾಂಪ್ರದಾಯಿಕ ಮನಸ್ಥಿತಿಗಳೂ, ಮತ್ತು ಇತ್ತೀಚ[…] ಕರಾವಳಿಯನ್ನು ಆವರಿಸಿಕೊಂಡಿರು[…] ಕೋಮುವಾದಿ ಚಿಂತನೆಗಳು ಜನರನ್ನು ಪುಸ್ತಕಗಳಿಂ[…] ವಿಮುಖಗೊಳಿಸುತ್ತಿವೆಯೇ? ಗೊತ್ತಿಲ್ಲ. ಸರಿಯಾ[…] ಪರಿಶೀಲಿಸಬೇಕಿದೆ.

ಪುಸ್ತಕಗಳ ಮಳಿಗೆಗೆ ಬರುವ ಹಲವು ಜನ[…] ದುರ್ಗಾಸ್ತೋತ್ರ ಮತ್ತು ಭೈರಿಗೆ ಭೈರಪ್ಪನವ[…] ಕಾದಂಬರಿ ಮುಂತಾದ ಪುಸ್ತಕಗಳನ್ನು ಮಾತ್ರ ಕೇಳು[…] ಪರಿ ನೋಡಿದರೆ ಇದು ನಿಜವೇ ಇರಬಹುದೇನು[…] ಅನಿಸುತ್ತದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ಕನ್ನಡ ಪು[…] ಪ್ರಾಧಿಕಾರ ವ್ಯವಸ್ಥೆ ಮಾಡಿದ್ದ ಪುಸ್ತಕ ಮೇಳದ[…] ಮಿಶ್ರಫಲ. ಅಂದರೆ ದೊಡ್ಡ ದೊಡ್ಡ ಪ್ರಕಾಶನಗಳ[…] ವ್ಯಾಪಾರ ಆಗಿದ್ದರೆ, ಸಣ್ಣ ಪ್ರಕಾಶನ, ಸ[…] ವ್ಯಾಪಾರಸ್ಥರಿಗೆ ಅಷ್ಟಕ್ಕಷ್ಟೆ ಅಂತೆ.

'ಕಳ್ರು ಪಾರಿನ್ನೀಗೇನಾರ ಓಗ್ ಬಂದಿದ್ರಾ?'

'ಥೂ, ತು, ತು... ಬಾಳ ಅನ್ಯಾಯ. ಬಾಳ ಅನ್ಯಾಯ ಕನ್ಲಾ ತಮ್ಮ'

'ಏನ್ಲಾ ಚಿಕ್ಕ ಯಾವಾಗ್ ನೋಡಿದ್ರು ಅನ್ಯಾಯ ಅನ್ಯಾಯ ಅಂತಿರ್ತಿಯ'

'ಅಲ್ಲಿ ನೋಡಾಕೊಳ್ಳೆ ಕೆಂಪ್ ಕೆಂಪುಗೌರೆ. ಆಟಾನೂ ಚೆನ್ನಾಗ್ ಆಡ್ತಾರೆ. ಅವ್ರೀಗ್ಯಾಕಪ್ಪ ಬೇಕಿತ್ತು ಇಂತ ನಾಚಿಕೆಟ್ಟ ಕೆಲ್ಸ ಅಂತ'

'ಲೇ ಚಿಕ್ಕ ಯಾವ ಇಸ್ಯ ಅಂತ ಏಳಿ ಮಾತಾಡ್ಲ, ಇಂಗೆ ತಲೆ ಬುಡ ಇಲ್ದಂಗೆ ಏಳಿದ್ರೆ ನಂಗೇನ್ ಗೊತ್ತಾಯ್ತದೆ'?

'ತಮ್ಮಣ್ಣ ನಿನ್ಗೆ ಎಣ್ಣೆ ಒಂದ್ ಬುಟ್ರೆ, ಬ್ಯಾರೆ ಪರಪಂಚಾನೇ ಇಲ್ಲ. ಕಿರಿಕೆಟ್ ಇಚಾರ ಕನ್ಲಾ ನಾನು ಏಳ್ತಿರದು'

'ಏನಾಯ್ತೀಗ?'

'ಬಾಳ ಅನ್ಯಾಯ ಕನ್ಲಾ ಬಾಳ ಅನ್ಯಾಯ. ಅವನ್ಯಾವನೋ ಬಕ್ರ ಅನ್ನೋನ ಅಂಪೇರಾಗಿ ಮಡಿಕ್ಕಂಡು ನಮ್ ಉಡುಗ್ರುನ್ನೆಲ್ಲ, ಸುಮ್ ಸುಮ್ಕೆ ಔಟ್ ಕೊಡಿಸವರೆ ಆಸ್ಟ್ರೇಲಿಯಾ ದೇಸದೋರು. ನಮ್ಮ ಬಜ್ಜಿ ಮೇಲೆ ಅದೆಂತದೋ ಕೇಸ್ ಬೇರೆ ಆಕವರಂತೆ'

'ಥತ್ ಆಳಾಗಿ ಓಗ್ಲಿ ಬುಡ್ಲಾ ಚಿಕ್ಕ. ನಮ್ದೇ ಆಸ್ಗೊಂಡು, ಒದ್ಗೊಳೊ ಅಸ್ಟು ಇವೆ, ಈ ಕೆಲಸಕ್ಕೆ ಬಾರದ ಕಿರಿಕೆಟ್ ಇಚಾರ ಯಾಕ್ಲ ನಮ್ಗೆ?

'ಅಂಗಂತ ಯಡೂರಪ್ಪನ ಇಚಾರ ಏಳಿದ್ರೂ ನೀನು ಉಗಿತೀಯ, ಆಡಿದ್ದೇ ಆಡ್ತಿಯಾ ಅಂತ' ಆದ್ರೂ ನುವೆ ಪಾಪ, ಟೆನ್‌ಸನ್ ಜಾಸ್ತಿ ಆಯ್ತಾ ಐತಂತೆ ಅವ್ರ್‌ಗೆ'

'ಯಾವಾಗ್ಲೂ ಟೆನ್‌ಸನ್ ಮನ್‌ಶಾನೇ ಅವ್ರು ಅದ್ರಲ್ಲೇನು ಇಸೇಸ?'

'ಇಂಗೇ ಎಲೆಕ್ಸನ್ ಲೇಟಾಗಿ, ಬೇರೆ ಬೇರೆ ಕತೆಗಳು ನಡೀತಿದ್ರೆ ಇವರ ಮೇ ಹನುಪಂಕ ಐಸ್‌ಕ್ರೀಮು ಕರಗಿ ಓದಂಗೆ ಕರಗಿ ಓಯ್ತದೆ ಅಂತ'

'ಆಹಹ, ಹನುಪಂಕ ಅಲ್ಲ ಕನ್ಲಾ, ಅನುಪಂಕ, ಥತ್ ಅಲ್ಲಲ್ಲ, ಅನುಕಂಪ, ಯಾರುಗ್ಲಾ ಐತೆ? ಆ ಇಸ್ಯ ಬುಡು ಅದೇನೋ ಬೇರೆ ಕತೆ ಅಂದ್ಯಲ್ಲ ಅದೇಳು'

'ಯಾರೋ ಬಸ್ ಸ್ಟಾಂಡಲ್ಲಿ ಮಾತಾಡ್ ಕೋತಿದ್ರಪ್ಪ'

'ಏನಂತ'

'ನೋಡು ಸನ್ಯಾಸಿಗಳು ಅಧಿಕಾರಕ್ಕೆ ಎಂಗೆ ಜುಟ್ಟು ಜುಟ್ಟು ಇಡ್ಕಂಡು ವಡದಾಡತಾವ್ರೆ. 'ನಾನು ಕೊಡಾಕಿಲ್ಲ' ಅಂತ ಅವ್ರು. 'ನಾನು ಬಿಡಾಕಿಲ್ಲ' ಅಂತ ಇವ್ರು, ಕೋರ್ಟು, ಕಛೇರಿ ಎಲ್ಲಾಕೂ ಸೈ. ತೊಡೆ ತಟ್ಟಿ ಸಡ್ಡು ಒಡೆದು ನಿಂತೌವ್ರೆ. ಒಳ್ಳೆ ಜಟ್ಟಿಗಳ ತರ, ಯಡೂರಪ್ಪ ನೋಡಿ ಕಲೀಬೇಕು, ಕುಮಾರಸಾಮಿ ಕೊಡಾಕಿಲ್ಲ ಅಂದ ತಕ್ಷಣ, 'ಅಯ್ಯೋ ಕೊಡಾಕಿಲ್ವಂತೆ' ಅಂತ ಅಳ್ಕೋತ ಓದ್ರು ಹನುಪಂಕ ಉಡಿಕ್ಕಂಡು.

'ಯಾಕ್ರಲಾ ಕೊಡಾಕಿಲ್ಲ?' ಅಂತ ಮೀಸೆ ತಿರುವಿ ಕೇಳಕ್ಯಾಗ್ಲಿಲ್ವ?' ಕೊಲ್ಬಿಗೋಯ್ತಿನಿ ಅಂತ ಏಳಿ ಕೋಲ್ಬಿಗೋಗಕ್ಯಾಗಲಿಲ್ವ'? ಅಂತ ಇಂಗೇ ಇನ್ನೂ ಏನೇನೋ ಅಂತಿದ್ರಪ್ಪ'

'ಅಂಗಾದ್ರೆ ಈಗ ಜನಗಳಿಗೆ ಅನುಕಂಪ ಎಲ್ಲ ಉಡುಪಿ ಸ್ರೀ ಕ್ರಿಸ್ನನ ಮೇಲೆ ತಿರುಗೈತೆ ಅಂತಿಯೇನ್ಲಾ ಚಿಕ್ಕ?'

'ಸ್ರೀ ಕಿಸ್ನನಿಗೆ ಏನೂ ಕಮ್ಮಿ ಆಗಿಲ್ಲ. ಇನ್ನೂ […] ಜಾಸ್ತಿ ಪೂಜೆ ನಡೀತ್ಯತೆ, ಪಾಪ ಆ ಮೇಲ್[…] ಕೋಟೆ ಯೋಗಾ ನರಸಿಮ್ಮನ ಮೇಲೆ ಅನುಕಂಪ[…] ಮಾಡ್ಬೇಕು',

'ಯಾಕ್ಲ ಚಿಕ್ಕ ಅವ್ನಿಗೇನಾತು?'

'ಕಳ್ರು ಯೋಗಾ ನರಸಿಮ್ಮನ ಗುಡಿ ಒಳೀಕ[…] ನುಗ್ಗಿ ವಡವೆ ಗಿಡವೆ ಎಲ್ಲ ಎತ್ಗೊಂಡೋಗ್ರವರೇ[…] ಅವ್ನಿಗೆ ಮೂರು ನಾಮ ಬುಟ್ಟು ಇನ್ನೇನೂ[…] ಉಳಿಸಿಲ್ಲ ಕನ್ಲಾ ತಮ್ಮ'

'ಆ ಕಳ್ರು ಪಾರಿನ್ನಿಗೇನಾರ[…] ಓಗ್‌ಬಂದಿದ್ರೇನ್ಲಾ ಚಿಕ್ಕ'?

'ಇನ್ನೂ ಕಳ್ರು ಸಿಕ್ಕಿಲ್ಲ, ಯಾರೋ[…] ಅಲ್ಲಿಯೋರೋ ಅಂತೆ. ಆ ಕಳ್‌ನನ್ ಮಕ್ಳು[…] ಪಾರಿನ್ನಿಗೆಲ್ಲೋಯ್ತರೆ? ಅದಿರ್ಲಿ ಇದ್ರಾಗೆ ಪಾರಿನ್[…] ಇಚಾರ ಯಾಕ್‌ಬತ್ತು?'


'ವಡವೆ ವಸ್ತು ಓದ್ರೋಯ್ತು ಬುಡು, ಬಕ್ತರು[…] ದ್ಯಾವ್ರ ಮೇಲೆ ಅನುಕಂಪದಿಂದ ಇನ್ನಷ್ಟು ವಡವೆ[…] ವಸ್ತ್ರ ಕೊಡ್ತರೆ, ದ್ಯಾವ್ರುಗೆ ವಸಾದು ಸಿಕ್ಕಂಗಾತು-[…] ಆದ್ರೆ ಕಳ್ರು ಸಮುದ್ರದಾಚೆ ಪಾರಿನ್‌ಗೇನಾರ ಓಗ್[…] ಬಂದಿದ್ರೆ. ದ್ಯಾವರ 'ಮಡಿ' ಕೆಟ್ಟು ಮೈಲಿಗೆ ಆಗ್[…] ಬುಟ್ಟಿದ್ರೆ? ಮತ್ತೆ 'ಮಡಿ ತರಕ್ಯಾಯ್ತದ?'

'ಪರ್ವಾಗಿಲ್ಲ ಕನ್ಲಾ ಎಣ್ಣೆ ತಮ್ಮಣ್ಣ ನೀನೂ[…] ಬಾಳೆ ಧರ್ಮಸಾಸ್ತ್ರ ತಿಳ್ಕಂಡಿದೀಯಾ? ■

...ದೇಶ ಭಕ್ತರೂ !! ಶಾಂತಿ ರಕ್ಷಕರು !!!

ಈತ ಒಬ್ಬ ಹರಕು ಬಾಯಿಯ ಮನುಷ್ಯ. ...ತ ಬಹಿರಂಗ ಸಭೆಯಲ್ಲಿ ಒಮ್ಮೆ ಅಬ್ಬರಿಸುತ್ತಿದ್ದ. ...ವುದೋ ಯಕ್ಷಗಾನದ ರಾಕ್ಷಸ ...ತ್ರವೇನೋ ಅನಿಸುವಂತಿತ್ತು ಈತನ ಹಾವ ...ವ, ಇನ್ನೂ ದುಃಖದ ವಿಷಯವೆಂದರೆ ಆತ ...ಂತಿಯ ಬಗ್ಗೆ ಮಾತನಾಡುತ್ತಿದ್ದ. ಬಾಯಿಯ ...ುರಿನ ಮೈಕು ಒಡೆದು ಚೂರಾಗಬೇಕು ಈತನ ...ತು ಕೇಳಿ. ತಾವು, ತಮ್ಮ ಸಂಘಟನೆಯವರು ...ಂತಿ ರಕ್ಷಕರು ಶಾಂತಿಗಾಗಿ ಹೋರಾಡುತ್ತಿದ್ದೇವೆ ...ತ ಆತ ಒದರುತ್ತಿದ್ದ. ಆತನ ಭಾಷಣ ಕೇಳಿ ...ನೆಗೆ ವಾಪಸ್ಸಾಗುವವರು, ತಮಗೆ ಆಗದವರು ...ರಾದರೂ ಸಿಕ್ಕರೆ ಅವರ ಹೊಟ್ಟೆಗೆ ಚುಚ್ಚಿ ...ಶ್ರ'ವನ್ನು ಕೊಂದೇಬಿಡುತ್ತಾರೆ. ಶಾಂತಿಯ ...ವಾಗಿ ಅಷ್ಟು ಆವೇಶ ತುಂಬಬಲ್ಲ ಶಕ್ತಿ ...ಇದೆ. ಚುಚ್ಚುತ್ತಾರೇನೋ ಸರಿ, ...ಾವುದರಿಂದ ಚುಚ್ಚುತ್ತಾರೆ? ಹ್ಞಾಂ. ನಮ್ಮ ...ದಾಜು ಸರಿ. ತ್ರಿಶೂಲದಿಂದ ಚುಚ್ಚುತ್ತಾರೆ. ...ೂಲ ಎಲ್ಲಿಂದ ಬರುತ್ತದೆ ಇವರಿಗೆ. ...ೂಲವನ್ನು ಇದೇ ಇಂತಹ ಸಮಾರಂಭದಲ್ಲೇ ...ಚಲಾಗುತ್ತದೆ.

ಭೂಮಿಯು ತನ್ನ ಬಾಯಿಯಿಂದ ಒಡಲೊಳಗಿನ ಬೂದಿ, ಬೆಂಕಿಯನ್ನೆಲ್ಲಾ



ಕಾರುವಂತೆ ಈತ ವೇದಿಕೆಯ ಮೇಲೆ ನಿಂತು ವಿಷವನ್ನು ಕಾರುತ್ತಾನೆ. ಇಷ್ಟು ಹೇಳಿದ ಮೇಲೆ ಈತ ಯಾರು ಅಂತ ನಿಮಗೆ ಗೊತ್ತಾಗಿರಬೇಕು. ಹೌದು ಈ ದೂರ್ತನ ಹೆಸರೇ ಪ್ರವೀಣ ಮುತಾಲಿಕ್. ಈತ ಒಬ್ಬನೇ ಅಲ್ಲ. ಇದರ ಹಿಂದೆ ಒಂದು ಸಿದ್ಧಾಂತ. ಅದಕ್ಕಾಗಿ ಪ್ರಾಣ ಕೊಡಲು ಸಿದ್ಧ ಎಂದು ಬಾಯಲ್ಲಿ ಹೇಳುತ್ತಾ ಕೃತಿಯಲ್ಲಿ ಅಮಾಯಕರ ಪ್ರಾಣ ತೆಗೆಯಲು ಸಿದ್ಧವಾದ ತಂಡವೇ ಇದೆ. ಈತನದು ಶ್ರೀರಾಮಸೇನೆ ಅಂತ ಅದರ ಹೆಸರು. ಹೆಸರಿನ ಲೆಕ್ಕಕ್ಕೆ ಕೊಂಚ ಭಿನ್ನತೆ ಇದ್ದರೂ ಆರೆಸ್ಸೆಸ್‌ನಿಂದ ಹುಟ್ಟಿದ ವಿಷಬಳ್ಳಿಯೇ ಇದೂನು.

ಇದೆಲ್ಲಾ ಇರಲಿ ಈಗ ಇಷ್ಟೆಲ್ಲಾ ಯಾಕೆ ಹೇಳಿದ್ದು ಎಂದರೆ, ಈ ಮುತಾಲಿಕನ 'ಕರ್ಮಭೂಮಿ' ಬಾಗಲಕೋಟೆಯಲ್ಲೊಂದು ತ್ರಿಶೂಲ ದೀಕ್ಷೆ ಕಾರ್ಯಕ್ರಮ ನಡೆದಿದೆ. ನ್ಯಾಯಾಲಯ ಈ ತ್ರಿಶೂಲ ದೀಕ್ಷೆಯನ್ನು ನಿಷೇದಿಸಿತ್ತು. ಜಿಲ್ಲಾಡಳಿತ ಈ ಕಾರ್ಯಕ್ರಮಕ್ಕೆ ನಿರ್ಬಂಧ ಹಾಕಿತ್ತು. ಇವು ಅಧಿಕೃತ ಕ್ರಮಗಳು. ಒಳಗೊಳಗೆ ಯಾರ್‍ಯಾರು ಎಲ್ಲೆಲ್ಲಿ ಚಡ್ಡಿಗಳೊಂದಿಗೆ ಕೈಜೋಡಿಸುತ್ತಾರೆ ಎಂದು ಕಾರ್ಯಕ್ರಮ ಯಾವ ಅಡೆತಡೆ ಇಲ್ಲದೇ ನಡೆದು ಹೋಗಿರುವುದನ್ನು ನೋಡಿದರೆ ಅರ್ಥವಾಗುತ್ತದೆ. ಮುತಾಲಿಕನನ್ನು ಬಂಧಿಸಬಹುದು, ಕಾರ್ಯಕ್ರಮಕ್ಕೆ ತಡೆಯೊಡ್ಡಬಹುದು ಎಂಬ ಪ್ರಗತಿಪರ ನಿರೀಕ್ಷೆ ಹುಸಿಯಾಗಿ ಕೋಮುವಾದಿಗಳು ಕೇಕೆ ಹಾಕುತ್ತಾ ಕಾರ್ಯಕ್ರಮ ನಡೆಸೇಬಿಟ್ಟಿದ್ದಾರೆ. ಈ ನೆಲದಲ್ಲಿ ಕಾನೂನು - ಈ ದೇಶಕ್ಕೊಂದು ಸಂವಿಧಾನ ಇದೆ ಅನ್ನೋದನ್ನೇ ಜಿಲ್ಲಾಡಳಿತ ಮರೆತರೆ ಹೇಗೆ? ಕೋಮುವಾದಿಗಳ ಅಬ್ಬರ ಕುತಂತ್ರಗಳನ್ನು ಕಾಣಲಾರದಷ್ಟು ರಾಜಭವನ ವಿಧಾನಸೌಧದ ಸುತ್ತಲು ಮಂಕು ಆವರಿಸಿಬಿಟ್ಟಿದೆಯೇ? ಏನಿದರ ಸಮಾಚಾರ.

ಎಂದಿನಂತೆ ಕಾರ್ಯಕ್ರಮದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಬಗೆಗೆ ವಿಷ ಉಗುಳಿ ತ್ರಿಶೂಲ ಹಂಚಿದ್ದಾರೆ. ಈ ಸಂಬಂಧ ರಾಜ್ಯದ ಪ್ರಮುಖ ದಿನ ಪತ್ರಿಕೆಯೊಂದರಲ್ಲಿ ಬಂದ ವರದಿ ಮಾತ್ರ ಆಘಾತಕಾರಿಯಾದದ್ದು. 'ತ್ರಿಶೂಲ ದೀಕ್ಷೆಯಂತಹ ದೇಶಪ್ರೇಮಿ ಕಾರ್ಯಕ್ರಮಕ್ಕೆ ಮುಂಚೆ ಹಲವು ಆತಂಕಗಳು ಎದುರಾದರೂ ಕೊನೆಗೆ ಅದು ಯಾವುದೇ ಅಡ್ಡಿಯಿಲ್ಲದೇ ನಡೆದು ಶ್ರೀರಾಮಸೇನೆಯ ಕಾರ್ಯಕರ್ತರು ರಾಷ್ಟ್ರ ಪ್ರೇಮ ಮೆರೆದರು' ಎಂದಿದೆ ಪತ್ರಿಕೆ.


ಎಲ್ಲಿಯ ರಾಷ್ಟ್ರಪ್ರೇಮ! ಎಲ್ಲಿಯ ತ್ರಿಶೂಲ ದೀಕ್ಷೆ! ಪತ್ರಿಕೋದ್ಯಮ ಎತ್ತ ಹೊರಟಿದೆ. ದೇಶ ಎತ್ತ ಹೊರಟಿದೆ. ಬಾಗಲಕೋಟೆ ಮುಂದೆ ಬಾಗಲಕೋಟೆಯಾಗಿ ಉಳಿಯುತ್ತದೆಯೇ ಎಂಬ ಪ್ರಶ್ನೆ ಈಗ ಎದುರಾಗಿದೆ.

ಆಟೋ ಚಾಲಕರ ಮುಷ್ಕರ : ಏನು,ಯಾಕೆ?

ಜನವರಿ 11, 2008ರಂದು ಬೆಂಗಳೂರಿನ ...ಟೋರಿಕ್ಷಾ ಚಾಲಕರು ತಮ್ಮ ಹಲವು ...ೇಡಿಕೆಗಳಿಗಾಗಿ ಒತ್ತಾಯಿಸಿ ಒಂದು ದಿನದ ...ುಷ್ಕರ ನಡೆಸಿದರು. ಮುಷ್ಕರ ಬಹುತೇಕ ...ಶಸ್ವಿಯಾಯಿತು. ಅಂದರೆ ಬೆಂಗಳೂರಿನಲ್ಲಿ ...ಟೋಗಳು ನಿಂತವು. ಆಟೋರಿಕ್ಷಾ ಚಾಲಕರ ...ಘಟನೆ (ಎಆರ್‌ಡಿಯು) ಈ ಹೋರಾಟಕ್ಕೆ ಕರೆ ...ಡಿತ್ತು. ಕೆಲವು ಸಂಘಟನೆಗಳು ಮುಷ್ಕರಕ್ಕೆ ...ರೋಧ ಸೂಚಿಸಿದರೂ ಕೂಡ ಮುಷ್ಕರ ನಿಲ್ಲಲಿಲ್ಲ.

...ನಮ್ಮ ದಿನಪತ್ರಿಕೆಗಳನ್ನು ಒಮ್ಮೆ ತಿರುವಿ ...ಕಿದರೆ ಹೆಚ್ಚು ಕಡಿಮೆ ಪ್ರತಿದಿನವೂ ...ಂಗಳೂರಿನ ಒಂದಲ್ಲ ಒಂದು ರಸ್ತೆಯಲ್ಲಿ ...ಾಫಿಕ್ ಜಾಮ್ ಆಗಿ ವಾಹನಗಳು ಸಾಲುಗಟ್ಟಿ ...ತ ಚಿತ್ರಗಳು ಇದ್ದೇ ಇರುತ್ತವೆ. ಕೆಲವು ...ದೇಶಗಳಲ್ಲಿ ಗಂಟೆಗಟ್ಟಲೆ ವಾಹನಗಳು ...ಲ್ಲುವುದು, ಇಲ್ಲವೇ ತೆವಳುತ್ತಾ ಸಾಗುವುದು ...ಾಮೂಲಿ ಘಟನಾವಳಿಗಳು. ಇದರಿಂದ ...ರ್ವಜನಿಕರಿಗೆ ತೊಂದರೆಯಾಗುತ್ತದೆ. ...ರ್ವಜನಿಕರೆಂದರೆ ಯಾರು? ಸರ್ಕಾರಿ ...ಕರರು, ಶಾಲೆ, ಕಾಲೇಜು, ಕೋರ್ಟ್; ...ಛೇರಿ, ಬ್ಯಾಂಕು ಮಾರುಕಟ್ಟೆಗಳಿಗೆ ...ಡಾಡುವವರು ಮಾತ್ರವೇ ನಮ್ಮ ಮನಸ್ಸಿನಲ್ಲಿ ...ರುತ್ತಾರೆ. ಇವರು ಒಂದು ವಿಭಾಗ. ಇನ್ನೊಂದು ...ಭಾಗ ಇದೆ. ಟ್ರಾಫಿಕ್ ಜಾಮ್‌ನಿಂದಾಗಿ ...ವರಿಗಾಗಬಹುದಾದ ತೊಂದರೆ ಏನೆಂದು ಬಹಳ ...ರಿ ನಾವು ಯೋಚಿಸುವುದಿಲ್ಲ. ಬೆಂಗಳೂರಿನ ...ಂತಹ ಸಂಚಾರ ದಟ್ಟಣೆ ನಡುವೆಯ ಆಟೋ ...ಡಿಸಿ ಅದರಿಂದ ಹೊಟ್ಟೆ ಹೊರೆಯಬೇಕಿದೆಯಲ್ಲಾ ...ಟೋ ಚಾಲಕ ವರ್ಗ ಅವರ ಕತೆ ಏನು? ಅವರ ...ೊಟ್ಟೆಯ ಪಾಡೇನು.

...ಲ್ಲಿ ಆಟೋ ಚಾಲಕರಿಗೆ ಸಂಚಾರ ದಟ್ಟಣೆ ಮಾತ್ರವೇ ಸಮಸ್ಯೆಯಲ್ಲ. ಹತ್ತಾರು ಸಮಸ್ಯೆಗಳು ಅವರನ್ನು ಕಾಡುತ್ತಿವೆ. ಆಟೋಗೆ ಬಳಸುವ ಗ್ಯಾಸ್‌ನ ಬೆಲೆ ಹೆಚ್ಚಾಗಿದೆ. 16.03.2006ರಂದು ಆಟೋ ಮೀಟರ್ ದರವನ್ನು ಕನಿಷ್ಟ 12 ರೂ ಎಂದು ನಿಗದಿ ಮಾಡಿದಾಗ ಒಂದು ಲೀಟರ್ ಗ್ಯಾಸ್‌ನ ದರ 34.30 ಇದ್ದದ್ದು ಜನವರಿ 1, 2008ಕ್ಕೆ ಅದು 42.38 ರೂ.ಗೆ ಏರಿದೆ. ಆಟೋ ಮೇಲೆ ಹೂಡಬೇಕಾದ ಬಂಡವಾಳ ಸಹ ಏರಿದೆ. ಆಗ 1,15,000.00 ರೂ. ಇದ್ದ ಬೆಲೆ ಈಗ 1,26,350.00 ರೂ.ಗೆ ಏರಿದೆ. ಎಂಜಿನ್



ಆಯಿಲ್, ಗ್ರೀಸ್ ಅಂತ ಏನು ನಿತ್ಯ ನಿರ್ವಹಣೆಗೆ ಖರ್ಚಾಗುತ್ತೆ ಅದು ಬಹುತೇಕ ಎರಡು ಪಟ್ಟು ಹೆಚ್ಚಿದೆ.

ಒಬ್ಬ ಚಾಲಕ ಒಂದು ಶಿಫ್ಟ್‌ನಲ್ಲಿ ಹಿಂದೆ ನೂರು ಕಿ.ಮೀ ಆಟೋ ಓಡಿಸುತ್ತಿದ್ದ ಎಂಬ ಅಂದಾಜು ಆಗಿನದ್ದಾಗಿದ್ದರೆ, ಈಗ ಅದು ಕೇವಲ 70 ಕಿ.ಮೀಗೆ ಇಳಿದಿದೆ. ಹಿಂದೆ 100 ಕೀ.ಮೀಯಲ್ಲಿ 20 ಕಿ.ಮೀ ಖಾಲಿ ಸುತ್ತಬೇಕಾಗಿತ್ತು. ಈಗ ಬರೇ 70 ಕಿ.ಮೀ 18 ಕಿ.ಮೀ ಖಾಲಿ ಸುತ್ತಬೇಕು ಎಂದು ಅಂದಾಜಿಸಲಾಗಿದೆ.

ಬೆಂಗಳೂರು ನಗರದ ಜೀವನ ವೆಚ್ಚ ಹೆಚ್ಚುತ್ತಿದೆ. ಮನೆ ಬಾಡಿಗೆ, ಅಡ್ವಾನ್ಸ್ ಏರಿವೆ. ತರಕಾರಿ, ದಿನಸಿಗಳ ಬೆಲೆ ವಿಪರೀತ ಏರಿವೆ. ಅಂದಂದು ದುಡಿದರೆ ಊಟ ಎಂಬಂತಹ ಸ್ಥಿತಿಯಲ್ಲಿರುವ ಆಟೋ ಚಾಲಕರು ಬದುಕುವುದು ಹೇಗೆ ಎಂಬ ಪರಿಸ್ಥಿತಿ ಎದುರಾಗಿದೆ. ಬ್ಯಾಂಕ್ ಸಾಲ ಸಿಗದೇ ಖಾಸಗಿ ಲೇವಾದೇವಿಗಾರರ ಬಳಿ ಸಾಲ ಮಾಡಿರುವವರದು ಇನ್ನೂ ಕಷ್ಟ. ಇಂತಹ ಸ್ಥಿತಿ ಇರುವುದರಿಂದ ಯಾರು ಏನೇ ವಿರೋಧ ಮಾಡಿದರೂ ಆಟೋ ಮುಷ್ಕರ ಯಶಸ್ವಿಯಾಗಿರುವುದು.

ಈಗ ಬೆಂಗಳೂರು ನಗರದಲ್ಲಿ ಪ್ರತಿ ಕಿ.ಮೀ ಪ್ರಯಾಣಕ್ಕೆ 6 ರೂ. ದರ ಇದ್ದು, ಕನಿಷ್ಟ ದರ 12 ರೂ. ಇದೆ. ಇದನ್ನು ಕ್ರಮವಾಗಿ ಕಿ.ಮಿ.ಗೆ 10ರೂ.ಗೆ ಕನಿಷ್ಟ ದರವನ್ನು 20 ರೂ.ಗೆ ಏರಿಸಬೇಕೆಂದು ಆಟೋ ರಿಕ್ಷಾ ಚಾಲಕರ ಸಂಘ ಕೇಳುತ್ತಿದೆ.

ಈ ನಡುವಿನ ಅವಧಿಯಲ್ಲಿ ಬೆಂಗಳೂರಿನ ಬಿ.ಎಂ.ಟಿ.ಸಿ ಸಾರಿಗೆ ದರವನ್ನು ಹಲವು ಬಾರಿ ಹೆಚ್ಚಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡಿಸೇಲ್ ದರಗಳು ಇಳಿದಾಗ ಎಡಪಕ್ಷಗಳ ಒತ್ತಾಯದಿಂದಾಗಿ ಕೇಂದ್ರ ಸರ್ಕಾರ ಸ್ವಲ್ಪ ದರ ಕಡಿತ ಮಾಡಿತು. ಆದರೆ ಆಗಲೂ ಬಿಎಂಟಿಸಿ ದರ ಇಳಿಸದೇ ಇನ್ನೂ ಏರಿಸಿತು.

ಇಷ್ಟೆಲ್ಲಾ ನೋಡಿದರೆ ಆಟೋ ಚಾಲಕರು ಕೇಳುತ್ತಿರುವುದರಲ್ಲಿ ಸ್ವಲ್ಪವಾದರೂ ನ್ಯಾಯ ಇದೆ ಅನಿಸುತ್ತದೆ. ಅಲ್ಲವೇ? ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದು ಯಾರಾದರೂ ಅನ್ನಬಹುದು. ಆ ಸಾರ್ವಜನಿಕರಲ್ಲಿ ಆಟೋ ಚಾಲಕರೂ ಇದ್ದಾರೆ ಎಂದು ಭಾವಿಸಿದರೆ ಆಗ ಅದರಲ್ಲಿ ಅಷ್ಟೊಂದು ತೊಂದರೆ ಆಗುವುದಿಲ್ಲ ಅಲ್ಲವೇ?

ಪ್ರತಿಭಟನೆ ಮನವಿ ಸಲ್ಲಿಕೆ

ಜನವರಿ 11ರಂದು ಕಾರ್ಪೊರೇಷನ್ ಸರ್ಕಲ್‌ನಿಂದ ಆಟೋ ಚಾಲಕರ ಮೆರವಣಿಗೆ ಬನ್ನಪ್ಪ ಪಾರ್ಕ್‌ಗೆ ಬಂದು ಸೇರಿತು. ಅಲ್ಲಿ ಸಭೆ ನಡೆಸಲಾಯಿತು. ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿ ರಾಮೇಗೌಡರವರು ಸ್ಥಳಕ್ಕೆ ಬಂದು ಮನವಿ ಸ್ವೀಕಾರ ಮಾಡಿ ಮಾಡಿ ಬೇಡಿಕೆ ಬಗೆಗೆ ಪರಿಶೀಲಿಸುವ ಭರವಸೆ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ಎ.ಆರ್.ಡಿ.ಯು.ನ ಕಾರ್ಯಾಧ್ಯಕ್ಷರಾದ ಶ್ರೀನಿವಾಸಮೂರ್ತಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ಉಪಾಧ್ಯಕ್ಷರಾದ ರುದ್ರಮೂರ್ತಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್ ವಹಿಸಿದ್ದರು.

ದರ ಏರಿಕೆ ಮಾತ್ರವಲ್ಲ, ಆಟೋ ಚಾಲಕರ ಕಲ್ಯಾಣಕ್ಕಾಗಿ ಪ್ರತ್ಯೇಕ ಸಂಸ್ಥೆ, ನಗರದಲ್ಲಿ ಆಟೋ ಚಾಲಕರ ಬಡಾವಣೆ ಇತ್ಯಾದಿಗಳಿಗಾಗಿಯೂ ಒತ್ತಾಯಿಸಲಾಗಿದೆ.

ಉಡುಪಿ

ಹಿಂದುತ್ವದ ಪ್ರಯೋಗಶಾಲೆಯಲ್ಲಿ ದುಡಿವ ಜನರ ಸವಾಲು

ಉಡುಪಿ ಜಿಲ್ಲೆಯ ಜನರು ಎದುರಿಸುತ್ತಿರುವ ಸಮಸ್ಯೆ ಸವಾಲುಗಳೇನು? ಸಮಸ್ಯೆಗಳನ್ನು ಎದುರಿಸುವ ದಾರಿಯೇನು?

ಜಿಲ್ಲೆಯಲ್ಲಿ ಮೀನು ಕೈಗಾರಿಕೆಯಲ್ಲಿ ದುಡಿಯುವ ಮೀನುಗಾರರು ಮತ್ತು ಮೀನು ಕಾರ್ಮಿಕರು ಕಳೆದ 3-4 ವರ್ಷಗಳಿಂದ ಮತ್ಸ್ಯ ಕ್ಷಾಮದಿಂದಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿದ್ದ ಬೀಡಿ ಕಾರ್ಮಿಕರು, ಬೀಡಿ ಕೈಗಾರಿಕೆಯಲ್ಲಿನ ಸಮಸ್ಯೆಗಳಿಂದಾಗಿ ಕಷ್ಟಕ್ಕೊಳಗಾಗಿದ್ದಾರೆ. ಸಂಘಟನೆ ಇರುವಲ್ಲಿ ಕನಿಷ್ಠ ಕೂಲಿ ಪಡೆಯಲಿಕ್ಕೆ ಸಾಧ್ಯವಾಗಿದೆ. ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಸಾಧ್ಯವಾದಲ್ಲಿ ಕಾಯಿದೆ ಬದ್ಧ ಎಲ್ಲಾ ಸವಲತ್ತುಗಳನ್ನು ಪಡೆಯಲು ಸಾಧ್ಯ. ಹಂಚು ಕೈಗಾರಿಕೆ ಈ ಹಿಂದಿಗಿಂತಲೂ ಸ್ವಲ್ಪ ಉತ್ತಮವಾಗಿದ್ದು, ಈಗಾಗಲೇ ಒಂದು ಒಪ್ಪಂದವಾಗಿದೆ. ಕನಿಷ್ಠ ಕೂಲಿ ಹಾಗೂ ಇತರ ಮುಖ್ಯ ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗಿದೆ. ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಸಬ್ಸಿಡಿ ಇತ್ಯಾದಿ ಆರ್ಥಿಕ ನೆರವು ಕೊಟ್ಟಲ್ಲಿ ಕೈಗಾರಿಕೆಗಳನ್ನು ಉಳಿಸಿ ಕಾರ್ಮಿಕರ ಉದ್ಯೋಗಗಳನ್ನು ರಕ್ಷಿಸಬಹುದು.

ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕೂಲಿಗಾರರಿಗೆ ಕೆಲಸ ಇಲ್ಲದೆ ಕೆಲಸಕ್ಕೆ ತಕ್ಕ ಕೆಲಸ ಸಿಗದೇ ಸಂಕಷ್ಟಕ್ಕೆ ಒಳಗಾಗಿದ್ದಾರೆ. ರಸ್ತೆ ನಿರ್ಮಾಣ ಹಾಗೂ ಕಟ್ಟಡ ನಿರ್ಮಾಣದಂತಹ ಕಾಮಗಾರಿಗಳು ಹೆಚ್ಚೆಚ್ಚು ನಡೆದರೆ ಉದ್ಯೋಗ ಅವಕಾಶ ಹೆಚ್ಚಾಗುವ ನಿರೀಕ್ಷೆಯಿದೆ. ರೈತರು, ಸಣ್ಣ ರೈತರು, ಗ್ರಾಮಾಂತರ ಪ್ರದೇಶಗಳಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದೇ ಬೆಳೆ ನಾಶವಾಗಿ ಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಈ ಬಾರಿ ಮಳೆ ಹೆಚ್ಚು ಬಂದು ಕೆಲವು ಪ್ರದೇಶಗಳಲ್ಲಿ ಅತಿವೃಷ್ಠಿಯಿಂದ ಬೆಳೆ ನಾಶವಾಗಿದೆ.

ಚಳುವಳಿಯ ಅಗತ್ಯ

ಕೈಗಾರಿಕೆಗಳು ಬೆಳೆಯದೇ ಉದ್ಯೋಗ ಅವಕಾಶ ಹೆಚ್ಚಾಗದೆ ಯುವಜನರಿಗೆ ಉದ್ಯೋಗ ಸಿಗದೆ ನಿರುದ್ಯೋಗಿಗಳಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಜಿಲ್ಲೆಯಲ್ಲಿ ಸಾಕಷ್ಟು ಶೈಕ್ಷಣಿಕ ಸಂಸ್ಥೆಗಳು ಇದ್ದು, ಸಾಕ್ಷರತಾ ಜಿಲ್ಲೆಯಾಗಿ, ಸಾರಿಗೆ-ಸಂಪರ್ಕ ಹೆಚ್ಚುತ್ತಿದ್ದು ಉದ್ಯೋಗ ಅವಕಾಶಗಳು ಹೆಚ್ಚಾಗುವ ನಿರೀಕ್ಷೆಯಿದೆ. ಜಿಲ್ಲೆಯಲ್ಲಿ ಲಭ್ಯವಿರುವ ನೆಲ, ಜಲ, ಅರಣ್ಯ, ಖನಿಜ ಸಂಪತ್ತುಗಳ, ಅಪಾರ ಮಾನವ ಸಂಪನ್ಮೂಲವನ್ನು ಸರಿಯಾದ ಕ್ರಮದಲ್ಲಿ ಬಳಕೆ ಮಾಡಿ, ಕೈಗಾರಿಕೆಗಳ ಸ್ಥಾಪನೆ, ರಿಯಾಯಿತಿ ದರದಲ್ಲಿ ಸಮರ್ಪಕ ವಿದ್ಯುತ್, ಹಂಚು, ಬೀಡಿ ಮತ್ತು ಗೋಡಂಬಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಸರ್ಕಾರ ಕೊಡುವಂತಾಗಲೂ ದುಡಿಯುವ ಜನ ಸಾಮಾನ್ಯರ ಸಂಘಟನೆ ಮತ್ತು ಹೋರಾಟಗಳು ಹೆಚ್ಚೆಚ್ಚು ಬೆಳೆದು ಬರುವ ಅವಶ್ಯವಿದೆ.

ಬ್ರಹ್ಮಾವರದ ಸಕ್ಕರೆ ಕಾರ್ಖಾನೆ ಮುಚ್ಚಿದೆ. ನೌಕರರ ಹಲವು ಹೋರಾಟಗಳು ಹಾಗೂ ಅವರಿಗೆ ಬೆಂಬಲಿಸಿ ಸೌಹಾರ್ದ ಕಾರ್ಯಕ್ರಮಗಳು ನಡೆದಿವೆ. ನೌಕರರಿಗೆ ಬಾಕಿ ಸಂಬಳ ಇಲ್ಲಿ ಹಾಗೂ ರೈತರಿಗೆ ಬಾಕಿ ಪಾವತಿಯಾಗಲಿಲ್ಲ. ಸಕ್ಕರೆ ಕಾರ್ಖಾನೆಯನ್ನು ಪುನರ್ ಆರಂಭಿಸಿ, ಕಾರ್ಮಿಕರ ಸಂಬಳ ಬಾಕಿ ಪಾವತಿಸಿ, ರೈತರ ಬಾಕಿ ಕೂಡ ಸಂದಾಯ ಮಾಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಲಾಗಿದೆ.

ನಕ್ಸಲ್ ಪಿಡುಗು

ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಮುಖ್ಯವಾಗಿ ಅರಣ್ಯ ಪ್ರದೇಶಗಳಲ್ಲಿ ನಕ್ಸಲ್ ವಾದಿಗಳ ಚಟುವಟಿಕೆಗಳ ಕಂಡು ಬಂದಿದೆ. ನಕ್ಸಲೀಯರ ಶೋಧದಲ್ಲಿ ಪೋಲಿಸರು ನಿರತರಾಗಿದ್ದಾರೆ. ಇತ್ತೀಚಿಗಿನ ದಿನಗಳಲ್ಲಿ ನಕ್ಸಲವಾದಿಗಳಿಗೆ ಹೆಚ್ಚಿನ ಪ್ರಚಾರ ಸಿಗುತ್ತಿದೆ. ಸರ್ಕಾರವು ಮಾತುಕತೆಗೆ ಕರೆದು ಒಂದು ಇತ್ಯರ್ಥಕ್ಕೆ ಬರುವುದರ ಜೊತೆಗೆ ಅರಣ್ಯ ಪ್ರದೇಶದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ದುಸ್ಸಾಹಸವಾದಿ ಕ್ರಮಗಳಿಂದ ಶೋಷಿತರಿಗೆ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚು ಎಂಬುದು ನಿಶ್ಚಿತ.

ಅರಣ್ಯ ರಕ್ಷಿಸುವ ಹೆಸರಿನ ಸರ್ಕಾರದ ಯೋಜನೆಗಳಿಂದ ತೊಂದರೆಗೊಳಗಾಗಿರುವ ಬಡರೈತರು, ಅರಣ್ಯ ವಾಸಿಗಳು, ಭೂಮಾಲಿಕರ ತೀವ್ರ ಶೋಷಣೆಗೆ ತುತ್ತಾಗಿರುವ ಕೃಷಿ ಕೂಲಿಕಾರರು ನಕ್ಸಲ್‌ಬಾರಿ ಮಾರ್ಗದ ದಯನೀಯ ವೈಫಲ್ಯದಿಂದ ಅಥವಾ ಇತ್ತೀಚಿಗೆ ಆಂಧ್ರಪ್ರದೇಶದಲ್ಲಿ ನಿಸ್ತೇಜಗೊಳ್ಳುತ್ತಿರುವ ನಕ್ಸಲ್ ಚಳುವಳಿಯ ಅನುಭವದಿಂದಲಾದರೂ ಪಾಠ ಕಲಿಯಬೇಕಿದೆ. ಪ್ರಜಾಸತ್ತಾತ್ಮಕ ಚಳುವಳಿಯ ದಾರಿ ಹಿಡಿಯಬೇಕಿದೆ.

ಅಭಿವೃದ್ಧಿಯ ಪ್ರಶ್ನೆಗಳು

ವಾರಾಹಿ ನೀರಾವರಿ ಯೋಜನೆ ವಿಳಂಬ ಆಗದೇ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಿದೆ. ಇದರಿಂದ ಜಿಲ್ಲಾ ಕುಂದಾಪುರ ಮತ್ತು ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ 68 ಗ್ರಾಮದ ಕೃಷಿ ಭೂಮಿಗೆ ನೀರು ಸಿಗುತ್ತದೆ. ಕಬ್ಬ ಬೆಳೆಗಾರರಿಗೆ ಕಬ್ಬು ಬೆಳೆಸಲು ಪ್ರೋತ್ಸಾಹ ನೀಡಿದಂತಾಗುತ್ತದೆ. ಸಕ್ಕರೆ ಕಾರ್ಖಾನೆಯ ಉಳಿವಿಗೂ ಸಹಾಯವಾಗುತ್ತದೆ.

ನಂದಿಕೂರು ಗ್ರಾಮದಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಯಾಗುವುದು ಅಗತ್ಯವಿದೆ. ಉದ್ಯೋಗಾವಕಾಶಕ್ಕಾಗಿ ಹಾಗೂ ವಿದ್ಯುತ್ ಕೊರತೆಯನ್ನು ನೀಗಿಸಲು ಅನುಕೂಲವಾಗುತ್ತದೆ. ಪರಿಸರಕ್ಕೆ ಹಾನಿಯಾಗದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು. ಪರಿಸರದ ಹೆಸರಿನಲ್ಲಿ ಅಡ್ಡಿಪಡಿಸುವುದನ್ನು ಒಪ್ಪಲಾಗದು. ಉಡುಪಿ ಜಿಲ್ಲೆಯಲ್ಲಿ ಇನ್ನಷ್ಟು ಹೊಸ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಾಗಬೇಕಿದೆ.

ಕರಾವಳಿ ಉದ್ದಕ್ಕೂ ಕಡಲ ಕೊರೆತಕ್ಕೆ ಗುರಿಯಾಗಿ ಕಷ್ಟ-ನಷ್ಟಕ್ಕೆ ಒಳಗಾದವರಿಗೆ ಪರಿಹಾರ ನೀಡಿ, ಶಾಶ್ವತ ತಡೆಗೋಡೆಯನ್ನು ನಿರ್ಮಾಣ ಮಾಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಈ ವಿಷಯದಲ್ಲಿ ಸರ್ಕಾರದ ನಿರ್ಲಕ್ಷ್ಯ ಹಾಗೆಯೇ ಮುಂದುವರಿಯುತ್ತಿದೆ.

ರಾಷ್ಟ್ರೀಯ ಹೆದ್ದಾರಿ, ರಸ್ತೆ ಮತ್ತು ಸೇತುವೆ ಇಂತಹ ಮೂಲ ಸೌಕರ್ಯ ಹಾಳಾಗದಂತೆ ಹೆಚ್ಚಿನ ಭಾರದ ಕಬ್ಬಿಣದ ಅದಿರು ತುಂಬಿದ ಲಾರಿಗಳನ್ನು ಓಡಿಸಲು ನಿರ್ಬಂಧ ಹೇರಬೇಕು. ರಾಷ್ಟ್ರೀಯ ಹೆದ್ದಾರಿ, ರಸ್ತೆ ಮತ್ತು ಸೇತುವೆಗಳನ್ನು ರಕ್ಷಿಸಲು ಮುಂಜಾಗ್ರತಾ ಕ್ರಮಗಳನ್ನು ತುರ್ತು ನಿರ್ವಹಿಸಬೇಕಿದೆ. ಈಗ ಜಿಲ್ಲೆಯ ರಸ್ತೆಗಳಿಗೆ ಆಗುತ್ತಿರುವ ಹಾನಿಗೆ ತಡೆ ಹಾಕಲು ಹಾಗೂ ರಸ್ತೆಗಳನ್ನು ಉಳಿಸಿಕೊಳ್ಳಲು ಇದು ಅನಿವಾರ್ಯವಾಗಿದೆ.

ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿಯನ್ನು ಬಹುದೂರದ ಮಣಿಪಾಲ ಎಂಡ್ ಪಾಯಿಂಟ್‌ಗೆ ಸ್ಥಳಾಂತರ ಮಾಡುವ ಪ್ರಯತ್ನ ನಡೆದಿದೆ. ಇದೇ ರೀತಿ ಬಸ್ ನಿಲ್ದಾಣ ಹಾಗೂ ಬಸ್ ಡಿಪೋಗಳನ್ನು ಸಹ ದೂರಕ್ಕೆ ಸಾಗಹಾಕುವ ಪ್ರಯತ್ನಗಳು ನಡೆದಿವೆ. ಆದರೆ ಜನರ ಅನುಕೂಲದ ದೃಷ್ಟಿಯಿಂದ ಇವುಗಳು ಜಿಲ್ಲಾ ಕೇಂದ್ರ ಭಾಗದಲ್ಲಿ ಹೆದ್ದಾರಿಗೆ ಸಮೀಪ ಬಾಗಿ ಇರುವುದು ಅತ್ಯಂತ ಅಗತ್ಯವಾಗಿದೆ. ಗ್ರಾಮ ಪಂಚಾಯತ್‌ಗಳು ಹಾಗೂ ಸರ್ಕಾರಿ ಇಲಾಖೆಗಳ ಮೂಲಕ ವಿನಿಯೋಗ ಆಗಬೇಕಿದ್ದ ಸರ್ಕಾರಿ ಹಣ ಬಹುಪಾಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪೋಲಾಗುತ್ತಿದೆ.

ಜಿಲ್ಲೆಯಲ್ಲಿ ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳ ಸ್ಥಾಪನೆ ಹಾಗೂ ಜಿಲ್ಲೆಯ ಪ್ರವಾಸೋದ್ಯಮದ ಬೆಳವಣಿಗೆಗೆ ಪ್ರೋತ್ಸಾಹ ನೀಡದಿದ್ದಲ್ಲಿ ಜಿಲ್ಲೆಯ ಅಭಿವೃದ್ಧಿ ಬರಿಯ ಕಾಗದದ ಮೇಲಿನ ನಿರ್ಣಯಗಳಿಗೆ ಸೀಮಿತವಾಗುತ್ತದೆ.

ಜನರ ಬದುಕು ದುರ್ಬರವಾಗಿದೆ. ನೈಜ ಆದಾಯ ಕುಸಿದಿದೆ. ಆದರೆ ಸರ್ಕಾರದ ಮಾನದಂಡದಂತೆ ಬಡವರು ಎನಿಸಿಕೊಳ್ಳಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಕೇವಲ 11,000 ರೂಪಾಯಿಗಳಿಗೆ ನಿಗದಿ ಮಾಡಿರುವುದು ಹಾಸ್ಯಾಸ್ಪದವಾಗಿದೆ.

ವಿಪರೀತ ಬೆಲೆ ಏರಿಕೆಯ ಈ ಪರಿಸ್ಥಿತಿಯಲ್ಲಿ ವಾರ್ಷಿಕ ಆದಾಯ ರೂ.36,000 ನಿಗದಿಗೊಳಿಸಬೇಕು. ಉರುವಲು ಸಮಸ್ಯೆ ವಿಪರೀತ ಇರುವುದರಿಂದ ಅನಿಲ ಕನೆಕ್ಷನ್ ಹೊಂದುವುದು ಅನಿವಾರ್ಯವಾಗಿದೆ. ಬಿಪಿಎಲ್ ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ತೆಗೆದುಕೊಂಡ ಮಾನದಂಡ ತೀರಾ ಅವೈಜ್ಞಾನಿಕವಾಗಿದೆ. ಅಡುಗೆ ಅನಿಲ ಕನೆಕ್ಷನ್ ಇರುವ ಕುಟುಂಬಗಳಿಗೂ ಬಿಪಿಎಲ್ ಕಾರ್ಡು ಒದಗಿಸುವುದು ಹಾಗೂ ಸೀಮೆಎಣ್ಣೆ ಒದಗಿಸುವುದು ಅಗತ್ಯವಾಗಿದೆ.



ಬಿ.ಪಿ.ಎಲ್. ಕಾರ್ಡುದಾರರಿಗೆ ಆಹಾರ ಧಾನ್ಯಗಳನ್ನು ಹೆಚ್ಚಿಸಬೇಕು ಹಾಗೂ ಹೆಚ್ಚಿನ ದೈನಂದಿನ ಅವಶ್ಯಕ ವಸ್ತುಗಳನ್ನು ಪಡಿತರ ಕಾರ್ಡುಗಳ ಮೂಲಕ ವಿತರಿಸಬೇಕು ಎಂಬ ಒತ್ತಾಯದ ಚಳುವಳಿ ತೀವ್ರಗೊಳ್ಳಬೇಕಿದೆ.

ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳ ಮುಂದೆ ಆಗಿರುವ ಒಪ್ಪಂದದಂತೆ ಬೀಡಿ ಕಾರ್ಮಿಕರಿಗೆ ಸಿಗಬೇಕಾದ ಕನಿಷ್ಠ ಕೂಲಿ ಮತ್ತು ಏರಿಳಿತ ತುಟ್ಟಿ ಭತ್ಯೆಯ ಬಾಕಿಯನ್ನು ಕೊಡದೆ ಬೀಡಿ ಕಂಪನಿಗಳ ಮಾಲಕರು ಕಾರ್ಮಿಕರಿಗೆ ವಂಚನೆ ಮಾಡಿದ್ದಾರೆ.

ಈ ಒಪ್ಪಂದವನ್ನು ಉಲ್ಲಂಘಿಸಿರುವ ಬೀಡಿ ಕಂಪನಿಗಳ ಮಾಲಕರ ಆಸ್ತಿಪಾಸ್ತಿಗಳನ್ನು ಸರ್ಕಾರವು ಜಪ್ತಿ ನಡೆಸಿ ಮುಟ್ಟುಗೋಲು ಹಾಕಿ ಒಪ್ಪಂದದಂತೆ ಬೀಡಿ ಕಾರ್ಮಿಕರಿಗೆ ಸಿಗಬೇಕಾದ ತುಟ್ಟಿಭತ್ಯೆಯ ಹಣವನ್ನು ವಸೂಲು ಮಾಡಬೇಕೆಂಬ ಒತ್ತಾಯಗಳನ್ನು ಕಾರ್ಮಿಕ ಚಳುವಳಿ ಮಾಡುತ್ತಿರುವುದು ನ್ಯಾಯಬದ್ಧವಾಗಿದೆ.

ಕರಾವಳಿ ಕರ್ನಾಟಕದ ಪ್ರಮುಖ ಪಟ್ಟಣಗಳಾಗಿರುವ ಉಡುಪಿ, ಕುಂದಾಪುರ, ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ ಹಾಗೂ ಕಾರವಾರ ಮುಂತಾದ ಪ್ರದೇಶಗಳನ್ನು ರೈಲು ಮಾರ್ಗದ ಮೂಲಕ ಕರ್ನಾಟಕದ ರಾಜಧಾನಿ ಬೆಂಗಳೂರಿನೊಂದಿಗೆ ಜೋಡಿಸಬೇಕಾದುದು ಇಂದಿನ ತುರ್ತು ಅವಶ್ಯಕತೆಯಾಗಿದೆ.

ಅದೇ ರೀತಿ ಬೆಂಗಳೂರು ಮತ್ತು ಅರಸೀಕೆ... ಹಾಗೂ ಮಂಗಳೂರು, ಉಡುಪಿ ಮುಖಾಂತ... ಗೋವಾದ ಮಡಗಾಂವ್‌ವರೆಗೆ ಪ್ರಯಾಣಿಕ... ರೈಲುಗಳನ್ನು ಓಡಿಸಬೇಕಾದುದು ತೀ... ಅವಶ್ಯಕವಾಗಿದೆ.

ರೈಲು ರಾಜ್ಯದ ಪ್ರಮುಖ ಯಾತ್ರಾ ಸ್ಥಳಗಳಾಗಿರುವ ಉಡುಪಿ, ಮುರ್ಡೇಶ್ವರ ಕೊಲ್ಲೂರುಗಳನ್ನು ಸಂಪರ್ಕಿಸುವುದರಿಂ... ಪ್ರವಾಸೋದ್ಯಮ ದೃಷ್ಟಿಯಲ್ಲಿ ಅತ್ಯಂ... ಲಾಭದಾಯಕವಾಗಿರುವುದರಲ್ಲಿ ಸಂದೇಹವಿಲ್ಲ... ಆದುದರಿಂದ ಬೆಂಗಳೂರಿನಿಂದ ಮಡಗಾಂವ... ನಡುವೆ ಅರಸೀಕೆರೆ, ಮಂಗಳೂರು, ಉಡು... ಮಾರ್ಗವಾಗಿ ಪ್ರಯಾಣಿಕರ ರೈಲುಗಳನ್ನು 'ಕರಾವ... ಎಕ್ಸ್‌ಪ್ರೆಸ್' ಎಂಬ ಹೆಸರಿನಲ್ಲಿ ಆರಂಭಿಸಿದ... ರಾಜ್ಯದ ಪ್ರವಾಸೋದ್ಯಮಕ್ಕೂ ರೈಲ್ವೆ ಹಳಿ... ಉದ್ದಕ್ಕೂ ಬರುವ ಪ್ರದೇಶಗಳ ಅಭಿವೃದ್ಧಿಗೂ ದೊ... ಚಾಲನೆ ಸಿಕ್ಕಂತಾಗುತ್ತದೆ.

ರಾಜಕೀಯ ಬಲಾಬಲ

ಉಡುಪಿಯಲ್ಲಿ ಬಹಳ ಕಾಲದಿಂದಲ... ಕಾಂಗ್ರೆಸ್ ಪಕ್ಷದ ವಿಧಾನಸಭಾ ಹಾ... ಲೋಕಸಭಾ ಸದಸ್ಯರೇ ಹೆಚ್ಚಿನ ಸಂಖ್ಯೆಯ... ಚುನಾಯಿತರಾಗಿ ಬರುತ್ತಿದ್ದು, ಇತ್ತೀಚೆಗೆ ಕಾಂಗ್ರೆ... ಪಕ್ಷದ ಮೇಲಿನ ಅತೃಪ್ತಿಯನ್ನು ಕೋಮುವಾ... ಶಕ್ತಿಗಳು ಉಪಯೋಗಿಸಿ ಕೊಂಡು, ಕಳೆ... ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳ... ಬಿಜೆಪಿಗೆ ಹೆಚ್ಚಿನ ಸ್ಥಾನ ಹಾಗೂ ಮತಗಳು ಸಿಕ್ಕಿ... ಉಡುಪಿಯ ಲೋಕಸಭಾ ಕ್ಷೇತ್ರದಲ್ಲಿ ಬಿ.ಜೆ.ಪಿ... ಪಕ್ಷದ ಅಭ್ಯರ್ಥಿ ಗೆದ್ದಿರುತ್ತಾರೆ. ಗ್ರಾಮ, ತಾಲ್ಲೂ... ಹಾಗೂ ಜಿಲ್ಲಾ ಪಂಚಾಯಿತಿಗಳ... ಹೆಚ್ಚಿನ ಸ್ಥಾನಗಳಿದ್ದರೂ ಕಾಂಗ್ರೆಸ್... ಸೋಲಾಗಿದೆ.

ಕೋಮುವಾದಿ ಶಕ್ತಿಗಳ... ಬೆಳೆಯುವುದಕ್ಕೆ ಕಾಂಗ್ರೆಸ್ಸಿನ ಆಡಳಿ... ವೈಫಲ್ಯವೇ ಕಾರಣವಾಗಿದೆ... ಮೊದಲನೆಯ ಸ್ಥಾನದಲ್ಲಿದ್ದ ಕಾಂಗ್ರೆ... ಎರಡನೇಯ ಸ್ಥಾನಕ್ಕೆ ತಳ್ಳಲ್ಪಟ್ಟಿ... ಜನತಾದಳ (ಎಸ್) ದ ಪ್ರಭಾ... ಕಡಿಮೆಯಾಗಿದೆ. ಸಿಪಿಐ(ಎಂ) ಪಕ್ಷ... ಮೂರನೆಯ ಸ್ಥಾನದಲ್ಲಿದ್ದು ಕಾಂಗ್ರೆ... ಬಿಜೆಪಿಯಿಂದ ತೀರಾ ಹಿಂದೆ ಇದೆ.

ಕಾಂಗ್ರೆಸ್ ಪಕ್ಷದಲ್ಲಿ ಆ ಪಕ್ಷದವರ... ಒಪ್ಪಿಕೊಳ್ಳುವಂತಹ ಸ್ಥಳೀಯ ನಾಯಕರಿಲ್ಲ ಹಾ... ಜಿಲ್ಲಾ ನಾಯಕರಿಲ್ಲ. ಗುಂಪುಗಾರಿಕೆ ಹಾಗ... ಮೇಲ್‌ಮಟ್ಟದ ನಾಯಕರ ಆಶೀರ್ವಾದಕ... ಪೈಪೋಟಿ ಈ ಪಕ್ಷದ ಸಾಮಾನ್ಯ ನಡವಳಿಕೆಯಾಗಿ... ಹಿಂದುತ್ವದ ಪ್ರಚಾರದ ವಿರುದ್ಧ ಕಾಂಗ್ರೆಸ್ ಪಕ್ಷ... ಕಾರ್ಯಕರ್ತರಲ್ಲಿ ಸ್ಥೈರ್ಯ ತುಂಬುವ ಕೆಲ... ನಡೆದಿಲ್ಲ. ಹಾಗಾಗಿ ಹಿಂದುತ್ವದ ಕಾರ್ಯಕ್ರಮಗಳ... ಬಹುತೇಕ ಕಾಂಗ್ರೆಸ್ ಕಾರ್ಯಕರ್ತರೆ... ಕೊಂಡಿರುವವರೂ ಗುರುತಿಸಿಕೊಂಡಿರುವುದ... ಕಾಣ ಬಹುದಾಗಿದೆ. ರಾಜ್ಯ, ರಾಷ್ಟ್ರ ಮಟ್ಟ... ರಾಜಕೀಯ ಬೆಳವಣಿಗೆಗಳಿಗೆ ಜಿಲ್ಲೆಯಲ್ಲಿ ಕಾಂಗ್ರೆ... ಪಕ್ಷದ ಸ್ಪಂದನೆ ಗುರುತಿಸುವ ಮಟ್ಟದಲ್ಲಿ ನಡೆದಿ...

ಕೋಮುವಾದಿ ಶಕ್ತಿಗಳು ಜಿಲ್ಲೆಯಲ್ಲಿ ಧಾರ್ಮಿ... ಭಾವನೆ ಯನ್ನು ಕೆರಳಿಸುವ ಮೂಲಕ ಜನರನ್ನು ತಮ... ದೈನಂದಿನ ಸಮಸ್ಯೆಗಳಿಂದ ವಿಮುಖ ಗೊಳಿಸುತ್ತಿ... ಕೆಲವು ಪ್ರದೇಶಗಳಲ್ಲಿ ನಿರಂತರ ಗಲಭೆಗಳ... ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ. ಕೋಮುವಾದ... ವಿರುದ್ಧ ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿ... ಸಂಘಟನೆಗಳು ಹೋರಾಟ ನಡೆಸಿವೆ. ಆದರೆ ಇನ್ನ... ಪರಿಣಾಮಕಾರಿಯಾಗ ಸಿಪಿಐ(ಎಂ) ಬೇಕಾ... ಅಗತ್ಯವಿದೆ ಆಗಿರುವುದು ಸಾಲದು. ಹಿಂದು... ಕೋಮುವಾದ ಹಾಗೂ ಮುಸ್ಲಿಂ ಮತ್ತು ಕ್ರಿಶ್ಚಿಯ... ಮೂಲಭೂತವಾದಿಗಳ ವಿರುದ್ಧ ಕೂಡ... ಹೋರಾಟ ನಡೆಸುವುದು ತೀರಾ ಅಗತ್ಯ.

ಅಭಿವೃದ್ಧಿ ಆಗಬೇಕು. ಆಗುತ್ತಿದೆಯಂತೆ. ಆದರೆ ಯಾರಿಗಾಗಿ ಎಂಬುದು ದೊಡ್ಡ ಪ್ರಶ್ನೆ

ಯಾರಿಗಾಗಿ ಈ ಬೆಳವಣಿಗೆ ?

ಯುಪಿಎ ಸರಕಾರದ ಧೋರಣೆಗಳು ಹಿಡಿದಿರುವ ದಿಕ್ಕಿನ ಬಗ್ಗೆ ಜನಸಾಮಾನ್ಯರು ಏನನ್ನುತ್ತಾರೆ ಎಂಬುದು ಇತ್ತೀಚಿನ ವಿಧಾನ ಸಭಾ ಚುನಾವಣೆಗಳಲ್ಲಿ ವ್ಯಕ್ತವಾಗಿದೆ. ಇದು ಈ ಧೋರಣೆಗಳ ರಾಜಕೀಯ ಫಲ! ಜನಗಳ ಹೆಚ್ಚುತ್ತಿರುವ ಅತೃಪ್ತಿ ಪ್ರಕಟವಾಗಿದೆ. ಈ ಅಸಂತೃಪ್ತಿಗಳನ್ನು ಕೋಮುವಾದಿ ಶಕ್ತಿಗಳು ಚುನಾವಣೆಗಳಲ್ಲಿ ಬಂಡವಾಳವಾಗಿಸಿಕೊಳ್ಳುವುದನ್ನು ತಡೆಯಬೇಕಾದರೆ ಈಗಲಾದರೂ ಅದರ ಧೋರಣೆಗಳ ದಿಕ್ಕು ಬದಲಾಗಬೇಕು, ಜನಗಳ ಕಲ್ಯಾಣದತ್ತ ತಿರುಗಬೇಕು.


30 ನಿಮಿಷಕ್ಕೆ ಒಬ್ಬ ರೈತ ಆತ್ಮಹತ್ಯೆ

ಮತ್ತೆ ದೇಶದ ಶೇರು ಮಾರುಕಟ್ಟೆಯಲ್ಲಿ ಭಾವಾವೇಶ, ಮುಂಬೈ ಸೂಚ್ಯಂಕ 21000 ತಲುಪಿದೆಯೆಂದು. ಮತ್ತೊಂದೆಡೆ ಇದೇ ದೇಶದಲ್ಲಿ ಒಂದಿಲ್ಲೊಂದು ಕಡೆ ಪ್ರತಿ ಮೂವತ್ತು ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಸುದ್ದಿ ಬರುತ್ತಲೇ ಇದೆ. 'ಹೊಳೆಯುತ್ತಿರುವ ಭಾರತ' ಮತ್ತು 'ನರಳುತ್ತಿರುವ ಭಾರತ'ದ ನಡುವಿನ ಕಂದರ ಬೆಳೆಯುತ್ತಲೇ ಇದೆ, ಇನ್ನಷ್ಟು ವೇಗವಾಗಿ. ಈ ಕಂದರ ಬೆಳೆಯುತ್ತಿರುವುದು ನಮ್ಮ ಆರ್ಥಿಕ ವ್ಯವಸ್ಥೆ ಅದಕ್ಷವಾಗಿದೆ, ಸೃಷ್ಟಿಯಾದ ಸಂಪತ್ತಿನ ನ್ಯಾಯಯುತ ಹಂಚಿಕೆಯಾಗುತ್ತಿಲ್ಲವೆಂಬ ಕಾರಣದಿಂದಷ್ಟೇ ಅಲ್ಲ, ಆಳುವ ಸರಕಾರಕ್ಕೆ ಈ ಕಂದರದ ಅರಿವು ಇಲ್ಲ ಎಂಬ ಕಾರಣದಿಂದಷ್ಟೆ ಕೂಡಾ ಅಲ್ಲ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುವ, ಬಡವರು ಇನ್ನಷ್ಟು ಬಡವರಾಗುವ ಸನ್ನಿವೇಶವೇ ಇದೆ ಎಂಬುದು ಒಂದು ಸರಳ ಸಂಗತಿ. ಬಂಡವಾಳಶಾಹಿಯ ತರ್ಕ ಇದೇ ತಾನೇ- ಅದು ನಿಂತಿರುವುದೇ ಆರ್ಥಿಕ ಶೋಷಣೆಯ ತೀವ್ರತೆಯ ಮೇಲೆ.

ಉದಾಹರಣೆಗೆ ಜೀವನಾವಶ್ಯಕ ವಸ್ತುಗಳ ಸತತ ಬೆಲೆಯೇರಿಕೆಯನ್ನೇ ತಗೊಳ್ಳಿ. ಇದು ಜನರ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುತ್ತದೆ. ಆದರೆ ಅದೇ ವೇಳೆಗೆ ಬಳಕೆದಾರರನ್ನು ಸುಲಿದು ಲಾಭ ಗಳಿಸುವವರ ಲಾಭವನ್ನೂ ಹೆಚ್ಚಿಸುತ್ತಿದೆ, ಹಣದುಬ್ಬರ ಎಂಬುದು ಒಂದು ಸಾಧನ. ಆದಾಯವನ್ನು ಬಡವರಿಂದ ಶ್ರೀಮಂತರತ್ತ ತಿರುಗಿಸುವ ಒಂದು ಆರ್ಥಿಕ ಉಪಕರಣ.

ಯುಪಿಎ ಸರಕಾರ ಬೆಲೆಯೇರಿಕೆಯನ್ನು ತಡೆಗಟ್ಟುವಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಎಡ ಪಕ್ಷಗಳ ಪ್ರಯತ್ನಗಳಿಗೆ ಸಿಕ್ಕ ಸ್ಪಂದನ ಸ್ವಲ್ಪವೇ. ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಗೆ ಮುಖ್ಯ ಕಾರಣ ಮುಂಗಡ ವ್ಯಾಪಾರ- ಈ ಪ್ರಕ್ರಿಯೆಯಲ್ಲಿರುವ ಜೂಜುಕೋರತನ. ಸಾಕಷ್ಟು ಒತ್ತಡಗಳನ್ನು ಹಾಕಿದ ನಂತರ ಸರಕಾರ ಅಕ್ಕಿ, ಗೋಧಿ, ಧಾನ್ಯಗಳನ್ನು ಇದರ ವ್ಯಾಪ್ತಿಯಿಂದ ಹೊರಗೆ ತಂದಿತು. ಆದರೆ ಇಷ್ಟೇ ಸಾಲದು ಎಂಬುದೀಗ ಸ್ಪಷ್ಟ. ಎಲ್ಲಾ ಜೀವನಾವಶ್ಯಕ ಸಾಮಗ್ರಿಗಳನ್ನು ಈ ಜೂಜುಕೋರತನದಿಂದ ಹೊರತರಬೇಕು. ಜತೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅಂದರೆ ರೇಶನ್ ವ್ಯವಸ್ಥೆಯನ್ನು ಬಲಪಡಿಸಬೇಕು. ಆದರೆ ಮಾಡುತ್ತಿರುವುದು ತದ್ವಿರುದ್ಧ.

ಸರಕಾರದ ಧೋರಣೆಗಳು ಹಿಡಿದಿರುವ ದಿಕ್ಕಿನ ಬಗ್ಗೆ ಜನ ಏನನ್ನುತ್ತಾರೆ ಎಂಬುದು ಇತ್ತೀಚಿನ ವಿಧಾನ ಸಭಾ ಚುನಾವಣೆಗಳಲ್ಲಿ ವ್ಯಕ್ತವಾಗಿದೆ. ಇದು ಈ ಧೋರಣೆಗಳ ರಾಜಕೀಯ ಫಲ! ಜನಗಳ



ಕೃಪೆ: ಹಿಂದೂ

ಹೆಚ್ಚುತ್ತಿರುವ ಅತೃಪ್ತಿ ಪ್ರಕಟವಾಗಿದೆ. ಈ ಅತೃಪ್ತಿಗಳನ್ನು ಕೋಮುವಾದಿ ಶಕ್ತಿಗಳು ಚುನಾವಣೆಗಳಲ್ಲಿ ಬಂಡವಾಳವಾಗಿಸಿಕೊಳ್ಳುವುದನ್ನು ತಡೆಯಬೇಕಾದರೆ ಯುಪಿಎ ಸರಕಾರದ ಧೋರಣೆಗಳ ದಿಕ್ಕು ಬದಲಾಗಬೇಕು, ಜನಗಳ ಕಲ್ಯಾಣದತ್ತ ತಿರುಗಬೇಕು. ಅಂದರೆ ಅದು ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದಲ್ಲಿನ ಜನಪರ ವಚನಗಳ ಅನುಷ್ಠಾನಕ್ಕೆ ಮುಂದಾಗಬೇಕು. ಜನಗಳ ಬದುಕು ಉತ್ತಮ ಗೊಳ್ಳಬೇಕಾದರೆ

ಗುರಿಗಳನ್ನು ತಲುಪಬೇಕಾದರೆ ಸಾಕಷ್ಟು ಸಂಪನ್ಮೂಲಗಳನ್ನೂ ಸಂಗ್ರಹಿಸಬೇಕು. ಆದರೆ ಸರಕಾರ ಇದನ್ನು ತೆರಿಗೆ ಆದಾಯವನ್ನು ಹೆಚ್ಚಿಸುವ ಮೂಲಕ ಮಾಡಲು ಮುಂದಾಗುತ್ತಿಲ್ಲ, ಬದಲಾಗಿ ಯೋಜನೇತರ ಖರ್ಚುಗಳನ್ನು, ಮುಖ್ಯವಾಗಿ ಬಡವರಿಗೆ ಸ್ವಲ್ಪವಾದರೂ ಪರಿಹಾರ ನೀಡುವ ಸಬ್ಸಿಡಿಗಳನ್ನು ಕಡಿತ ಮಾಡುವ ಮೂಲಕ ಪ್ರಯತ್ನಿಸುತ್ತಿದೆ. ತೆರಿಗೆ ಆದಾಯವನ್ನು ಹೆಚ್ಚಿಸುವುದಿರಲಿ, ಹಣಕಾಸು ಸಚಿವಾಲಯದ ಅಂದಾಜುಗಳ ಪ್ರಕಾರ ಹತ್ತನೇ ಯೋಜನೆಯಲ್ಲಿ ವಿವಿಧ ತರಿಗೆ ರಿಯಾಯ್ತಿಗಳಿಂದ ಸರಕಾರೀ ಖಜಾನೆಗೆ 2.35ಲಕ್ಷ ಕೋಟಿ ರೂಪಾಯಿಗಳಷ್ಟು ಖೋತ ಆಗಿದೆ. ಆದರೆ ಹನ್ನೊಂದನೇ ಯೋಜನೆಯೂ ಶ್ರೀಮಂತರಿಗೆ ಮಾತ್ರ ಪ್ರಯೋಜನವಾಗುವ ಈ ರಿಯಾಯ್ತಿಗಳನ್ನು ತೆಗೆಯುವ ಬದಲು ಯೋಜನೇತರ ಖರ್ಚುಗಳನ್ನು, ಸಬ್ಸಿಡಿಗಳನ್ನು ಕಡಿತ ಮಾಡುವ, ಆ ಮೂಲಕ ಜನಸಾಮಾನ್ಯರ ಮೇಲೆ ಹೊರೆಗಳನ್ನು ಇನ್ನಷ್ಟು ಹೆಚ್ಚಿಸುವ ಬಗ್ಗಯೇ ಯೋಚಿಸುತ್ತಿದೆ. ಹೀಗೆ ಮೇಲೆ ಹೇಳಿದ ಎರಡು ಭಾರತಗಳ ನಡುವಿನ ಕಂದರಇನ್ನಷ್ಟು ಹೆಚ್ಚುವ ಲಕ್ಷಣಗಳೇ ಕಾಣುತ್ತಿವೆ.

ಒಂದು ಪೈಸೆ ತೆರಿಗೆ ತೆತ್ತಿಲ್ಲ

ಸಂಪನ್ಮೂಲ ಕ್ರೋಢೀಕರಣ ಹೆಚ್ಚಬೇಕಾದರೆ ದೇಶದಲ್ಲಿನ ತೆರಿಗೆ ನೆಲೆಯನ್ನು ವಿಸ್ತರಿಸಬೇಕು. ಶೇರು ಪೇಟೆ ಸುಗ್ಗಿಯನ್ನೇ ನೋಡಿ. ಈ ಸುಗ್ಗಿಯಲ್ಲಿ ಅಪಾರ ಲಾಭ ಗಿಟ್ಟಿಸಿರುವವರು ಒಂದು ಪೈಸೆ ಕರಿಗೆಯನ್ನೂ ತೆತ್ತಿಲ್ಲ ಎಂಬುದು ನೆನಪಿರಲಿ. ಈ ಸುಗ್ಗಿ ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆಯನ್ನು ಹೆಚ್ಚಿಸಿರಬಹುದು. ಆದರೆ ಕೋಟ್ಯಂತರ ಜನಗಳ ಬದುಕನ್ನು ಉತ್ತಮಗೊಳಿಸಲು ಬೇಕಾಗುವ ಕೋಟ್ಯಂತರ ರೂಪಾಯಿಗಳು ಈ ತೆರಿಗೆ ರಿಯಾಯ್ತಿಗಳಿಂದಾಗಿ ಬೊಕ್ಕಸಕ್ಕೆ ಬರುತ್ತಿಲ್ಲ. ಮುಂಬರುವ ಬಜೆಟ್ ಈ ಬಗ್ಗೆ ಯೋಚಿಸಬೇಕು.

ಒಟ್ಟಿನಲ್ಲಿ ಯುಪಿಎ ಸರಕಾರದ ಉಳಿದ ಅವಧಿಯಲ್ಲಾದರೂ ಜನಗಳ ಬದುಕನ್ನು ಉತ್ತಮಗೊಳಿಸುವ ದಿಕ್ಕಿನತ್ತ ಧೋರಣೆಗಳನ್ನು ಬದಲಿಸಲು ಜನಗಳ ಒತ್ತಡಗಳು ಬಲಗೊಳ್ಳಬೇಕು. ಇದು ಕೋಟ್ಯಂತರ ಭಾರತೀಯರ ಬದುಕನ್ನು ಉತ್ತಮಗೊಳಿಸಲು ಮಾತ್ರವಲ್ಲ, ಕೋಮುವಾದಿ ಶಕ್ತಿಗಳು ಜನಗಳ ಅಸಂತೃಪ್ತಿಯ ಚುನಾವಣಾ ಪ್ರಯೋಜನ ಪಡೆದು ದೇಶದ ಶಾಂತಿ, ನೆಮ್ಮದಿಯನ್ನು ಕೆಡಿಸದಂತೆ ತಡೆಯಲು ಕೂಡಾ ಅಗತ್ಯ.

○

ಅನುಷ್ಠಾನದ ಈ ಪರಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ತಗೊಳ್ಳಿ. ಅದರ ಅನುಷ್ಠಾನದ ಕುರಿತು ಬಂದಿರುವ ಸುದ್ದಿ ಆತಂಕ ಹುಟ್ಟಿಸುತ್ತದೆ. ದೇಶದ ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಯವರ ಪ್ರಕಾರ ಈ ಯೋಜನೆ ಫಲ ನೀಡುತ್ತಿಲ್ಲ. ಈ ಯೋಜನೆಯನ್ನು ದೇಶದ 26 ರಾಜ್ಯಗಳ 200 ಅತಿ ಬಡ ಜಿಲ್ಲೆಗಳಲ್ಲಿ ಆರಂಭಿಸಲಾಯಿತು. ಇವುಗಳಲ್ಲಿ 68 ಜಿಲ್ಲೆಗಳ 513 ಗ್ರಾಮ ಪಂಚಾಯತುಗಳಲ್ಲಿ ಇದು ಹೇಗೆ ಕೆಲಸ ಮಾಡುತ್ತಿದೆ ಎಂದು ಪರಿಶೋಧಿಸಲಾಯಿತು. ಇದು 100ದಿನಗಳ ಕೆಲಸ ಒದಗಿಸುವ ಭರವಸೆ ನೀಡಿದ್ದರೂ ಫೆಬ್ರುವರಿ 2006ರಿಂದ ಮಾರ್ಚ್2007ರ ವರೆಗೆ ಸರಾಸರಿ 18ದಿನಗಳ ಕೆಲಸವನ್ನಷ್ಟೇ ಒದಗಿಸಿದೆ ಎಂದು ಈ ಪರಿಶೋಧನೆಯಿಂದ ಕಂಡು ಬಂದಿದೆ. ದಾಖಲಾದ ಕುಟುಂಬಗಳಲ್ಲಿ 3.2ಶೇ. ಕ್ಕೆ ಮಾತ್ರ 100ದಿನಗಳ ಉದ್ಯೋಗ ಸಿಕ್ಕಿದೆ. ಅದಕ್ಷತೆ, ಭ್ರಷ್ಟಾಚಾರ, ಹಣವನ್ನು ಬೇರೆಡೆ ತಿರುಗಿಸಿದ್ದು, ದುರುಪಯೋಗ ಎಲ್ಲವೂ ನಡೆದಿದೆಯೆಂಬುದು ಸ್ಪಷ್ಟ.

ಅನುಷ್ಠಾನದ ಬಗೆ ಹೀಗಿದ್ದರೆ ಎಂತಹ ಘನ ಉದ್ದೇಶದ ಜನಪರ ಕ್ರಮದಿಂದಲೂ ಜನಗಳಿಗೆ ಪ್ರಯೋಜನ ದಕ್ಕದು, ಬಡವರಿಗೆ ಪರಿಹಾರ ಸಿಗದು. ಈ ಸ್ಕೀಮನ್ನು ಈ ವರ್ಷ 330ಜಿಲ್ಲೆಗಳಿಗೆ ವಿಸ್ತರಿಸಲಾಯಿತು, ಎಪ್ರಿಲ್ 2008ರಿಂದ ಇಡೀ ದೇಶಕ್ಕೆ ವಿಸ್ತರಿಸಲಾಗುತ್ತದೆ. ಆದರೆ ಅನುಷ್ಠಾನದ ಪರಿ ಹೀಗೆಯೇ ಇದ್ದರೆ ಇದು ಭ್ರಷ್ಟಾಚಾರಿಗಳಿಗೆ ಇನ್ನಷ್ಟು ಪ್ರಯೋಜನ ಒದಗಿಸುತ್ತದೆ. ಕಂದರ ಇನ್ನಷ್ಟು ಹೆಚ್ಚುತ್ತದೆ.

ಆದ್ದರಿಂದ ಯುಪಿಎ ಸರಕಾರ ಲೋಪದೋಷಗಳನ್ನು ಸರಿಪಡಿಸಲು ಮುಂದಾಗಬೇಕು, ಅನುಷ್ಠಾನದಲ್ಲಿ ದಕ್ಷತೆ ತರಬೇಕು. ಇದುವರೆಗೆ ಕಾಗದದ ಮೇಲೆಯೇ ಉಳಿದಿರುವ ಸಿಎಂಪಿಯ ಇತರ ಭರವಸೆಗಳನ್ನು ತುರ್ತಾಗಿ ಜಾರಿಗೆ ತರಬೇಕು. ಇಲ್ಲವಾದರೆ ಕೋಮುವಾದಿ ಶಕ್ತಿಗಳು ಇದರಿಂದ ಮತ್ತಷ್ಟು ರಾಜಕೀಯ ಮತ್ತು ಚುನಾವಣಾ ಲಾಭ ಪಡೆಯಲು ಹವಣಿಸುತ್ತವೆ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಹನ್ನೊಂದನೆ ಯೋಜನೆಯನ್ನು ಅಂತಿಮಗೊಳಿಸಿದರೂ ಮುಂಬರುವ ವಾರ್ಷಿಕ ಬಜೆಟನ್ನು ಜನಗಳ ಕಲ್ಯಾಣಕ್ಕೆ ನೆರವಾಗುವ ವಲಯಗಳಿಗೆ ಆದ್ಯತೆ ನೀಡಲು, ಗಮನ ಕೇಂದ್ರೀಕರಿಸಲು ಬಳಸಬೇಕು.

ದೇಶದಲ್ಲಿನ ಉದ್ಯೋಗ ಪರಿಸ್ಥಿತಿಯನ್ನೇ ನೋಡಿ. ಹನ್ನೊಂದನೇ ಯೋಜನೆಯ ದಸ್ತಾವೇಜಿನಲ್ಲಿ ಉದ್ಯೋಗದ ಮೇಲೆ ಒಂದು ಪ್ರತ್ಯೇಕ ಅಧ್ಯಾಯವೇ ಇದೆ. ಇದರ ಪ್ರಕಾರ ದೇಶದಲ್ಲಿ ಹತ್ತನೇ ಯೋಜನೆಯಲ್ಲಿ ಹಿಂದೆ ಉಳಿದ ನಿರುದ್ಯೋಗವನ್ನು ಪರಿಹರಿಸಲಾಗಲಿಲ್ಲ ಮಾತ್ರವಲ್ಲ, ಉದ್ಯೋಗ ಬೆಳವಣಿಗೆ ಕೂಡ ದುಡಿಮೆಗಾರರ ಸಂಖ್ಯೆಯ ಹೆಚ್ಚಳಕ್ಕಿಂತ ಹಿಂದೆಯೇ ಉಳಿದಿದೆ. ಅಂದರೆ ನಿರುದ್ಯೋಗ ಇನ್ನಷ್ಟು ಹೆಚ್ಚಿದೆ. ಹತ್ತನೇ ಯೋಜನೆಯಲ್ಲಿ ನಿರೀಕ್ಷಿತ ಹೂಡಿಕೆ ಆಗಲಿಲ್ಲ, 82.5ಶೇ. ಮಾತ್ರ ಆಯಿತು.

.....ದುಡಿವ ಜನರ ಸವಾಲು

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಜನರ ಮಧ್ಯೆ ಧಾರ್ಮಿಕ ದ್ವೇಷ ಭಾವನೆಗಳನ್ನು ಕೆರಳಿಸುವ ಕೃತ್ಯಗಳನ್ನು ನಿರಂತರವಾಗಿ ನಡೆಸಲಾಗಿದೆ. ಇದರಿಂದ ಬಿಜೆಪಿ ರಾಜಕೀಯವಾಗಿ ಮೊದಲಿನ ಸ್ಥಾನ ಹೊಂದಲು ಸಾಧ್ಯ ಆಗಿದೆ.


ಆಕರ್ಷಕ ಮೆರವಣಿಗೆ

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಸ್ವತಂತ್ರ ಅಭ್ಯರ್ಥಿಯ ಪ್ರಭಾವ ಬಿಜೆಪಿ-ಕಾಂಗ್ರೆಸ್ ಪಕ್ಷಗಳ ಪ್ರಭಾವಕ್ಕಿಂತ ಹೆಚ್ಚು ಎಂದು ಅಂದಾಜಿದೆ.

ವಿಚ್ಛಿದ್ರಕಾರಿ ಚಿಂತನೆಗಳ ಸಂಘಟನೆಗಳಾದ ಮುಸ್ಲಿಂ ಮೂಲಭೂತ ವಾದಿ ಹಾಗೂ ಮುಖ್ಯವಾಗಿ ನಕ್ಸಲರ ನಿಯಂತ್ರಣದಲ್ಲಿರುವ ಕರ್ನಾಟಕ ಕೋಮು ಸೌಹಾರ್ದ ವೇದಿಕೆಗಳು ಆಗಾಗ ಉಡುಪಿ ನಗರದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಎರಡೂ ಸಂಘಟನೆಗಳು ಮೂಲಭೂತ ವಾಗಿ ಸಿಪಿಐ(ಎಂ) ಪಕ್ಷದ ವಿರೋಧಿ ಧೋರಣೆಗಳನ್ನು ಹೊಂದಿದೆ. ಉಡುಪಿ ತಾಲ್ಲೂಕಿನ ಬುದ್ಧಿ ಜೀವಿ ಚಿಂತಕರೆನಿಸಿ ಕೊಳ್ಳುವ ಹಲವಾರು ಮಂದಿ ಈ ಸಂಘಟನೆಗಳ ಬಗ್ಗೆ ಅಭಿಮಾನ ಹೊಂದಿರುವುದು ವಿಷಾದಕರವಾದ ವಿಷಯ.

ಜಿಲ್ಲೆಯ ದುಡಿಯುವ ಜನರು ಎದುರಿಸುತ್ತಿರುವ ಸಮಸ್ಯೆಗಳು, ಕರಾವಳಿಯನ್ನು ರಾಜ್ಯದಲ್ಲಿ ಹಿಂದುತ್ವದ ಪ್ರಯೋಗಶಾಲೆಯನ್ನಾಗಿ ಮಾಡಿ ಕೊಂಡಿರುವ ಸಂಘ ಪರಿವಾರದ ಷಡ್ಯಂತ್ರಗಳು ಹಾಗೂ ಇದನ್ನು ಬಳಸಿಕೊಂಡು ಬೆಳೆಯುತ್ತಿರುವ ಮುಸ್ಲಿಂ ಮೂಲಭೂತವಾದ ಅಪಾಯ ಈ ಎಲ್ಲ ಪ್ರಶ್ನೆಗಳ ಬಗೆಗೆ ಡಿಸೆಂಬರ್ 30,31 ರಂದು ಕುಂದಾಪುರದಲ್ಲಿ ನಡೆದ ಸಿಪಿಐ(ಎಂ) ಪಕ್ಷದ 3ನೇ ಜಿಲ್ಲಾ ಸಮ್ಮೇಳನವು ವಿವರವಾಗಿ ಚರ್ಚಿಸಿತು.

ದುಡಿಯುವ ವರ್ಗದ ಆಂದೋಲನ ವನ್ನು ಪ್ರಬಲಗೊಳಿಸುವುದರ ಜೊತೆಗೆ ರೈತಾಪಿ ಜನರು, ನಿರುದ್ಯೋಗಿ ಯುವಜನರನ್ನು ವಿದ್ಯಾರ್ಥಿ, ಮಹಿಳಾ ಸಮುದಾಯವನ್ನು ಒಳಗೊಂಡ ಒಂದು ಬಲಿಷ್ಠ ಐಕ್ಯ ಚಳುವಳಿಯ ಮೂಲಕ ಸನ್ನಿವೇಶದ ಸವಾಲನ್ನು ಎದುರಿಸಲು, ವ್ಯಾಪಕ ಉದ್ಯೋಗ ಸೃಷ್ಟಿಸುವಂತಹ ಬೆಳವಣಿಗೆಗಾಗಿ ಪ್ರಬಲ ಆಂದೋಲನ ರೂಪಿಸಲು ಸಿಪಿಐ(ಎಂ) ಪಕ್ಷದ ಸಮ್ಮೇಳನ ತೀರ್ಮಾನಿಸಿತು.

○

ದೇಶದ ಭಾರಿ ಹಿಂದುಳಿದ ಜಿಲ್ಲೆಗಳಲ್ಲಿ ಕೋಲಾರ ಸಹ ಒಂದಾಗಿದೆ. ರಾಜ್ಯದಲ್ಲಿ ಬಿಜಾಪುರವನ್ನು ಹೊರತುಪಡಿಸಿದರೆ ಕೋಲಾರ ಮಾತ್ರ ಅತಿ ಹೆಚ್ಚು ಕೃಷಿ ಕೂಲಿ ಕಾರ್ಮಿಕರನ್ನು ಹೊಂದಿರುವ ಜಿಲ್ಲೆಯಾಗಿದೆ. ಶಾಶ್ವತ ನೀರಾವರಿ ಯೋಜನೆಗಳಿಲ್ಲದ ಬರಡು ಜಿಲ್ಲೆಯಾಗಿದೆ. ರೈತರು ಕೊಳವೆ ಬಾವಿಗಳನ್ನೇ ನಂಬಿಕೊಂಡು ಕೃಷಿಯಲ್ಲಿ ತೊಡಗಿಸಿಕೊಳ್ಳುವಂತಾಗಿದೆ. ರೇಷ್ಮೆ, ಹೈನುಗಾರಿಕೆ, ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಜಿಲ್ಲೆಯ ರೈತರು ತಮ್ಮದೇ ಆದ ಛಾಪು ಮೂಡಿಸಿದ್ದರೂ ಶಾಶ್ವತ ನೀರಾವರಿ ಸೌಲಭ್ಯಗಳಿಲ್ಲದೆ ತೊಂದರೆಗೊಳಗಾಗಿದ್ದಾರೆ. ಇದಕ್ಕೊಂದು ಶಾಶ್ವತ ಪರಿಹಾರ ಇನ್ನೂ ಕಾಣದಾಗಿದೆ. ಐದಾರು ವರ್ಷಗಳಿಂದೀಚೆಗೆ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಕೂಡ ಗಣನೀಯವಾಗಿ ಏರಿಕೆಯಾಗಿದೆ. ಕೃಷಿಯಲ್ಲಿನ ಹೂಡಿಕೆ ವೆಚ್ಚ ದಿನೇ ದಿನೇ ಅಧಿಕವಾಗುತ್ತಿರುವುದು ಇನ್ನಷ್ಟು ಸಂಕಷ್ಟಗಳನ್ನು ಹೆಚ್ಚಿಸಿದೆ. ಸರ್ಕಾರ ಕೈಗೊಳ್ಳುವ ಆರ್ಥಿಕ, ಉದಾರೀಕರಣ ನೀತಿಗಳಲ್ಲೇ ರೈತರು ಮತ್ತು ಕೃಷಿ ಕೂಲಿಕಾರ್ಮಿಕ ಸಮಸ್ಯೆಗಳು ಅಡಗಿವೆ. ರೈತ ಸಮುದಾಯದಲ್ಲಿ ಹಲವು ವರ್ಗಗಳ ರೈತರು ಇದ್ದಾರೆ. ರೈತರು ಕೃಷಿ ಕೂಲಿಕಾರ್ಮಿಕರ ನಡುವಿನ ವ್ಯತ್ಯಾಸಗಳಿವೆ. ಯಾವುದೇ ಪ್ರಜಾಪ್ರಭುತ್ವ ಚಳುವಳಿ ಈ ವ್ಯತ್ಯಾಸಗಳ, ವರ್ಗ ಗುಣಗಳ ಸೂಕ್ಷ್ಮತೆಯನ್ನು ಅರಿತು ಚಳವಳಿ ಕಟ್ಟಲು ಕಟಿಬದ್ಧತೆಯನ್ನು ತೋರಬೇಕಿದೆ.

> ಕೃಷಿ ಬಿಕ್ಕಟ್ಟು, ಜಾತಿ ದೌರ್ಜನ್ಯದ ಜೊತೆಗೆ ಇದೀಗ ಕೋಮುವಾದಿಗಳ ತೀವ್ರ ಆಟಾಟೋಪ ಕೋಲಾರ ಜಿಲ್ಲೆಯ ಸಾರ್ವಜನಿಕ ಜೀವನದ ಪ್ರಮುಖ ಅಂಶಗಳಾಗಿವೆ. ಇದರ ಜೊತೆಗೆ ಈಗ ಹಣದಂತಹ ಆಮೀಷಗಳ ರಾಜಕೀಯವೂ ತೀವ್ರಗೊಳ್ಳುತ್ತಿದೆ.

ಆರ್ಥಿಕ, ಸಾಮಾಜಿಕ ರಾಜಕೀಯ ಬಿಕ್ಕಟ್ಟಿನಿಂದ ನಲುಗುತ್ತಿರುವ ಕೋಲಾರ

ಸಾರ್ವಜನಿಕ ಜೀವನದ ಮೇಲೆ 'ಕಾಂಚಾಣ'ದ ಕರಿನೆರಳು

ಅಪ್ಪು

ಜಾತಿವಾದ, ದಬ್ಬಾಳಿಕೆ

ಸಾಮಾಜಿಕ ಸಮಸ್ಯೆಗಳು ಜಿಲ್ಲೆಯನ್ನು ಕಾಡುತ್ತಿರುವ ಮತ್ತೊಂದು ಜ್ವಲಂತ ಸಮಸ್ಯೆಯಾಗಿದೆ. ಸ್ವಾತಂತ್ರ ಪೂರ್ವದಿಂದಲೂ ಮುಂದುವರೆಯುತ್ತಾ ಬಂದಿದ್ದ ಭೂಮಾಲಿಕ, ಜಮೀನ್ದಾರಿ ಪದ್ಧತಿ 50 ದಶಕದಲ್ಲಿ ಆರಂಭವಾದ ಕಮ್ಯೂನಿಸ್ಟ್ ಚಳವಳಿ ತೀವ್ರವಾಗಿ ಸೆಣಸಿತು. ಆದರೆ ಜಮೀನ್ದಾರಿ ಮೌಲ್ಯಗಳು ಇನ್ನೂ ಉಳಿದುಕೊಂಡಿರುವುದು ಇಂದಿನ ಸಾಮಾಜಿಕ ಪರಿಸ್ಥಿತಿಗೆ ಪ್ರಮುಖ ಕಾರಣವಾಗಿದೆ. ಇದಲ್ಲದೆ ಸಮಾಜದಲ್ಲಿ ಬೇರೂರಿರುವ ಆರ್ಥಿಕ ಅಸಮಾನತೆ ಮತ್ತೊಂದು ಪ್ರಮುಖ ಕಾರಣವಾಗಿದೆ. ಏಳು ಜನ ದಲಿತರನ್ನು ಸಜೀವವಾಗಿ ಕೊಂದ ಕಂಬಾಲಪಲ್ಲಿ, ನಾಗಲಾಪಲ್ಲಿಯಂತಹ



ಘಟನೆಗಳು ಈಗಲೂ ಮರುಕಳಿಸುತ್ತಿರುವುದಕ್ಕೆ ನೀಚ, ಜಾತಿವಾದ ಭೂಮಾಲಿಕ ಜಮೀನ್ದಾರಿ ಮೌಲ್ಯಗಳೇ ಕಾರಣ. ಹಾಗಿದ್ದರೂ ಯಾವುದೇ ಬಹುತೇಕ ಪಕ್ಷಗಳು, ಸಂಘಸಂಸ್ಥೆಗಳು ಈ ಕುರಿತು ಗಂಭೀರ ಚಿಂತನೆಗಳನ್ನು ನಡೆಸುತ್ತಿಲ್ಲ. ಹಲವು ರಾಜಕಾರಣಿಗಳು, ಸಂಘಸಂಸ್ಥೆಗಳು ಇಂತಹ ಕೃತ್ಯಗಳಿಗೆ ಕೆಲವೊಮ್ಮೆ ನೇರವಾಗಿ ಕೆಲವೊಮ್ಮೆ ಪರೋಕ್ಷವಾಗಿ ಬೆಂಬಲ ನೀಡುತ್ತಿವೆ. ಕಂಬಾಲಪಲ್ಲಿ ಹತ್ಯಾಕಾಂಡವಾದಾಗ ನಾ ಮುಂದು ತಾ ಮುಂದು ಎಂದು ಅಲ್ಲಿಗೆ ಭೇಟಿ ನೀಡಿದ್ದ ವಿವಿಧ ಪಕ್ಷಗಳ ನಾಯಕರು, ತೀರ್ಪು ಹೊರಬಿದ್ದು ಆರೋಪಿಗಳು ಖುಲಾಸೆಯಾದಾಗ ಒಬ್ಬರೂ ಚಕಾರ ಎತ್ತಲಿಲ್ಲ. ಕಮ್ಯೂನಿಸ್ಟ್ ಪಕ್ಷವನ್ನು ಹೊರತುಪಡಿಸಿ ಯಾರೊಬ್ಬರೂ ತುಟಿ ಬಿಚ್ಚದಿರುವುದು ಅವರು ಹೊಂದಿರುವ ಕಾಳಜಿಗೆ ಕನ್ನಡಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿನ ಸಾಮಾಜಿಕ ಪರಿಸ್ಥಿತಿ ಯನ್ನು ಸರಿಪಡಿಸಿ, ಜಾತಿ, ಜನಾಂಗಗಳ ನಡುವೆ ಸಾಮರಸ್ಯ ಮೂಡಿಸುವುದು ಸವಾಲಿನ ಪ್ರಶ್ನೆಯೇ ಆಗಿದೆ.

ಕೋಮುವಾದಿಗಳು ಜಿಲ್ಲೆಯಲ್ಲಿನ ಎಲ್ಲ ಸ್ತರಗಳಿಗೂ ಅತಿ ವೇಗವಾಗಿ ಪ್ರವೇಶಿಸುತ್ತಿದ್ದಾರೆ. ಇದನ್ನು ಯಶಸ್ವಿಯಾಗಿ ಪ್ರತಿರೋಧಿಸುವುದು ಜನಪರ ಚಳುವಳಿಯ ಪ್ರಮುಖ ಜವಾಬ್ದಾರಿಗಳಲ್ಲಿ ಒಂದಾಗಿದೆ. ದಲಿತರು, ಹಿಂದುಳಿದವರನ್ನು ವೋಟ್ ಬ್ಯಾಂಕ್‌ಗಳಾಗಿ ರೂಪಿಸಲು ಕೋಮುವಾದಿ ಪಕ್ಷಗಳು ಹವಣಿಸುತ್ತಿದ್ದಾರೆ.

ಪರಮಶಿವಯ್ಯ ವರದಿಯನ್ನು ಅನುಷ್ಠಾನಗೊಳಿಸಲು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಕೈಗೊಂಡ ಹೋರಾಟಗಳನ್ನು ಮುಂದುವರಿಸಿ ಈ ಹೋರಾಟಗಳನ್ನು ಯಶಸ್ವಿಗೊಳಿಸುವ ತನಕ ಹಿಂದೆಜ್ಜೆ ಇಡಬಾರದೆಂಬ ದೃಢತೆಯೊಂದಿಗೆ ಚಳುವಳಿ ಮುಂದುವರಿಯಬೇಕಾದ ಅಗತ್ಯವಿದೆ.

ಕಾಂಚಾಣದ ಕರಿನೆರಳು

ಕೋಲಾರ ಜಿಲ್ಲೆಯಲ್ಲಿ ತಮ್ಮ ರಾಜಕೀಯ ಅಸ್ತಿತ್ವ ಸ್ಥಾಪಿಸಿಕೊಳ್ಳಲು ಭೂಮಿ, ಲಿಕ್ಕರ್ ಮದ್ಯ ಮತ್ತು ಗಣಿ ಮಾಫಿಯಾಗಲು ದಾಳಿ ಇಡುತ್ತಿದ್ದಾರೆ. ತಮ್ಮಲ್ಲಿರುವ ಕಪ್ಪು ಹಣವನ್ನು ಸ್ತ್ರೀ ಶಕ್ತಿ ಸಂಘಗಳು, ಹಲವಾರು ಸಣ್ಣ ಪುಟ್ಟ ರಾಜಕೀಯ ಮುಖಂಡರು, ರೋಲ್‌ಕಾಲ್ ನಾಯಕರು, ಸಂಘಸಂಸ್ಥೆಗಳಿಗೆ ಹಂಚುವ ಮೂಲಕ ರಾಜಕೀಯ ದಾಳ ಉರುಳಿಸುವ ಕೃತ್ಯಗಳಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ಮತ್ತು ಜನತಾದಳ ಬಿಜೆಪಿಗಳು ಇದರಿಂದ ಹೊರತಾಗಿಲ್ಲವಾದರೂ ಇವರು ಹೆಚ್ಚಾಗಿ ಚುನಾವಣೆ ಸಂದರ್ಭಗಳಲ್ಲಿ ಮಾತ್ರ ಹಂಚುತ್ತಿದ್ದರು. ಅದರೆ ಮಾಪಿಯಾಗಳು ಈಗಿನಿಂದಲೇ ಶುರು ಮಾಡಿದ್ದಾರೆ. ತಮ್ಮ ಚೇಲಾಗಳೊಂದಿಗೆ ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ಹಣ ಹಂಚುವ ಕಾರ್ಯದಲ್ಲಿ ತೊಡಗಿದ್ದಾರೆ. ಇಡೀ ಜಿಲ್ಲೆಯ ವಾತಾವರಣವನ್ನು ಹಣದ ರಾಜಕೀಯವಾಗಿ ಪರಿವರ್ತಿಸಿದ್ದಾರೆ.

ಶಾಶ್ವತ ನೀರಾವರಿ ಯೋಜನೆಗಳ ಜಾರಿ, ರೈತರ ಫಸಲಿಗೆ ಲಾಭದಾಯ ಬೆಲೆ, ರೈತರಿಗೆ ಕಡಿಮೆ ದರದಲ್ಲಿ ಸಾಲ ಸೌಲಭ್ಯ, ಉದ್ಯೋಗ ಖಾತರಿ ಯೋಜನೆ ಜಾರಿಗೆ ಒತ್ತಾಯಿಸಿ, ಮಹಿಳೆಯರ ಸಮಸ್ಯೆಗಳ ವಿರುದ್ಧ, ಕೋಮುವಾದದ ವಿರುದ್ಧ ನಿರ್ಣಾಯಕ ಹೋರಾಟ ಬೆಳೆದು ಬರಬೇಕಾಗಿದೆ.

ಕೃಷಿ ಕೂಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಟ, ಕೆಜಿಎಫ್ ಚಿನ್ನದ ಗಣಿ ಮನಃಶ್ಚೇತನಕ್ಕೆ ಹೋರಾಟ ಮಾಡುವುದು ಸೇರಿದಂತೆ ಹಲವಾರು ಜಿಲ್ಲೆಯ ಜನರ ಮುಂದೆ ದೊಡ್ಡ ಸವಾಲೇ ಇದೆ. ಜಿಲ್ಲೆಯಲ್ಲಿ ಹಲವು ಸಾಮಾಜಿಕ ರಾಜಕೀಯ, ಆರ್ಥಿಕ ಸಮಸ್ಯೆಗಳನ್ನು ಆ ಸಮಸ್ಯೆಗಳ ಮೂಲ ಕಾರಣಗಳ ಕುರಿತು ಗೌರಿಬಿದನೂರಿನಲ್ಲಿ ಡಿಸೆಂಬರ್ 26,27,28 ರಂದು ಮರು ದಿನಗಳ ಕಾಲ ನಡೆದ ಸಿಪಿಐ(ಎಂ) ಪಕ್ಷದ ಕೋಲಾರ ಜಿಲ್ಲಾ ಸಮ್ಮೇಳನವು ತೀವ್ರವಾಗಿ ಚರ್ಚಿಸಿತು.

ತನ್ನದೇ ಆದ ವಿಶಿಷ್ಟ ವರ್ಗ ದೃಷ್ಟಿ ಕೋನದಿಂದ ಈ ಸಮಸ್ಯೆಗಳ ಕುರಿತು ಚರ್ಚಿಸಿದ ಸಮ್ಮೇಳನವು ಮುಂದಿನ ದಿನಗಳಲ್ಲಿ ಶಾಶ್ವತ ನೀರಾವರಿಗಾಗಿ ಹೋರಾಟ ಮುಂದುವರಿಸುವುದು ಸೇರಿದಂತೆ ಹಲವು ಅಗತ್ಯ ನಿರ್ಣಯಗಳನ್ನು ಕೈಗೊಂಡಿತು. ಕೋಮುವಾದ ವಿರೋಧಿ ಹೋರಾಟ, ಜಾತಿಯತೆ, ಅಸ್ಪೃಶ್ಯತೆ ವಿರೋಧಿ ಹೋರಾಟವನ್ನು ಬಲಪಡಿಸಿ ಜಿಲ್ಲೆ ಸದೃಢವಾದ ಪಕ್ಷದ ಸಂಘಟನೆಯನ್ನು ಕಟ್ಟಲು ಅದು ತೀರ್ಮಾನಿಸಿತು.

ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ತೀವ್ರವಾದ ಚರ್ಚೆ ನಡೆಸಿದ ಜಿಲ್ಲೆಯಲ್ಲಿ ಬಲಿಷ್ಠವಾದ ಯುವಜನ ಚಳುವಳಿಯನ್ನು ಕಟ್ಟಿ ಬೆಳೆಸಲು ಅಗತ್ಯವಾದ ಗಮನ ನೀಡಬೇಕೆಂದೂ ನಿರ್ಣಯಿಸಿತು.

ಸಿಪಿಐ(ಎಂ)ನ ಸಮ್ಮೇಳನ ಈ ಹಿಂದೆ ನಡೆದಾಗ ಕೋಲಾರ ಒಂದು ಜಿಲ್ಲೆಯಾಗಿತ್ತು. ಈ ಇದೇ ಪ್ರದೇಶ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಎಂಬ ಎರಡು ಜಿಲ್ಲೆಗಳಾಗಿ ವಿಭಜನೆಯಾಗಿದೆ ಹೀಗಾಗಿ ಎರಡು ಜಿಲ್ಲಾ ಸಮಿತಿಗಳನ್ನು ಸಮ್ಮೇಳನವು ಚುನಾಯಿಸಿತು.

ನೂತನ ಕೋಲಾರ ಜಿಲ್ಲಾ ಸಮಿತಿ

ನಂತರ ನಡೆದ ಜಿಲ್ಲಾ ಸಮಿತಿ ಸಭೆಯಲ್ಲಿ ಕಾರ್ಯದರ್ಶಿಯಾಗಿ ಜಿ. ಅರ್ಜುನನ್ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಗಾಂಧಿನಗರ ನಾರಾಯಣ ಸ್ವಾಮಿ, ಹೋಳೂರು ಶಂಕರ್, ಪಿ.ಶ್ರೀನಿವಾಸ್, ಪಿ.ಆರ್. ಸೂರಿ ನಾರಾಯಣ ಆಯ್ಕೆಯಾದರು. ಸದಸ್ಯರಾಗಿ ಎ.ವಿ.ವೆಂಕಟರಾಮ್, ವಿ.ಗೀತಾ, ಆನಂದ್‌ರಾಜ್, ಈಶ್ವರಮ್ಮ, ಎಲ್.ರಾಮಚಂದ್ರ, ಎ.ಆರ್.ಬಾಬು, ಬಿ.ವಿ.ಸಂಪಂಗಿ ಆಯ್ಕೆಯಾಗಿದ್ದಾರೆ.

ಚಿಕ್ಕಬಳ್ಳಾಪುರ ನೂತನ ಸಮಿತಿ

ಹಾಗೆಯೇ ಚಿಕ್ಕಳಬಳ್ಳಾಪುರ ನೂತನ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಜಿ.ವಿ.ಶ್ರೀರಾಮರೆಡ್ಡಿ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಸಿ.ಡಿ.ಗಂಗುಲಪ್ಪ, ವೆಂಕಟಸ್ವಾಮಿ ರೆಡ್ಡಿ, ಸಿದ್ಧಗಂಗಪ್ಪ, ಗಂಗಿರೆಡ್ಡಿ ಆಯ್ಕೆಯಾದರು. ಸದಸ್ಯರಾಗಿ ವಿ.ಕೃಷ್ಣಾರೆಡ್ಡಿ, ಬಿಳ್ಳುರು ನಾಗರಾಜ್, ವಿ.ಗೋಪಿನಾಥ್, ಎಂ.ಪಿ.ಮುನಿವೆಂಕಟಪ್ಪ, ಚನ್ನರಾಯಪ್ಪ, ಜಿ.ಎನ್.ಶ್ರೀರಾಮಪ್ಪ, ಎ. ವೆಂಕಟರಾವ್, ಅಕ್ರಂ ಪಾಷ, ಲಕ್ಷ್ಮೀ ನಾರಾಯಣ, ಸಿ.ಸಿ. ಅಶ್ವಥ್ ಆಯ್ಕೆಯಾಗಿದ್ದಾರೆ.

ಕೋಲಾರದಲ್ಲಿ ಕೋಮುವಾದಿಗಳ ಆಟಾಟೋಪ

ಸಂಘಪರಿವಾರ ಜಿಲ್ಲಾದ್ಯಂತ ಹವ್ಯಾಹತವಾಗಿ ದಾಳಿಗಳನ್ನು ನಡೆಸುತ್ತಿದೆ. ಆರು ತಿಂಗಳ ಹಿಂದಷ್ಟೇ ಮುಳಬಾಗಿಲು ತಾಲೂಕಿನ ಹಲವಾರು ಗ್ರಾಮಗಳಲ್ಲಿ ಸಮಾಜಸೇವೆ, ಸಾಕ್ಷರ ಕಾರ್ಯಕ್ರಮಗಳು, ಆರೋಗ್ಯ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದ ಕ್ರೈಸ್ತ ಸನ್ಯಾಸಿಗಳ ಮೇಲೆ ಮತಾಂತರದ ನೆಪ ಒಡ್ಡಿ ಗಂಭೀರ ದಾಳಿಗಳನ್ನು ನಡೆಸಲಾಗಿದೆ. ಮತಾಂತರ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂಬ ನೆಪ ಒಡ್ಡಿ ಕೋಲಾರ ತಾಲೂಕಿನಲ್ಲಿ ಬಜರಂಗಿಗಳು ಹಾಡುಹಗಲೇ ಹಲ್ಲೆ ನಡೆಸಿ ರಸ್ತೆಯುದ್ದಕ್ಕೂ ಮೆರವಣಿಗೆ ನಡೆಸಿದ್ದಾರೆ. ಕೋಲಾರ ತಾಲೂಕಿನ ವಡಗೂರು ಮತ್ತು ಅರಹಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂತದೇ ದುಷ್ಕೃತ್ಯಗಳಲ್ಲಿ ತೊಡಗಿದ್ದಾರೆ. ಯಾವುದೇ ಗ್ರಾಮ, ವಾರ್ಡ್‌ನಲ್ಲಿ ಸಮಾಜಸೇವೆಯಲ್ಲಿ, ಸಾಕ್ಷರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವವರನ್ನು ಇತರ ಜನತೆಯನ್ನು ಎತ್ತಿಕಟ್ಟಿ ಕೆಲಸಗಳನ್ನು ಮಾಡುತ್ತಿದ್ದಾರೆ.

ತಾಲೂಕಿನ ಪುರಾತನ, ಪ್ರಸಿದ್ಧ ಯಾತ್ರಾಸ್ಥಳವಾದ ಅಂತರಗಂಗೆಯಲ್ಲಿ ಕಾರ್ತಿಕ ಸೋಮವಾರಗಳಂದು ಜಾತ್ರೆಯ ನೆಪ ಒಡ್ಡಿ ಅಲ್ಲಿಗೆ ಆಗಮಿಸುವ ಭಕ್ತರುಗಳ ಮನಸ್ಸಿನಲ್ಲಿ ಕೋಮು ವಿಷ ಬೀಜಗಳನ್ನು ತುಂಬುತ್ತಿದ್ದಾರೆ. ಅಂತರಗಂಗೆಯನ್ನು ಮತ್ತೊಂದು ಬಾಬಾ ಬುಡನ್‌ಗಿರಿ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಕಾರ್ತಿಕ ಸೋಮವಾರದ ಸಂದರ್ಭದಲ್ಲಿ ಇಡೀ ಬೆಟ್ಟ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರಚೋದನಕಾರಿ ಘೋಷ ವಾಕ್ಯಗಳನ್ನು ಬರೆದಿದ್ದಾರೆ. ಇದು ನೋಡುಗರಲ್ಲಿ ಆಕ್ರೋಶ ಮತ್ತು ನೆರೆಹೊರೆಯವರಲ್ಲಿ ದ್ವೇಷ ಭಾವನೆಯನ್ನು ಮೂಡಿಸುತ್ತಿದೆ. ಬಡವರು, ದಲಿತರು, ಹಿಂದುಳಿದ ಜನಾಂಗಗಳನ್ನು ಹೆಕ್ಕಿ ಹೆಕ್ಕಿ ಅವರಿಗೆ ಹೆಂಡ, ಹಣ ಮತ್ತಿತರ ಆಮಿಷಗಳನ್ನು ತೋರಿಸಿ ತಮ್ಮ ಜೊತೆ ಸೇರಿದೊಡನೆ ಅವರಲ್ಲಿ ಅಲ್ಪಸಂಖ್ಯಾತ ವಿರೋಧಿ ಭಾವನೆಗಳನ್ನು ಮೂಡಿಸಲು ಸಂಘಪರಿವಾರ ವ್ಯವಸ್ಥಿತ ಸಂಚು ರೂಪಿಸಿದೆ.

ಚಿಂತಾಮಣಿ, ಮುಳಬಾಗಿಲು, ಮಾಲೂರು, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೌರಿಬಿದನೂರು, ಶ್ರೀನಿವಾಸಪುರ ತಾಲೂಕುಗಳಲ್ಲಿ ಹಿಂದೂ ಸಮಾಜೋತ್ಸವಗಳನ್ನು ಸಂಘಟಿಸಲಾಗಿದೆ. ಕೋಟ್ಯಾಂತರ ರೂ.ಗಳನ್ನು ವ್ಯಯ ಮಾಡಲಾಗಿದೆ. ಒಂದೆಡೆ ಸಂಘಪರಿವಾರ ಕೋಮುಚಟುವಟಿಕೆಗಳಲ್ಲಿ ತೊಡಗಿದ್ದರೆ ಮತ್ತೊಂದೆಡೆ ಮುಸ್ಲಿಂ ಮೂಲಭೂತವಾದಿಗಳು ಸಹ ಹಲವೊಮ್ಮೆ ಪ್ರಚೋದನಕಾರಿ ಕೃತ್ಯಗಳಲ್ಲಿ ತೊಡಗುತ್ತಾರೆ. ಧರ್ಮದ ಹೆಸರಿನಲ್ಲಿ ಆ ಸಮುದಾಯದ ಮುಖಂಡರು ಕೈಗೊಳ್ಳುವ ಕಾರ್ಯಕ್ರಮಗಳು ಆ ಜನಾಂಗದಲ್ಲಿರುವ ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆ, ಮೌಢ್ಯವನ್ನು ಮರೆಮಾಚುತ್ತಿದೆ. ಮುಸ್ಲಿಂ ಸಮುದಾಯ ಧರ್ಮಕ್ಕೆ ಕೊಡುವ ಪ್ರಾಮುಖ್ಯತೆ ವರಲ್ಲಿ ಹಾಸುಹೊಕ್ಕಾಗಿರುವ ಸಾಮಾಜಿಕ, ಆರ್ಥಿಕ ಅಸಮಾನತೆ, ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ನೀಡುತ್ತಿಲ್ಲ. ಇದು ಮತ್ತೊಂದೆಡೆ ಸಮಾಜಕ್ಕೆ ಅಪಾಯಕರ.

ಪಶ್ಚಿಮ ಬಂಗಾಳದಲ್ಲಿ ಅಂಗವಿಕಲರ ಹಕ್ಕಿಗಾಗಿ ದಿಟ್ಟ ಕ್ರಮಗಳು

ಅಧ್ಯಯನ ಪ್ರವಾಸದ ಅನುಭವ

ಅಂಗವಿಕಲರೊಳಗಿನ ವಿಶಿಷ್ಟ ಸಾಮರ್ಥ್ಯವನ್ನು ಗುರುತಿಸಿ ಸಾಧನೆಗೆ ಪೂರಕ ಅವಕಾಶ ನೀಡಿದಲ್ಲಿ ಅವರು ಪರಾವಲಂಬಿಗಳಾಗಬೇಕಿಲ್ಲ, ಸ್ವಾಭಿಮಾನದ, ಆತ್ಮಗೌರವದ ಬದುಕನ್ನು ರೂಪಿಸಿಕೊಳ್ಳಬಲ್ಲರು ಮಾತ್ರವಲ್ಲ, ಸಾಮಾಜಿಕ ಪ್ರಗತಿಗೂ ಉತ್ತಮ ಕಾಣಿಕೆ ನೀಡಬಲ್ಲರು ಎಂಬುದು ಪಶ್ಚಿಮ ಬಂಗಾಳ ರಾಜ್ಯದ ಅನುಭವ. ಅಧ್ಯಯನ ಪ್ರವಾಸದಲ್ಲಿ ತಾವು ಕಂಡದ್ದನ್ನು ತೆರೆದಿಟ್ಟಿದ್ದಾರೆ

ಸುರೇಶ್ ಕುಷ್ಟಗಿಯವರು

ಕಳೆದ ಎಂಟು ವರ್ಷಗಳಿಂದ ರಾಯಚೂರಿನ ನವಚೇತನ ಅಂಗವಿಕಲರ ಸಂಸ್ಥೆಯಿಂದಾರಂಭಿಸಿ, ರಾಯಚೂರು ಜಿಲ್ಲಾ ಅಂಗವಿಕಲರ ಒಕ್ಕೂಟದ, ಹಾಗೂ ಆಮನಾಲರ್ ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟವನ್ನು ಕಟ್ಟಿ ಬೆಳೆಸುವಲ್ಲಿ, ಅಂಗವಿಕಲರ ಹಕ್ಕಿನ ಹೋರಾಟಕ್ಕೆ ಕೆಲಸ ಮಾಡುವಲ್ಲಿ ನಿರತನಾಗಿದ್ದ, ನನಗೆ ಸ್ವತಃ ಅಂಗವಿಕಲತೆಯ ಅನುಭವ ಹಾಗೂ ಅದರ ನಿರಂತರ ಸವಾಲಗಳನ್ನು ಎದುರಿಸುವಲ್ಲಿ ಅಂತೆಯೇ ಸಾರ್ವತ್ರಿಕವಾಗಿ ಅಂಗವಿಕಲ ಜನ ಸಮುದಾಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಹಾಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ದೈಹಿಕ ಹಾಗೂ ಮಾನಸಿಕವಾಗಿ ಎದುರಿಸಬೇಕಾಗಿ ಬರುವ ಅಡೆತಡೆಗಳನ್ನು ನಿವಾರಿಸುವಲ್ಲಿ, ಸಾಮೂಹಿಕ ಚಳುವಳಿಯ ಅಸ್ತ್ರ ನನ್ನ ಸ್ಪೂರ್ತಿಯಾಗಿತ್ತು. 'ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್' ಡಿವೈಎಫ್ಐ ನಲ್ಲಿ ಕೆಲಸ ಮಾಡಿದ, ತೊಡಗಿಸಿಕೊಂಡ ಸಾಮೂಹಿಕ ಚಳುವಳಿಗಳ ಅನುಭವ ನನ್ನ ಪ್ರೇರಕ ಶಕ್ತಿಯಾಗಿತ್ತು.

ಬದುಕಿನ ಗತಿಯ ತಿರುವೊಂದರಲ್ಲಿ ಬೆನ್ನು ಮೂಳೆಯ ಆಪರೇಷನ್‌ಗೆ ಒಳಗಾದ ನಾನು ನನ್ನ ಎರಡೂ ಕಾಲುಗಳಲ್ಲಿಯ ಸ್ವಾಧೀನ ಕಳೆದುಕೊಂಡು, ಅಂಗವಿಕಲತೆಗೀಡಾದಾಗ, ದಿಕ್ಕು ತೋಚದಂತಾಗಿತ್ತು. ಆ ಸ್ಥಿತಿಯಲ್ಲಿಯೇ ಸಂಘಟಿತ ಪ್ರಯತ್ನಗಳ. ಹಿಂದಿನ ಸಾಮೂಹಿಕ ಚಳುವಳಿಯ ಪ್ರೇರಕ ಶಕ್ತಿ, ಅಂಗವಿಕಲರ ಹಕ್ಕಿನ ಹೋರಾಟದಲ್ಲಿ ಮುನ್ನಡೆಯುವಂತೆ ಮಾಡಿತ್ತು.

ಈ ಹಂತದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರೊಂದಿಗಿನ ಹಲವು ಚರ್ಚೆಗಳು ಹಾಗೂ ಮಾರ್ಗದರ್ಶನಗಳು, ನಾನು ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟವನ್ನು ಕಟ್ಟುವಲ್ಲಿ, ಅದರ ಸ್ಥಾಪಕ ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುವಲ್ಲಿ ಬಹು ಉಪಯುಕ್ತವಾಗಿದ್ದವು. ಅಂಥದೇ ಒಂದು ಸಂದರ್ಭದಲ್ಲಿ ಫೋನ್ ಕರೆಯ ಮೂಲಕ ಜಿ.ಎನ್. ಅವರು, ಕೋಲ್ಕೊತ್ತಾಗೆ ಭೇಟಿ ನೀಡುವಂತೆ ಸೂಚಿಸಿದ್ದಲ್ಲದೆ, ಕಾಂತಿ ಗಂಗೂಲಿಯವರೊಂದಿಗೆ ಮಾತನಾಡಿ ಈ ಡಿಸೆಂಬರ್ 3, 2007 ರಂದು ನಡೆಯುವ ವಿಶ್ವ ಅಂಗವಿಕಲರ ದಿನಾಚರಣೆಯ ಸಂದರ್ಭದ 4 ದಿನಗಳ ಭೇಟಿಗೆ ಕೂಡಾ ಅನುವು ಮಾಡಿಕೊಟ್ಟರು. ಆದರ ಫಲವಾಗಿ ರಾಯಚೂರಿನ ವಕೀಲ ಗೆಳೆಯ ಹಾಗೂ ರಾಯಚೂರು ಜಿಲ್ಲಾ ಒಕ್ಕೂಟ ರಚನೆಯಲ್ಲಿ ನನ್ನ ಪ್ರಯತ್ನಗಳಿಗೆ ಇಂಬಾಗಿ ನಿಂತ, ಸಹೃದಯಿ ಶಿವಶಂಕರ್ ಬಾಳೆ ಹಾಗೂ



ಅಂಗವಿಕಲರಿಂದ 'ಪರಿಸರ ರಕ್ಷಣೆ'ಯ ನಾಟಕ ಪ್ರದರ್ಶನ

ಹಗರಿಬೊಮ್ಮನಹಳ್ಳಿಯ ಸಂಗಾತಿ ರಂಗಪ್ಪ ದಾಸರ್ ಹಾಗೂ ನಮ್ಮ 3 ಜನ ಅಂಗವಿಕಲರಿಗೆ ಸಹಾಯಕನಾಗಿ ಬಂದ ಶರಣಪ್ಪ ಮಡಿವಾಳ ಸೇರಿದಂತೆ ಒಟ್ಟು ನಾಲ್ಕು ಜನರು, ಡಿಸೆಂಬರ್ 2 ರಿಂದ 5ರವರೆಗೆ 4 ದಿನಗಳ ಕಾಲ ಪಿಆರ್‌ಪಿಎಸ್ ಸಂಘಟನೆಯ ಅಧ್ಯಯನ ಪ್ರವಾಸ ಕೈಗೊಂಡೆವು. ಈ ನಾಲ್ಕು ದಿನಗಳ ಅವಿಸ್ಮರಣೀಯ ಪ್ರವಾಸ ನಮ್ಮನ್ನು ವಿಭಿನ್ನ ಸಮರ್ಥರ ವಿಶಿಷ್ಟ ಜಗತ್ತಿಗೆ ಕೊಂಡೊಯ್ದಿತ್ತು. ಜನಶಕ್ತಿಯ ಓದುಗರನ್ನು ಈ ಲೇಖನದ ಮೂಲಕ ಆ ಜಗತ್ತಿಗೆ ಕರೆದೊಯ್ಯುವ ಪ್ರಯತ್ನ ನನ್ನದು.

ವಿಭಿನ್ನ ಸಮರ್ಥರ ವಿಶಿಷ್ಟ ಜಗತ್ತು

ಅಂಗವಿಕಲರ ಹಕ್ಕಿನ ಹೋರಾಟದ 30 ವರ್ಷಗಳ ಇತಿಹಾಸ: ಸ್ವತಂತ್ರ ಭಾರತದ ಜನಪರ ಹೋರಾಟದ ಹರಿಕಾರರಾದ ಪಶ್ಚಿಮ ಬಂಗಾಲದ ಜನತೆಯ ಹೋರಾಟದ ಪಥ ಭಾರತ ದೇಶದ ಎಲ್ಲ ಜನಪರ ಚಳುವಳಿಗಳಿಗೆ ಮಾದರಿ ಯಾಗಿರುವಂತೆಯೇ ಅಂಗವಿಕಲ ವ್ಯಕ್ತಿಗಳ ಸಮಾನ ಹಕ್ಕು, ಸಮಾನ ಅವಕಾಶ, ಹಾಗೂ ಸಾಮಾಜಿಕ ಮುಖ್ಯ ವಾಹಿನಿಯಲ್ಲಿ ಸಂಪೂರ್ಣ ಸಹಭಾಗಿತ್ವಕ್ಕಾಗಿ ಕಳೆದ 30 ವರ್ಷಗಳಿಂದ ನಡೆದ ಸಾಮೂಹಿಕ ಚಳುವಳಿ ಮತ್ತು ಅದರ ವ್ಯಾಪಕ ಸಾಮಾಜಿಕ ಪರಿಣಾಮಗಳು, ಇಡೀ ದೇಶಕ್ಕೆ ಅನುಕರಣೀಯ ಮಾದರಿಯಾಗಿದೆ ಎಂದರೆ ಖಂಡಿತಾ ಉತ್ಪ್ರೇಕ್ಷೆಯಾಗಲಾರದು.

ಅಂಗವಿಕಲತೆಯ ಸಮಸ್ಯೆಯ ಪರಿಮಾಣವು ಬಹು ವ್ಯಾಪಕವಾದದದ್ದು, ಮಾತ್ರವಲ್ಲ, ಅದರ ಪರಿಣಾಮಗಳು ವ್ಯಕ್ತಿಯ ಮೇಲೆ, ಕುಟುಂಬದ ಮೇಲೆ ಹಾಗೂ ಒಟ್ಟಾರೆ ಸಮಾಜದ ಮೇಲೆ ಹಲವು ರೀತಿಯದ್ದಾಗಿದೆ. ಅದು ಒಡ್ಡುವ ಸವಾಲುಗಳು, ಒಟ್ಟಾರೆ ಸಾಮಾಜಿಕ ಅಭಿವೃದ್ಧಿಯ, ಆರ್ಥಿಕ ಬೆಳವಣಿಗೆಯ ಸವಾಲುಗಳೂ ಆಗಿ ಪರಿಣಮಿಸಿದೆ.

ಹೀಗೆ ಪರಿಹಾರೋಪಾಯಗಳು ಇಂದು ಸುಲಭ ಸಾಧ್ಯವಾಗಿಲ್ಲ, ಇದನ್ನೆಲ್ಲ ಹೇಳುವಾಗಲೇ ಮನುಷ್ಯನ ಕೃತರ್ತತ್ವಶಕ್ತಿಗೆ, ಕ್ರಿಯಾಶೀಲತೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬ ಅನುಭವದ ಮಾತನ್ನು ನಾವು ನೆನಪಿಸಿಕೊಳ್ಳಬೇಕಿದೆ. ಈ ಮಾತಿಗೆ, ಜೀವಂತ ನಿದರ್ಶನಗಳಾದ ಹೆಲನ್ ಕಿಲ್ಲರ್, ಸ್ಟೀಫನ್ ಹಾಕಿಂಗ್‌ರಂತಹ ಮಹಾನ್ ವ್ಯಕ್ತಿತ್ವಗಳು ಸಾಕ್ಷಿಯಾಗಿದ್ದಾರೆ.

ಹಾಗಾದರೆ ಅಂಗವಿಕಲತೆಯ ಸವಾಲನ್ನು ಸಮರ್ಥವಾಗಿ ಎದುರಿಸುವಲ್ಲಿ ಅಡ್ಡಿಯಾಗಿರುವುದೇನು ಎಂಬ ಪ್ರಶ್ನೆ ಉದ್ಭವಿಸುತ್ತದಲ್ಲವೇ?

ಅಂಗವಿಕಲತೆಯ ಬಗ್ಗೆ ಸಾಮಾಜಿಕವಾಗಿ ಬೇರೂರಿರುವ ಅಪ ಕಲ್ಪನೆಗಳು, ಸಾಮಾಜಿಕ ಮುಖ್ಯವಾಹಿನಿಯ ನಕಾರಾತ್ಮಕ ವರ್ತನೆ, ಅಂಗವಿಕಲತೆಯೊಂದು ಶಾಪ ಹಾಗೂ ಪೂರ್ವಜನ್ಮದ ಕರ್ಮಫಲ ವೆಂಬ ಪ್ರತಿಗಾಮಿ ಸಿದ್ಧಾಂತಗಳು ಪ್ರಮುಖ ಅಡ್ಡಿ ಆತಂಕಗಳೆಂಬುದು ಕಂಡು ಬರುತ್ತದೆ.

'ಅಂಗವಿಕಲತೆ ಶಾಪವೂ ಅಲ್ಲ, ಕರ್ಮ ಫಲವೂ ಅಲ್ಲ, ಅದೊಂದು ಆಕಸ್ಮಿಕ, It is Just accident,



ಅಂಗವಿಕಲ ಕಾರ್ಮಿಕರೊಂದಿಗೆ ಸುರೇಶ್ ಕುಷ್ಟಗಿ, ಶಿವಶಂಕರ ಬಾಳೆ, ರಂಗಪ್ಪ ದಾಸರ್

ಅಂಗವಿಕಲತೆಯನ್ನು ವ್ಯಕ್ತಿಯ ಅಸಮರ್ಥತೆ, ಎಂದೂ ಆ ಮೂಲಕ ಅಂಗವಿಕಲರು ಪರಾವಲಂಬಿಗಳೆಂದೂ ಭಾವಿಸುವ ಸಾಮಾಜಿಕ ಮುಖ್ಯವಾಹಿನಿಯ ತಪ್ಪು ಕಲ್ಪನೆಗಳಿಗೆ, ಅಂಗವಿಕಲರು ತಮ್ಮ ವಿಭಿನ್ನ ಸಾಮರ್ಥ್ಯದಿಂದ ಪ್ರತ್ಯುತ್ತರ ನೀಡುವುದು ಮಾತ್ರ ಪ್ರಾಯೋಗಿಕ ಪರಿಹಾರ ವಾಗಬಲ್ಲದು' ಎನ್ನುತ್ತಾರೆ ಕಾ: ಕಾಂತಿ ಗಂಗೂಲಿ. ಪ್ರಸ್ತುತ ಪಶ್ಚಿಮಬಂಗಾಳ ರಾಜ್ಯ ಅಂಗವಿಕಲರ ಒಕ್ಕೂಟದ ಅಧ್ಯಕ್ಷರಾಗಿರುವ ಅವರು, ಎಡರಂಗ ಸರ್ಕಾರದ ಕ್ಯಾಬಿನೆಟ್ ಸಚಿವರೂ ಆಗಿದ್ದಾರೆ.

25 ವರ್ಷಗಳಷ್ಟು ಹಿಂದೆ ಆರಂಭವಾದ ಪಿಆರ್‌ಪಿಎಸ್ (ಪಶ್ಚಿಮಬಂಗಾಳದ ರಾಜ್ಯ ಪ್ರತಿಬಂಧಿ ಸಮ್ಮಿಲನ್) ಸ್ಥಾಪಕ ಅಧ್ಯಕ್ಷರಾಗಿದ್ದವರು, ಪ್ರಸ್ತುತ ಲೋಕಸಭೆಯ ಸ್ಪೀಕರ್ ಆಗಿರುವ ಸೋಮನಾಥಚಟರ್ಜಿಯವರು ಎಂಬುದನ್ನು ಒಕ್ಕೂಟದ ಸದಸ್ಯರು ಹೆಮ್ಮೆಯಿಂದ ಸ್ಮರಿಸುತ್ತಾರೆ.

ಕೇವಲ 2 ರೂಪಾಯಿ ಸದಸ್ಯತ್ವ ಶುಲ್ಕ ಹೊಂದಿರುವ ಈ ಸಂಘಟನೆ ನೋಂದಾಯಿತ ಸಂಸ್ಥೆಯೂ ಹೌದು. 2 ರೂಪಾಯಿ ಶುಲ್ಕ ಪಾವತಿಸಲು ಹಾಗೂ ಸಂಘಟನೆಯ ಸಂವಿಧಾನ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುವ ಯಾವುದೇ ಅಂಗವಿಕಲ ವ್ಯಕ್ತಿ ಸದಸ್ಯತ್ವ ಪಡೆಯಬಹುದಾಗಿದ್ದು ಪ್ರಸ್ತುತ 1.25 ಲಕ್ಷ ಸದಸ್ಯ ಬಲಹೊಂದಿರುವ ಭಾರತ ದೇಶದ ಅತಿದೊಡ್ಡ ಅಂಗವಿಕಲರ ಸಂಘಟನೆಯಾಗಿ ಮುನ್ನಡೆದಿದೆ ಪಿ.ಆರ್.ಪಿ.ಎಸ್.

"ಹಸಿದ ಹೊಟ್ಟೆಯಿಂದ ಸಂಘಟನಾತ್ಮಕ ಸಾಧನೆ ಅಥವಾ ಅಭಿವೃದ್ಧಿ ಅಸಾಧ್ಯ' ಎಂದು ಅನುಭವದ ಮಾತನ್ನು ಹೇಳುತ್ತಾ ಕಾಂತಿ ಗಂಗೂಲಿಯವರು ಪಿಆರ್‌ಪಿಎಸ್ ಹುಟ್ಟು ಹಾಕಿದ 49 ಸಂಸ್ಥೆಗಳ ಪರಿಚಯ ಮಾಡಿಕೊಡುತ್ತಾರೆ. ಇದರಲ್ಲಿ ಹೊಲಿಗೆ, ಕರಕುಶಲ, ಕೈಗಾರಿಕೆ, ಆಹಾರ ಸಂಸ್ಕರಣೆ (Tailoring, handicraft, Food processing) ಉದ್ಯೋಗ ತರಬೇತಿ ಕೇಂದ್ರಗಳೂ ಹಾಗೂ ಸಿದ್ದ ಉಡುಪು ತಯಾರಿಕಾ ಘಟಕ ಹಾಗೂ ಸೊಯಾಬಿನ್ ಆಹಾರ ಸಂಸ್ಕರಣ ಘಟಕಗಳನ್ನು ಕಟ್ಟಿ ಬೆಳೆಸಿದ್ದು ಹಾಗೂ ಅವುಗಳು ವಾರ್ಷಿಕ 4 ಲಕ್ಷದಿಂದ




ಅಂ.ವಿ.ರಾ. ಒಕ್ಕೂಟದ ಅಧ್ಯಕ್ಷರು ಸಚಿವ ಕಾಂತಿ ಗಂಗೂಲಿ ಬಹಿರಂಗ ಸಭೆಯಲ್ಲಿ

22 ಲಕ್ಷ ರೂಪಾಯಿ ಆದಾಯ ತರುವ ಹಾಗೂ ಸದರಿ ಆದಾಯದಿಂದ ಒಕ್ಕೂಟ, ಬುದ್ಧಿಮಾಂದ್ಯ ಮಕ್ಕಳಿಗಾಗಿ, ಕಿವುಡ, ಮೂಗ ಮಕ್ಕಳಿಗಾಗಿ, ಅಂಧ ಮಕ್ಕಳಿಗಾಗಿ ನಡೆಸುವ ವಸತಿ ಸಹಿತ ಹಾಗೂ ವಸತಿ ರಹಿತ ಶಾಲೆಗಳನ್ನು ನಡೆಸುವ ದಂಗುಬಡಿಸುವ ಇತಿಹಾಸವನ್ನು ಕಾಂತಿ ಗಂಗೂಲಿಯವರು ಸ್ಥಿತಪ್ರಜ್ಞತೆಯಿಂದ ವಿವರಿಸುವಾಗ ನಮ್ಮ ಅಚ್ಚರಿಗೆ ಪಾರವೇ ಇರಲಿಲ್ಲ. ಈ ಎಲ್ಲಾ ಘಟಕಗಳನ್ನು ನೋಡಿದಾಗ ಅಲ್ಲಿ ಕೆಲಸ ಮಾಡುವ ಅಂಗವಿಕಲ ಕಾರ್ಮಿಕರ ಕುಶಲತೆಯ ನೈಪುಣ್ಯಗಳನ್ನು ಗಮನಿಸಿದಾಗ ಆದ ಸಂತಸ ಅಷ್ಟಿಷ್ಟಲ್ಲ. ಬುದ್ಧಿಮಾಂದ್ಯ ಯುವಕರು, ದೈಹಿಕ ಅಂಗವಿಕಲರು, ಕಿವುಡ, ಮೂಗ ಕಾರ್ಮಿಕರು, ಒಟ್ಟಾಗಿ ತಮ್ಮ ತಮ್ಮೊಳಗೆ ಮಾತಿಗೂ ಮಿಗಿಲಾದ ಸಮನ್ವಯ ಸಾಧಿಸಿ, ಕೇವಲ ಸಂಜ್ಞೆಯ ಮೂಲಕ ಸಂವಹನ ಮಾಡುತ್ತಾ ಸೊಯಾಬಿನ್ ಫ್ಲೇಕ್‌ಗಳನ್ನು ತಯಾರಿಸುವ ಯಂತ್ರದೊಂದಿಗೆ ಚಕಚಕನೆ ಕೆಲಸ ಮಾಡುವುದನ್ನು ನೋಡಿದಾಗ, ನಮ್ಮೊಳಗಿನ ಅನೇಕ ಪ್ರಶ್ನೆಗಳು ಗಂಟಲಲ್ಲಿಯೇ ಅಡಗಿ ಹೋಗಿ, ಬರಿಗಣ್ಣಿಂದ ಅವರ ಉತ್ಸಾಹದ ಚಿಲುಮೆಯಿಂದ ಸ್ಪೂರ್ತಿಯ ಸೆಲೆಯನ್ನು ಬಸಿದುಕೊಳ್ಳಲು ಮಾತ್ರ ನಮಗೆ ಸಾಧ್ಯವಾದದ್ದು.


ಸೋಯಾಬೀನ್ ಸಂಸ್ಕರಣೆಯಲ್ಲಿ ಅಂಗವಿಕಲ ಕಾರ್ಮಿಕರು



ಈ ನಗುವು ಮಾಸದಿರಲಿ



ಕೆ.ನೀಲಾ



ಬಿಸಿಲನಾಡಿನ ಜನ ನಾವು, 'ಬಿಡ್ರೀ ಏನ್ ಭಾರಿ ಚಳಿ....' ಅಂತ ಹಗುರವಾಗಿ ಮಾತಾಡಿದ್ದೇವು... ಮಧ್ಯರಾತ್ರಿಯಲ್ಲೆದ್ದು ಟೈಗರ್ ಹಿಲ್‌ನತ್ತ ಹೊರಟೆವು. ಚಳಿಯ ರುದ್ರತಾಂಡವ! ಇದ್ದ -ಇಲ್ಲದ ಬಟ್ಟೆಗಳೆಲ್ಲ ನಮ್ಮ ಮೈ ಬಿಗಿದಿದ್ದವು. ಅದು ಡಾರ್ಜಿಲಿಂಗ್‌ನ ಕೊರೆವ ಚಳಿಯ ಊರು.

ಡಾರ್ಜಿಲಿಂಗ್‌ನ ಕೊರೆವ ಚಳಿ ತುಂಬ ಭಯವಾಹಕ. ಬೆಚ್ಚನೆ ಹೊದಿಕೆ ಇರಲಿ ಎಂದು ಸಂಗಾತಿಗಳು ಹೇಳಿದಾಗ ಬಿಸಿಲನಾಡಿನ ಜನ ನಾವು, 'ಬಿಡ್ರೀ ಏನ್ ಭಾರಿ ಚಳಿ....' ಅಂತ ಹಗುರವಾಗಿ ಮಾತಾಡಿದ್ದೇವು. ಸಿಲಿಗುಡಿಯಿಂದ ನಗುತ ಹರಟುತ ಬಸ್ ಹತ್ತಿ ಹೊರಟೆವು. ಡಾರ್ಜಿಲಿಂಗ್ ಇನ್ನೂ ದೂರವೇ ಅಟ್ಟಿಸಿ ಬರತೊಡಗಿತು ಚಳಿ. ಬ್ಯಾಗೊಳಗಿನ ಶಾಲು-ಸ್ವೆಟರ್‌ಗಳು ಮೆಲ್ಲನೆ ಹೊರಬರತೊಡಗಿದವು. ಕಿವಿ-ಕುತ್ತಿಗೆ ತಲೆಯನ್ನೆಲ್ಲ ತಬ್ಬಿದ ಸ್ಕಾರ್ಫು ಮಾತುಗಳನ್ನು ಕಸಿಯಿತು. ಕಣ್ಣುಗಳು ಕಿರಿದಾಗಿ, ಹಲ್ಲುಗಳು ಬಿಗಿಯಾಗಿ ಆ ಹೊತ್ತಿನವರೆಗೂ ಹರಿದಾಡಿದ ನಗುವಿನಲೆಯು ಥಟ್ಟನೆ ಮಾಯವಾಯಿತು. ಕೈ ಕಾಲುಗಳುಇಂಚು ಚಲಿಸಲೂ ಒಲ್ಲವು. ಡಾರ್ಜಿಲಿಂಗ್ ಬಂದಿತು. ಮನತುಂಬುವ ಹಸಿರು. ಹರುಷ ವ್ಯಕ್ತಿಸಲು ನಗಬೇಕೆಂದರೆ ಊಹುಂ, ಚಳಿಯೆಂಬ ಪೋಲಿಸಣ್ಣ ಲಾಠಿ ತಿರುವುತ್ತಿದ್ದ, ಕಣ್ಣ ನೋಟದಲ್ಲೇ ಉಲ್ಲಾಸ ರವಾನಿಸಿಕೊಂಡೆವು. ಬಸ್ಸಿನ ಡ್ರೈವರ್ ನಮ್ಮ ರಾಶಿ ಲಗೇಜುಗಳನ್ನು ಇಳಿಸಲು ನೆರವಾದ. ಮೂರು ದಿನಗಳ ಕಾಲ ಡಾರ್ಜಿಲಿಂಗ್ ಎಂಬ ತಣ್ಣನೆ ಡಬ್ಬಿ (ಫ್ರಿಜ್)ಯಲ್ಲಿ ಇರುವುದು ಹೆಂಗೆ? ಎಂಬ ಚಿಂತೆ ಕಾಡುತ್ತಿತ್ತು. ಅಷ್ಟರಲ್ಲಿ ಭರ ಭರನೇ ಮೂರು ಜನ ಹೆಂಗಸರು ಉದ್ದುದ್ದ ಹಗ್ಗಗಳೊಂದಿಗೆ ನಮ್ಮ ಮುಂದೆ ನಿಂತು, ಮೊದಲಿಗೆ ಒಂದು ಚೆಂದದ ನಗೆ ಚೆಲ್ಲಿದರು. ನಾವು ಬೆರಗಾದೆವು. ಈ ಚಳಿಯಲ್ಲಿ ನಗುವೇ? ಹೌದು, ಅವರು ಮತ್ತೂ ಸ್ನೇಹದಿಂದ ನಿಷ್ಕಲ್ಮಷವಾಗಿ ನಕ್ಕರು ಯಾರಿವರು? ಡ್ರೈವರ್ ಪ್ರಮೋದ ಹೇಳಿದ 'ಇವರು ಕೂಲಿ ಹೆಂಗಸರು' ಸೀತಾ, ಪ್ರಮೀಳಾ. ನೀಳಕಾಯದ ಮಧ್ಯ ವಯಸ್ಸಿನವರು. ಹೆಂಗಸು ಕೂಲಿಗಳನ್ನು ನೋಡಿದ್ದು ಇದು ಮೊದಲ ಬಾರಿ. ಸರಿ ಸುಮಾರು 100 ಕೆಜಿಯಷ್ಟಾಗುವ ಲಗೇಜ್‌ಅನ್ನು ಬೆನ್ನ ಮೇಲೆ ಹೊತ್ತು, ಎತ್ತರದ ಮೇಲ್ಮುಖದ ರಸ್ತೆ ಹತ್ತುತ್ತಾ ನಡೆವಾಗ, ಆತಂಕ ನಮ್ಮ ಮುಖದಲ್ಲಿದ್ದರೆ, ಪುಟ್ಟ ಮಂದಹಾಸ ಅವರ ಮುಖದಲ್ಲಿತ್ತು. ಗಂಡಸಿನಷ್ಟೇ, ಕೆಲವು ಬಾರಿ ಇನ್ನೂ ಹೆಚ್ಚು ಭಾರ ಹೊತ್ತು ನಡೆವ ಸೀತೆ, ಪ್ರಮೀಳೆಯಂಥ ಹೆಂಗಸರು ನೂರಾರು ಜನ. ಸೀತಾಳಿಗೆ ಎರಡು ಮಕ್ಕಳು. ಶಾಲೆಗೆ ಕಳಿಸುತ್ತಾಳೆ. ಗಂಡನೂ ಕೂಲಿ ಮಾಡುತ್ತಾನೆ. ಸಿಗುವ ಕೂಲಿ ಪರವಾಗಿಲ್ಲ ಅಂತ ಹೇಳುವಾಗಲೂ ಸೀತಾಳ ಮುಖದ ತುಂಬ ನಗುವೊಂದು ಮುಗುಳ್ನಗುತ ಕುಳಿತಿತ್ತು. ಸೀತಾ, ಪ್ರಮೀಳಾರ ನಗುವಿಗೆ ಮನ ಸೋತ ನಾನು ಕ್ಯಾಮೆರಾ ಕ್ಲಿಕ್ಕಿಸಿದೆ. ಹೆಂಗಸರು ಅಬಲೆಯರು. ಭಾರ ಹೊರಲಾರರು ಎಂದೆಲ್ಲ ತರ್ಕ ಮಾಡುವ ವಿತಂಡವಾದಿಗಳು ಒಮ್ಮೆ ಸೀತಾಳಂಥವರನ್ನು ನೋಡಬೇಕು. ಭಾರ ಇಳಿಸಿದ ಮೇಲಿನ ಆಯಾಸವೇನೋ ಇತ್ತು. ಆದರೆ ಅರಳಿದ ತುಟಿಗಳ ನಡುವೆ ಸೂಜಿಮಲ್ಲಿಗೆಯಂಥ ನಗು ಇದ್ದೇ ಇತ್ತು.

ಕಲ್ಕತ್ತಾದ ಸಂಗಾತಿ ನಂದಿಯವರೇ ವ್ಯವಸ್ಥೆ ಮಾಡಿದ ಹೋಟೆಲ್‌ನಲ್ಲಿ ಕಾಲಿಟ್ಟೆವು. ಹೋಟೆಲ್ ಮಾಲೀಕ ತುಂಬ ಸಹನೆ ಮತ್ತು ಅದೇ ಮಂದಹಾಸದಿಂದ ನಮ್ಮ ಟೂರ್ ಪ್ರೋಗ್ರಾಂ ಸೆಟಲ್ ಮಾಡಿದರು. ಪಾಟ್ನಾದಲ್ಲಿ ಮಾತು ಮಾತಿಗೂ ಚೀರಾಡಿದ್ದ ನಮ್ಮ ಸಂಗಾತಿಗಳು ಈ ಡಾರ್ಜಿಲಿಂಗ್‌ನಲ್ಲಿ ತಣ್ಣನೆ ದನಿಯಾದರು. ಥೇಟ್ ಬರ್ಫಿನ ಧಾರೆಯಂಥನಲ್ಲಿ ನೀರಿಗೆ ತಲ್ಲಣಿಸಿದೆವು. ಬಾಗಿಲು ಟಕ್‌ಟಕ್ ಎಂದಿತು. ಗೊಣಗುತ್ತ ಬಾಗಿಲನ್ನು ಇಷ್ಟೇ ತೆರೆದು ಇಣುಕಿದರೆ, "ಗುಡ್ ಮಾರ್ನಿಂಗ್, ಎಲ್ಲ ನಮೂನೆಯ ಶಾಲು-ಸ್ವೆಟರ್‌ಗಳಿವೆ. ನೋಡ್ತೀರಾ...? ಎಂದು ಕೋಗಿಲೆಯಂತೆ





ಮಹಿಳಾ ಕೂಲಿ ಸೀತಾ, ಪ್ರಮೀಳಾ ಜೊತೆ ಕೆ.ನೀಲಾ

ಮಧ್ಯರಾತ್ರಿಯಲ್ಲೆದ್ದು ಟೈಗರ್ ಹಿಲ್‌ನತ್ತ ಹೊರಟೆವು. ಚಳಿಯ ರುದ್ರತಾಂಡವ! ಇದ್ದ -ಇಲ್ಲದ ಬಟ್ಟೆಗಳೆಲ್ಲ ನಮ್ಮ ಮೈ ಬಿಗಿದಿದ್ದವು. ಸೂರ್ಯೋದಯಕ್ಕೂ ಮುನ್ನ ನಾವಲ್ಲಿದ್ದೆವು. ಅತ್ತ ಸೂರ್ಯನ ಮೊದಲ ಕಿರಣಗಳು ಹೊರ ಹೊಮ್ಮಿದ್ದೇ ಸಾವಿರಾರು ಕಿ.ಮೀ. ಆಚೆ ಇರುವ ಕಾಂಚನ ಗಂಗಾ ಹಿಮ ಪರ್ವತವನು ಮುತ್ತಿಕ್ಕುತ್ತವೆ. ಮೊದಲ ಕಿರಣಗಳ ಸ್ಪರ್ಶಕ್ಕೆ ಬಂಗಾರ ಬಣ್ಣದಂತೆ ಹೊಳೆವ ಕಾಂಚನಗಂಗಾ ಕ್ರಮೇಣ ನೆಳಲು ಬೆಳಕಿನಂತೆ ಬೆಳಗುತ್ತದೆ. ಈ ಪ್ರಕೃತಿಯೊಳಗಿನ ಅದ್ಭುತಗಳನ್ನು ಆಸ್ವಾಧಿಸುವ ಕ್ಷಣಗಳು ಆನಂದದ ಮೇರು ಹಂತಗಳೇ... ಅದ್ಭುತಗಳ ಹಿಂದಿನ ಕಾರಣಗಳನು ಬಲ್ಲಿರಾದರೆ ನಿಜವ ಆನಂದದಲ್ಲಿ ಇರುವಿರಿ. ಕಾರಣವ (ವೈಜ್ಞಾನಿಕ) ಅರಿಯದೇ ಹೋದರೆ ನಿಗೂಢತೆ ಜಾಲದಲ್ಲಿ ಸಿಕ್ಕು ಅಜ್ಞಾನ-ಮೌಢ್ಯತೆ ಹಣಿಕಿ ಹುಚ್ಚು 'ಭಕ್ತಿ'ಯು ಅವತರಿಸುತ್ತದೆ. ಭೌತವಾದವನ್ನರಿತ ಮನಸೇ ನಿಜದ ಜ್ಞಾನದಿಂದೊಡಗೂಡಿದ ಆನಂದ ಅನುಭವಿಸುತ್ತದೆ.

ಗಡಗಡ ನಡುಗುತ್ತಿದ್ದೆವು. ಒಂದು ಕಪ್ಪು ಬಿಸಿ ಚಹಾ ಸಿಗಬಾರದೇ? ಮನಸು ಕೇಳುತ್ತಿತ್ತು. ಬೆಹೆನ್‌ಜೀ ಚಾಯ್? ಬಯಕೆ ನನಸಾಯಿತೇ ಹೌದು. ಮಧ್ಯ ವಯಸ್ಸಿನ ಹೆಂಗಸು ಕೊರೆವ ಚಳಿಯಲ್ಲಿಯೂ ಆವರಿಸಿದ ನಸುಗತ್ತಲಲ್ಲೂ ಉಲಿವ ಹೆಣ್ಣು. ಯಾರು? ಎಂದು ಮುಖವೆತ್ತಿ ನೋಡಿದರೆ ಮತ್ತದೇ ಬಿಳಿ ಹೂವಿನಂಥ ನಗುವಿನೊಂದಿಗೆ, ಕಾಡಿಗೆಯಿಂದ ಕೊರೆದಂತೆ ಕಾಣುವ ಚಿಕ್ಕ ಕಂಗಳನು ಅರಳಿಸಿ ನಿಂತ ಹುಡುಗಿಯರು. ಬೆನ್ನ ಮೇಲೆ ಭಾರದ ಬ್ಯಾಗು. ಸಮನಾಗಿ ಕತ್ತರಿಸಿದ ಕಪ್ಪು ರೇಷ್ಮೆ ಕೂದಲು. ದುಂಡನೆ ಮುಖ. ಸಣ್ಣ ಮೂಗು ಎಲ್ಲಕ್ಕೂ ಮಿಗಿಲಾಗಿ, ಕೇಳಿದ್ದಕ್ಕೆಲ್ಲ ಸಹನೆಯಿಂದ ಉತ್ತರಿಸುವ, ಮಾತಿಗೆ ಮುಂಚೆ ಮತ್ತು ಕೊನೆಗೆ ಫಳಫಳ ಹಲ್ಲುಗಳ ನಡುವಿದಿಂದ ಪ್ರತ್ಯಕ್ಷವಾಗುವ ನಗು, ಬಿಡುವಿಲ್ಲದ ದುಡಿಮೆ. ಭಾರ ಹೊತ್ತು ಓಡಾಡುವ ಈ ಹೆಂಗಸರಿಗೆ ಬೇಸರ, ಸಿಟ್ಟು, ಸಿಡುಕು ಬರಲಾರದೇ? ಪ್ರಶ್ನೆ ಕಾಡುತ್ತಲೇ ಇತ್ತು. ದೊಡ್ಡ ಫ್ಲಾಸ್ಕ್ ಬಗ್ಗಿಸಿ ಹಬೆಯಾಡುವ ಚಾ ಕೈಗಿತ್ತಳು. ಆರಿಹೋಗುವ ಮುನ್ನ ದಡ-ಬಡನೇ ಹೀರಿದೆವು. ಹಣ ಕೊಡುವಾಗ ಹೆಂಗಸಿನ ಮುಖ ನೋಡಿದೆವು. ಥ್ಯಾಂಕ್ಸ್ ಹೇಳಿ, ಚಳಿಯಲ್ಲೂ ಒಂದು ನಗೆ ಚೆಲ್ಲಿದಳು. 'ಅಮ್ಮಾ ತಾಯಿ ಥ್ಯಾಂಕ್ಸ್' ನಾವು ಹೇಳಬೇಕು. ಚಹಾಕ್ಕೆ ಮತ್ತು ನಿನ್ನ ನಗುವಿಗೆ' ಅಂದೆವು ಅದಕ್ಕೂ ನಕ್ಕಳು.

ಈ ನಗುವ ನಡುವಯಸ್ಸಿನ ಹೆಂಗಸರು ಡಾರ್ಜಿಲಿಂಗ್‌ನಿಂದ 30 ಕಿ.ಮೀ. ದೂರ ಓಡುವ ಜೀಪುಗಳ ಮಗ್ಗುಲಿಗೆ ಜೋತುಬಿದ್ದು, ಒಂದು ಕೈ ಕಿಟಕಿಗೆ ಹಿಡಿದು ಗಾಳಿ ಸೀಳುತ ಬಂದವರು. 'ಚಳಿಗೆ-ಗಾಳಿಗೆ ಇವರ ಎಲುಬುಗಳು ಕಟ ಕಟಿಸಿಲ್ಲವೇ? ರಕ್ತ ಹೆಪ್ಪು ಗಟ್ಟಿ ಜೀವ ಭಾವಕ್ಕೆಲ್ಲ ಧಕ್ಕೆ ಏಕಾಗಲಿಲ್ಲ? ಹೋಗಲಿ ಒಂದು ಬೇಸರ ಸಿಟ್ಟು ಇವರಿಗೆ ಬರದೇ?

ನಾವು ಬುದ್ಧ ಟೆಂಪಲ್‌ನತ್ತ ಹೊರಟೆವು. ಇಕ್ಕೆಲಗಳಲ್ಲಿ ಶಾಲು-ಸ್ವೆಟರ್ ಸ್ಕಾರ್ಫ್, ಕೈ ಕಾಲ್ ಚೀಲ ಮಾರುವ ಹೆಂಗಸರು. ಬೆಳಿಗ್ಗೆ ಹೊಳೆವ ಹೆಂಗಸರು ಬೊಂಬಾಯಿಯಂಥ ಚಾಲಾಕಿಯಿಲ್ಲದ ವ್ಯಾಪಾರ. ಮೋಸವಿಲ್ಲದ ವ್ಯಾಪಾರ. ಬೇಕಾದರೆ ಖರೀದಿಸಿ ಇಲ್ಲ ಬಿಡಿ. ಸಿಟ್ಟಿಲ್ಲ. ಅದೇ ನಗುವಿನೊಂದಿಗೆ ವಿದಾಯ. ಹೆಣ್ಣು ಮಕ್ಕಳು. ಮೊಬೈಲ್ ವ್ಯಾಪಾರ. ಬುದ್ಧಾ ಮಂದಿರದ ಮುಂದೆ ಬೆಳಕಿನ ಹೊತ್ತು ಎರಡು ತಾಸು ವ್ಯಾಪಾರ. ಆಮೇಲೆ ಎರಡು ತಾಸು ಪ್ರವಾಸಿಗರು ಭೇಟಿ ಕೊಡುವ ಪಾರ್ಕಿನ ಮುಂದೆ ನಮಗೆ ಕುತೂಹಲವಾಗಿ ಅವರೊಂದಿಗೆ ಸಂವಾದಕ್ಕಿಳಿದೆವು. ನಸುಕಿನಲ್ಲಿ ಬ್ರೆಡ್ಡು, ಚಹಾ, 3 ತಾಸು ವ್ಯಾಪಾರ. ಮನೆಗೆ ಹೋಗಿ ಟಿಫನ್ ತಯಾರಿಸುವರು. ಮತ್ತೆ ಎರಡು ತಾಸು ವ್ಯಾಪಾರ. ಮಧ್ಯಾಹ್ನಕ್ಕೆ ಚಪಾತಿ, ಪಲ್ಯ, ಮತ್ತೆ ವ್ಯಾಪಾರ. ರಾತ್ರಿಗೆ ಅನ್ನ ಸಾರು. ಬಿಸಿ ಬಿಸಿ ಅಡುಗೆಯೇ. ಅಡುಗೆ ಮಾಡುವವರು ಹೆಂಗಸರೇ. ಕೆಲವು ಬಾರಿ ಗಂಡಸರೂ ನೆರವಾಗುತ್ತಾರೆ. ಪರ್ವತ ಹತ್ತಲು ತರಬೇತಿ ಕೊಡುವ ಸ್ಥಳಕ್ಕೆ ಬಂದೆವು. ಉದ್ದಕ್ಕೂ ಚಹಾ ಅಂಗಡಿ ನಡೆಸುವವರು. ನಗು ಮೊಗದ ವನಿತೆಯರೇ, ಅವರ ಗಂಡಂದಿರರು, ಪೋಲೀಸ್, ಸೈನಿಕರು, ಸರ್ಕಾರಿ ನೌಕರರು, ವ್ಯಾಪಾರಿಗಳು ಕೂಲಿಗಳು.... 'ಮನೇಲಿ ಕೂತು ಏನ್ ಮಾಡಬೇಕು? ಅದೇ ಟೈಮಲ್ಲಿ ಆರಾಮಾಗಿ ದುಡಿಬಹುದಲ್ಲ? ಹೀಗೆ ಹೇಳಿದ ಅವಳ ಹೆಸರು ಮರೆತಿದ್ದೇನೆ. ಎತ್ತರದ ರಸ್ತೆ ಹತ್ತಿ ಇಳಿಯುತ ಬೆನ್ನಿಗೆ ಮಣ ಭಾರ ಹೊರೆಸುತ್ತಾ ಇವರು ಬೊಜ್ಜುರಹಿತ ಸಪೂರ ಕಾಯದವಳು. ಇಳಿ ಬಿಟ್ಟ ತರಹವಾರಿ ಬಣ್ಣಗಳ ಮಣಿ-ಮುತ್ತು ಸರಗಳ ವ್ಯಾಪಾರಿಯೊಬ್ಬಳು ಮುತ್ತಿನಂಥದೇ ನಗೆ ತುಳುಕಿಸಿ 'ದುಡಿಲಿಲ್ಲಾಂದ್ರೆ ಬದುಕು ನಡಸೋದು ಹೆಂಗ್ರಿ?' ಅಂದಳು. ಈ ಕಾಯಕ ಜೀವಿಗಳಿಗೆ ಶರಣೆನ್ನದಿದ್ದರೆ ಹೇಗೆ?

ಉತ್ತರ ಕನ್ನಡ

ಕೋಮು ಸೌಹಾರ್ದತೆ ರಕ್ಷಿಸುವುದೆಂತು? ಸಮಗ್ರ ಅಭಿವೃದ್ಧಿಯ ದಾರಿ ಏನು?

ಅರಣ್ಯ ಜಿಲ್ಲೆ ಎಂದೇ ಕರೆಯಲಾಗುವ ಉತ್ತರ ಕನ್ನಡ ಜಿಲ್ಲೆಯ ಜನರ 'ಮೊರೆ' ಅರಣ್ಯರೋದನವೇ ಆಗಿರುವುದು ದುರಂತ

ಯಮುನಾ ಗಾಂವ್ಕರ್


ಸಾಂಸ್ಕೃತಿಕ ವೈವಿಧ್ಯತೆ ಉತ್ತರ ಕನ್ನಡದಲ್ಲಿ ಇರುವಂತೆ ಸಮಸ್ಯೆಗಳ ವೈವಿಧ್ಯತೆಯೂ ಇದೆ; ಹೊಸ ಸಮಸ್ಯೆ ಹುಟ್ಟಿದೊಡನೆ ಹಳೆಯ ಸಮಸ್ಯೆಗಳು ಮರೆಮಾಚಲ್ಪಡುತ್ತವೆಯೇ ಹೊರತಾಗಿ ಅದು ನಿವಾರಣೆ ಆಗಿದ್ದಂತು ಇಲ್ಲ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಗಳು, ಗ್ರಾಮ ಪಂಚಾಯಿತಿಗಳು ಇಂತಹ ಸಮಸ್ಯೆಯನ್ನು ಪರಿಹರಿಸುವಲ್ಲಿ ಆಸಕ್ತವಾಗಿಯೂ ಇಲ್ಲ; ಹಾಗೆಯೇ ಸಮಸ್ಯೆ ನಿವಾರಣೆಯ ಪರ್ಯಾಯ ಯೋಜನೆಯನ್ನು ಹೊಂದಿಲ್ಲ. ಹಾಗಾಗಿ ಸ್ವಾತಂತ್ರ್ಯ ಬಂದ ದಿನದಿಂದ ಅರಣ್ಯ ಜಿಲ್ಲೆ ಎಂದು ಹೆಸರು ಪಡೆದಿರುವ ಈ ಜಿಲ್ಲೆಯ ಜನರ ಕೂಗು ಅರಣ್ಯರೋಧನವಾಗಿಯೇ ಇದೆ.ರಾಜ್ಯದ ಅತಿ ಹಿಂದುಳಿದ ತಾಲ್ಲೂಕಾಗಿರುವ ಜೊಯಿಡಾ ಈಗಲೂ ಹಾಗೆಯೇ ಇದೆ.

ದಾಂಡೇಲಿ ಹೊರತುಪಡಿಸಿದರೆ ಉದ್ಯೋಗ ಒದಗಿಸುವ ಕೈಗಾರಿಕೆಯನ್ನು ಯಾವ ತಾಲ್ಲೂಕು ಹೊಂದಿಲ್ಲ. ಆದರೆ ಜನರ ಮನೆ ಮಠಕ್ಕೆ ಪುಟ್ಟ ಭೂಮಿಗೆ ಸಂಚಕಾರ ಆಗಿರುವ ಬೃಹತ್ ಯೋಜನೆಗಳೂ ಬಂದಿವೆ. ದೇಶದ ಅಭಿವೃದ್ಧಿಗಾಗಿ ಎಲ್ಲಾ ಕಳಕೊಂಡವರು ಈಗ ನಿರಾಶ್ರಿತರ ಪಟ್ಟ ಪಡೆದಿದ್ದಾರೆ ಅಷ್ಟೇ. ಕೆಂಬಾವುಟದ ಅಡಿಯ ಕಿಸಾನ್ ಸಭಾ (ಎಐಕೆಎಸ್) ನ ಹೋರಾಟ, ದಿನಕರ ದೇಸಾಯಿ, ಗಿರಿಪಿಕಳೆ ಮೊದಲಾದವರ ರೈತ ಹೋರಾಟದಿಂದಾಗಿ ಸ್ವಲ್ಪಮಟ್ಟಿಗಿನ ಸಂಬಂಧಗಳ ಬದಲಾವಣೆ ಆಗಿದೆಯೆ ಹೊರತು ವ್ಯವಸ್ಥೆಯನ್ನೇ ಬದಲಿಸಲು ಸಾಧ್ಯವಾಗಲಿಲ್ಲ.

ಅರಣ್ಯ ಭೂಮಿಯು ಸಾಗುವಳಿದಾರರ ಖಾತೆಗೆ ಬರಲಿಲ್ಲ, ಮೀನುಗಾರರಿಗೆ ಹೊಸ ಬದುಕು ಲಭ್ಯವಾಗಲಿಲ್ಲ, ಕುಂಬಿ ಜಮೀನು ಇದ್ದ ಸ್ಥಿತಿಯಲ್ಲಿಯೇ ಇವೆ. ನಿರುದ್ಯೋಗ ದಿನದಿಂದ ದಿನಕ್ಕೆ ಬೆಳೆಯುತ್ತಿವೆ. ಹಲವು ನದಿಗಳು ಹರಿಯುತ್ತವೆಯಾದರೂ ಅದರಿಂದ ನೀರಾವರಿ ಇಲ್ಲ. ಅಡಿಕೆ, ತೆಂಗು, ಅರಣ್ಯ ಉತ್ಪನ್ನ ಮೀನು ಇತ್ಯಾದಿಗಳಿದ್ದರೂ ಅದನ್ನು ಅಳವಡಿಸಿಕೊಂಡಿರುವ ಕೈಗಾರಿಕೆಯ ಸ್ಥಾಪನೆ ಇಲ್ಲ. ಆದರೆ ಆಳುವ ರಾಜಕೀಯ ಪಕ್ಷಗಳು ಇವನ್ನ ಯೋಜಿಸುವುದು ಗುತ್ತಿಗೆದಾರ ಕೇಂದ್ರೀತವಾದ ಯೋಜನೆ ರೂಪಿಸಲು ಮುಂದಾಗಿವೆ, ಅಧಿಕಾರಕ್ಕೇರಲು ಬೇಕಾದ ಸಂಖ್ಯಾಬಲದ ಲೆಕ್ಕಾಚಾರದಲ್ಲಿ ತೊಡಗಿವೆ. ತಮ್ಮ ತಮ್ಮ ಪಕ್ಷ ಅಧಿಕಾರಕ್ಕೆ ಬರುವುದೇ ಅಭಿವೃದ್ಧಿಯ ಸ್ವರೂಪ, ಅಭಿವೃದ್ಧಿಯ ಬಗೆ ಎಂದು ತಿಳಿದುಕೊಂಡಿರುವ ಪರಿಸ್ಥಿತಿ ಇಲ್ಲಿಯದು.

ಆದರೆ ಇತ್ತೀಚೆಗೆ ಕಾಂಗ್ರೆಸ್‌ನ ವೈಫಲ್ಯವನ್ನು ಬಂಡವಾಳವನ್ನಾಗಿಸಿ ಕೊಂಡು ಬೆಳೆಯುತ್ತಿರುವ ಬಿಜೆಪಿ ಮತ್ತು ಸಂಘ ಪರಿವಾರ ಇಡೀ ಜಿಲ್ಲೆಯನ್ನು ಕೋಮು ವೈಶಮ್ಯದ ದಳ್ಳುರಿಗೆ ಸಿಲುಕಿಸುವ ಹುನ್ನಾರ ನಡೆಸಿದೆ. ಇಡೀ ಕರಾವಳಿ ಇವರ ಮನುಷ್ಯ ದ್ವೇಷಿ ಅಜೆಂಡಾಕ್ಕೆ ಬಲಿಯಾಗುತ್ತಿದೆ. ಕಾಂಗ್ರೆ ಆಡಳಿತದಿಂದ ಹತಾಶೆಗೊಂಡ ಯುವಜನ ಬಿಜೆಪಿಯ ಈ ಹುನ್ನಾರಕ್ಕೆ ಬಲಿಯಾಗುತ್ತಿದ್ದಾರೆ. ಬಿಜೆಪಿಯ ಎಂಪಿ ಅನಂತಕುಮಾರ್ ಹೆಗ್ಡೆ ಹೊಡೆದಾಟ, ಬಡಿದಾಟದಲ್ಲಿ ತೊಡಗಿದ್ದಾರೆ.

ಜಿಲ್ಲೆಯಲ್ಲಿ ಆತಂಕ ಹುಟ್ಟಿಸುವ ಕೋಮುವಾದಿ ಶಕ್ತಿಗಳ ಬೆಳವಣಿಗೆ ಜಿಲ್ಲೆಯಲ್ಲಿ 4 ಜನ ಎಂ.ಎಲ್.ಎ.ಗಳು, ಒಬ್ಬ ಎಂ.ಪಿ. ಅಭಿವೃದ್ಧಿಯ ಕಡೆ ಗಮನಕೊಡದೆ ಜಾತಿ ಸಮ್ಮೇಳನ, ಹಿಂದುತ್ವದ ಭಾವನೆಯ ಉದ್ದೇಶಿಸುವ ಹೇಳಿಕೆ, ಕಾರ್ಯಕ್ರಮಕ್ಕೆ ಸೀಮಿತಗೊಂಡರು. ಗೋರಕ್ಷಣೆಯ ಹೆಸರಿನಲ್ಲಿ ಪರ್ಯಾಯ ಪೋಲೀಸ್ ವ್ಯವಸ್ಥೆಯನ್ನು ಹುಟ್ಟು ಹಾಕಲು ಹೊರಟರು. ಗೋರಕ್ಷಣಾ ಯಾತ್ರೆ, ರಾಮಶಿಲೆ ಯಾತ್ರೆ ಇತ್ಯಾದಿಗಳ ಮೂಲಕ ಜನರನ್ನು ವಿಭಾಗಿಸಲು ತೊಡಗಿದರು. ಪ್ರತಿ ತಾಲ್ಲೂಕಿನಲ್ಲಿಯೂ ಅಲ್ಲಿಯ ಒಂದೊಂದು ಘಟನೆ ಹಿಡಿದು ಅಜೆಂಡಾ ವಿಸ್ತರಿಸುವಲ್ಲಿ ಮುಂದಾದರು. ಆದರೆ ಕಾಂಗ್ರೆಸ್, ಜೆಡಿ(ಎಸ್) ಇವುಗಳನ್ನು ವಿರೋಧಿಸುವ ಬದಲು ಅವರಿಗೆ ಪೂರಕವಾಗಿಯೇ ಕೆಲಸ ನಿರ್ವಹಿಸುತ್ತಿರುವುದು ಕೂಡ ಅತಂಕ ಹುಟ್ಟಿಸಿದೆ.ಜಿಲ್ಲಾಡಳಿತ ಕೂಡ ಇಂತಹ ಬೆಳವಣಿಗೆಯ ವಿರುದ್ಧ ಅಗತ್ಯ ಎಚ್ಚರ ವಹಿಸುತ್ತಿಲ್ಲ. ತನ್ನ ಮಿತಿಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮಾತ್ರ ವಿರೋಧಿಸುತ್ತಿವೆ.




ಪರಿಸರವಾದಿಗಳು ಒಂದೆಡೆ ವಿರೋಧಿಸುತ್ತಿದ್ದರೆ, ಹುಬ್ಬಳ್ಳಿ ಮತ್ತು ಉತ್ತರ ಕನ್ನಡ ದಕ್ಷಿಣ ಕನ್ನಡಗಳಿಗೆ ಸಂಪರ್ಕ ಏರ್ಪಡಿಸುವ ಲಾರಿ, ಬಸ್ ಮಾಲೀಕರುಗಳ ಲಾಬಿ ಇನ್ನೊಂದೆಡೆ ಕ್ರಿಯಾಶೀಲವಾಗಿವೆ. ಈ ಮಧ್ಯೆ ಜನ ಪ್ರತಿನಿಧಿಗಳ ನಿಷ್ಕ್ರಿಯತೆ ಎನ್.ಡಿ.ಎ. ಅಧಿಕಾರದಲ್ಲಿರುವ ಕಾಮಗಾರಿಯ ಉದ್ಘಾಟನೆಯ ನಾಟಕವಾಡಿದರು. ಪ್ರಮುಖ ಪಕ್ಷಗಳ ಪ್ರತಿನಿಧಿಯಾಗಿ ಅಂದು ಅಟಲ್ ಬಿಹಾರಿ ವಾಜಪೇಯಿಯವರು ಭಾಗವಹಿಸಿದ್ದರು. ಈ ಮಾರ್ಗ ಕರಾವಳಿ ಮತ್ತು ಉತ್ತರ ಕರ್ನಾಟಕದ ನಡುವೆ ಮಹತ್ವದ ಅಭಿವೃದ್ಧಿ ಸಂಬಂಧ ಕಲ್ಪಿಸುತ್ತದೆ.

ನಿರಾಶ್ರಿತರ ನಾಡಾಗಿ ಪರಿವರ್ತನೆಯಾಗಿರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ತಲೆದೋರಿರುವ ಬಿಕ್ಕಟ್ಟು, ಮೀನುಗಾರಿಕೆಯ ಬಿಕ್ಕಟ್ಟುಗಳಿಂದಾಗಿ ಜಿಲ್ಲೆಯ ಆರ್ಥಿಕ ಸ್ಥಿತಿಗೆ ಪಾರ್ಶ್ವವಾಯು ಬಡಿದಂತಾಗಿದೆ.

ಸಣ್ಣ ಕೈಗಾರಿಕೆಗೆ ಉತ್ತೇಜನ ಇಲ್ಲ. ಪರಿಸರ ಪ್ರವಾಸೋದ್ಯಮ ಉಳ್ಳವರು ಭೂಮಿ ಕಬಳಿಸುವ ಯೋಜನೆಯಾಗಿದೆ. ಬೃಹತ್ ಉದ್ದಿಮೆ ಇಲ್ಲ. ಮಹತ್ವದ ಅರಣ್ಯ ಉತ್ಪನ್ನಗಳಿದ್ದರೂ ಅವನ್ನು ಉಪಯೋಗಿಸಿಕೊಳ್ಳುವ ಯಾವ ಯೋಜನೆ ಇಲ್ಲದೆ ವಿದ್ಯಾವಂತ ಮತ್ತು ಗ್ರಾಮೀಣ ನಿರುದ್ಯೋಗ ತೀವ್ರವಾಗಿ ಬೆಳೆಯುತ್ತಿವೆ. ಒಂದೆಡೆ ಯುವಜನರು ಹತಾಶೆಯಿಂದ ಜಾತಿವಾದಿ ಹಿಂದೂ ಕೋಮುವಾದಿ ಸಂಘಟನೆಗಳ ಕಡೆಗೆ ಹೋದರೆ ಮುಸ್ಲಿಂ ಯುವಕರು ಕೆಡಿಎಫ್ ನಂತಹ ಮುಸ್ಲಿಂ ಮೂಲಭೂತವಾದಿಗಳ ಕಡೆಗೆ ಸರಿಯುತ್ತಿದ್ದಾರೆ.

ಹಾಗಾಗಿ ಪರಿಸರಕ್ಕೆ ಪೂರಕವಾದ ಕೈಗಾರಿಕೆಯ ಸ್ಥಾಪನೆ, ರಸ್ತೆ ಅಭಿವೃದ್ಧಿ ಇತ್ಯಾದಿಗಳನ್ನುಳ್ಳ ಸಮಗ್ರ ಅಭಿವೃದ್ಧಿಶೀಲ ನಕ್ಷೆ ತಯಾರಿಸಬೇಕಾದದ್ದು ಅಗತ್ಯವಾಗಿದೆ.

ಹಾಗಿದ್ದರೆ ಈ ಜಿಲ್ಲೆಯ ಅಭಿವೃದ್ಧಿಯ ಕುರಿತು ಮೂಲ ಸಮಸ್ಯೆಯ ಗಂಭೀರತೆಯ ಕುರಿತು ಯೋಜಿಸುವವರೇ ಇಲ್ಲವೇ? ಎನ್ನುವ ದಿನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಕುಡುಗೋಲು ಸುತ್ತಿಗೆಯ ಚಿಹ್ನೆಹೊತ್ತ ಕೆಂಬಾವುಟದ ಬೃಹತ್ ಮೆರವಣಿಗೆ ನಡೆಯಿತು. ಕೋಮುಗಲಭೆ 'ಕೇಸರಿ' 'ಹಸಿರುಗಳ' ಮೇಲಾಟಗಳಿಗಾಗಿ ರಾಜ್ಯದಲ್ಲಿ ಆಗಾಗ ಸುದ್ದಿಯಲ್ಲಿರುವ ಭಟ್ಕಳದಲ್ಲಿ 23,24 ಡಿಸೆಂಬರ್ 2007 ರಂದು ಎರಡು ದಿನಗಳ ಕಾಲ ನಡೆದ ಸಿಪಿಐ(ಎಂ)ನ ಉತ್ತರ ಕನ್ನಡ ಜಿಲ್ಲಾ 7ನೇ ಸಮ್ಮೇಳನ ಜಿಲ್ಲಾ ವ್ಯಾಪಿ ಸುದ್ದಿ ಮಾಡಿತು. ಜಿಲ್ಲೆಗೊಂದು ಅಭಿವೃದ್ಧಿಯ ಪರ್ಯಾಯ ಸೂಚಿಸಿತು.



ಸಾವಿರಾರು ಜನರ ಬೃಹತ್ ರ್‍ಯಾಲಿ ಕೋಮು ಸೂಕ್ಷ್ಮ ಪ್ರದೇಶದಲ್ಲಿ ಮೆರವಣಿಗೆ ನಡೆಸಿ ಕೋಮು ಸೌಹಾರ್ದತೆಯ ಸಂದೇಶವನ್ನು ನೀಡಿತು. ಇದು ಕೋಮುವಾದಿಗಳಿಗೆ ಎಚ್ಚರಿಕೆಯಾಗಿಯೂ ಸೌಹಾರ್ದ ಪ್ರಿಯರಿಗೆ ಧೈರ್ಯ ಮತ್ತು ಉತ್ಸಾಹದ ಗಳಿಗೆಯೂ ಆಗಿತ್ತು. ಭಟ್ಕಳದ ಸುಧೀಂದ್ರ ಕಾಲೇಜಿನ ಮೈದಾನದಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವ, ಕೆ.ಶಂಕರ, ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮನಾಯಕ ಮಾತನಾಡಿ ಓಟಿಗಾಗಿ ಜನರಲ್ಲಿ ಜಾತಿ, ಮತ ದ್ವೇಷ ಬಿತ್ತುತ್ತಿರುವ ಸಂಘ ಪರಿವಾರದವರ ಮುಖವಾಡ ಕಳಚಿಟ್ಟರು. ಇದು ಜಿಲ್ಲೆಯ ಅಭಿವೃದ್ಧಿಗೆ ಮಾತ್ರ ಪರ್ಯಾಯವನ್ನು ಸೂಚಿಸುತ್ತಿರಲಿಲ್ಲ. ಬದಲಾಗಿ ಜಿಲ್ಲೆಯ ರಾಜಕಾರಣಕ್ಕೆ ಒಂದು ಪರ್ಯಾಯವನ್ನು ಪ್ರತಿಪಾದಿಸುವಂತಿತ್ತು.

ಜಿಲ್ಲೆಯಾದ್ಯಂತ ತಾಲ್ಲೂಕುಗಳಿಂದ ಬಂದ ಪ್ರತಿನಿಧಿಗಳು ಎರಡು ದಿನಗಳ ಕಾಲ ಉತ್ತರ ಕನ್ನಡ ಜಿಲ್ಲೆ ಎದುರಿಸುವ ಸಮಸ್ಯೆಗಳು ಜನರ ಸ್ಥಿತಿಗತಿ ಅದರ ಪರಿಹಾರಕ್ಕಿರುವ ಮಾರ್ಗಗಳು, ಅದಕ್ಕಾಗಿ ಸಿಪಿಐ(ಎಂ) ಪಕ್ಷ ರೂಪಿಸಬೇಕಾದ ಯೋಜನೆ, ಮಾಡಬೇಕಾದ ಹೋರಾಟ, ಇದಕ್ಕೆ ಪೂರಕವಾಗಿ ಕಟ್ಟಬೇಕಾದ ಸಂಘಟನೆಯ ಸ್ವರೂಪದ ಕುರಿತು ಗಂಭೀರವಾಗಿ ಚರ್ಚಿಸಿದರು.

ರಾಷ್ಟ್ರೀಯ, ಅಂತರಾಷ್ಟ್ರೀಯ, ರಾಜ್ಯ ರಾಜಕೀಯದ ಬಗ್ಗೆ ಅವರ ಚರ್ಚೆಯಷ್ಟೇ ಮಹತ್ವವನ್ನು ಜಿಲ್ಲೆಯ ಕುರಿತಾದ ಚರ್ಚೆಗೂ ಕೊಡಲಾಯಿತು. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿ ಮತ್ತು ಕೋಮು ಸೌಹಾರ್ದದ ಕುರಿತು ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲಾ ಸಮಿತಿಯನ್ನು ಸಮ್ಮೇಳನ ಚುನಾಯಿಸಿತು. ನಂತರ ನಡೆದ ಸಭೆಯಲ್ಲಿ ಕಾಂ: ಶಾಂತರಾಮನಾಯಕ, ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಕಾರ್ಮಿಕ ಹೋರಾಟ, ರೈತ ಹೋರಾಟಗಳ ಮೂಲಕ ಜಿಲ್ಲೆಯ ಗಮನಸೆಳೆದ ಹಳಿಯಾಳ, ಹೊನ್ನಾವರ, ಭಟ್ಕಳ ತಾಲ್ಲೂಕುಗಳಲ್ಲಿ ಪಕ್ಷದ ತಾಲ್ಲೂಕು ಸಮಿತಿ ರಚಿಸಲಾಯಿತು. ಸುಭಾಷ್ ಕೊಪ್ಪಿಕರ್ ಭಟ್ಕಳ ತಾಲ್ಲೂಕು ಕಾರ್ಯದರ್ಶಿಯಾಗಿ ತಿಲಕಗೌಡ ಹೊನ್ನಾವರ ತಾಲ್ಲುಕು ಕಾರ್ಯದರ್ಶಿಯಾಗಿ, ಮಂಜುನಾಥ ಪುಲ್ಕರ ಹಳಿಯಾಳ ತಾಲ್ಲೂಕು ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಇವೆಲ್ಲದರ ಹಿನ್ನೆಲೆಯಲ್ಲಿ ಮುಂದಿನ ಹೋರಾಟಕ್ಕೆ ಪಕ್ಷ ಕಟ್ಟುವ ಸಂಕಲ್ಪದೊಂದಿಗೆ, ಸಿಪಿಐ(ಎಂ)ನ ನಿರ್ಣಯಗಳನ್ನು ಜನರ ಸಾಮಾನ್ಯರ ಮಧ್ಯೆ, ಮಧ್ಯಮವರ್ಗದವರ ಮಧ್ಯೆ ಕೊಂಡೊಯ್ಯುವ ಉತ್ಸಾಹದೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು

1. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಖಂಡಿಸಿ.
2. ಗುಡಂಗಡಿಕಾರರಿಗೆ ಪುನರ್ ವ್ಯವಸ್ಥೆ ಕಲ್ಪಿಸಲು ಆಗ್ರಹಿಸಿ.
3. ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಕಾನೂನು ರಚನೆಗೆ ಒತ್ತಾಯಿಸಿ
4. ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಒತ್ತಾಯಿಸಿ.
5. ಜಿಲ್ಲೆಯಾದ್ಯಂತ ಹದಗೆಟ್ಟಿರುವ ರಸ್ತೆಗಳ ಸುಧಾರಣೆಗೆ ಒತ್ತಾಯಿಸಿ
6. ಅಂಗನವಾಡಿ ನೌಕರರ ಗೌರವಧನ ನಿಗದಿತ ಅವಧಿಯಲ್ಲಿ ವಿತರಣೆಗೆ ಆಗ್ರಹಿಸಿ
7. ಜೋಯ್ಡಾ ತಾಲ್ಲೂಕು ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಲು ಆಗ್ರಹಿಸಿ.
8. ಮಾವಿನ ಕುರ್ವೆ ಹೊನ್ನಾವರ ಮಧ್ಯ ನಾಗರೀಕರಿಗಾಗಿ ಸೇತುವೆ ನಿರ್ಮಿಸಲು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು.


ಅಮೆರಿಕಾ ದೇಶದಲ್ಲಿ ಅಧ್ಯಕ್ಷೀಯ ಚುನಾವಣೆಯ ಪ್ರಕ್ರಿಯೆಗಳು ಆರಂಭವಾಗಿವೆ. ಅಮೆರಿಕಾ ದೇಶದ ರಾಜಕೀಯ, ಅಲ್ಲಿನ ಅಮೋಘ ಪ್ರಜಾಪ್ರಭುತ್ವದ ಪರಿಯನ್ನು ಬಲ್ಲವರೇ ಬಲ್ಲರು. ಸಾಹಿತಿ ಬಿ.ಜಿ.ಎಲ್.ಸ್ವಾಮಿಯವರು 50 ರ ದಶಕದಲ್ಲಿ ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಅಮೆರಿಕಾದ ಬಾಸ್ಟನ್ ನಗರದ ಮೇಯರ್ ಚುನಾವಣೆ ಹೇಗೆ ನಡೆಯಿತು ಎಂಬುದಕ್ಕೆ ಸಾಕ್ಷಿಯಾಗಿದ್ದನ್ನು ತಮ್ಮ 'ಅಮೆರಿಕಾದಲ್ಲಿ ನಾನು' ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ. ಅದರ ಸ್ವಾರಸ್ಯಕ್ಕಾಗಿ ಆ ಸಂಬಂಧದ ಇಡೀ ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ.

ಅಮೆರಿಕಾದಲ್ಲಿ 'ರ್ಯಾಕೆಟ್ ವ್ಯಾಪಾರ'

ನಾನು ಚಿಕ್ಕವನಾಗಿದ್ದಾಗ ಒಂದು ಕೋಲಾಹಲ ಕೇಳಿದ್ದೆ. ಅಂತರ ರಾಷ್ಟ್ರೀಯ ಪ್ರಾಮುಖ್ಯ ಪಡೆದ ಸಂಗತಿಯೆಂಬಂತೆ ಅದನ್ನು ಅಮೇರಿಕನ್ನರು ಪ್ರಚಾರ ಮಾಡಿದರು. ಲಂಡನ್‌ಬರ್ಗ್ ಎಂಬವನ ಮಗುವನ್ನು ದುಷ್ಟನೊಬ್ಬ ಅಪಹರಿಸಿದನಂತೆ; ಮಗುವನ್ನು ತಂದೆತಾಯಿಂದಿರಿಗೆ ಸುರಕ್ಷಿತವಾಗಿ ವಾಪಸು ಕೊಡುವುದಕ್ಕೆ ಲಕ್ಷಾಂತರ ಡಾಲರು ಶುಲ್ಕ ಕೇಳಿದನಂತೆ; ಇವರು ಸ್ವಲ್ಪ ನಿಧಾನಿಸಿದರಂತೆ; ಮಗುವನ್ನು ಕೊಂದನಂತೆ; ಅನಂತರ ದುಷ್ಟನಿಗೆ ಶಿಕ್ಷೆ ಆಯಿತಂತೆ, ಇತ್ಯಾದಿ, ಇತ್ಯಾದಿ. ನಮ್ಮ ಮನೆಗೆ ಆಗ ಬರುತ್ತಿದ್ದ ಕೆಲವು ಹಿರಿಯರು ಈ ವಿಷಯ ಮಾತನಾಡಿಕೊಳ್ಳುತ್ತಿದ್ದದ್ದು ನನ್ನ ಕಿವಿಗೆ ಬಿದ್ದಿತ್ತು. ಮನೆಗೆ ಬರುತ್ತಿದ್ದ ವೃತ್ತಪತ್ರಿಕೆಗಳನ್ನು ಓದಿಯೂ ಹರುಕು ಮುರುಕು ತಿಳಿದುಕೊಳ್ಳುತ್ತಿದ್ದೆ. ಈ ವಿಷಯದಲ್ಲಿ ನನಗೇಕೆ ಆಸಕ್ತಿ ಉಂಟಾಯಿತೆಂಬುದು ನನಗೇ ಸ್ಪಷ್ಟವಾಗಿ ಗೊತ್ತಿಲ್ಲ. ನಮ್ಮ ಮನೆಯಲ್ಲಿ ನಾವು ತಂಟೆ ಚೇಷ್ಟೆಗಳನ್ನು ಮಾಡಿದಾಗ 'ಹೀಗೆಲ್ಲ ಮಾಡುವ ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಾರೆ' ಎಂದು ಮನೆಯವರು ಮಾಡುತ್ತಿದ್ದ ಬೆದರಿಕೆಯಿಂದಲೋ, ನಮ್ಮ ಮನೆಯಲ್ಲಿಯೂ ಲಿಂಡನ್‌ಬರ್ಗ್ ಮಗುವಿನ ವಯಸ್ಸಿನವರು ಬೆಳೆಯುತ್ತಿದ್ದದ್ದರಿಂದಲೋ, ಅಥವಾ ಈ ಮೂರು ಕಾರಣಗಳೂ ಒಟ್ಟುಗೂಡಿದ್ದದ್ದರಿಂದಲೋ ನನ್ನ ಎಳೆಮನಸ್ಸು ಪರಿಣಾಮಗೊಂಡು ಆಸಕ್ತಿವಹಿಸಿತೆಂದು ತಿಳಿದುಕೊಂಡಿದ್ದೇನೆ. ಅಂದಿನಿಂದ ನನಗೆ ಅಮೇರಿಕ ಎಂದರೆ ಶಿಶುಹರಣಕಾರರ, ದರೋಡೆಗಾರರ ನಾಡೆಂದು ಮನಸ್ಸಿನಲ್ಲಿ ನಿಂತುಬಿಟ್ಟಿತು. ಅಲ್ಲಿಂದೀಚೆಗೆ ಆಗಾಗ್ಗೆ ನನ್ನ ನಂಬಿಕೆಯನ್ನು ಸ್ಥಿರಪಡಿಸುವಂಥ ಸಂಗತಿಗಳು ಕಿವಿಗೆ ಬೀಳುತ್ತಲೇ ಇದ್ದವು. ನನ್ನ ಗೆಳೆಯನೊಬ್ಬ ಅಮೇರಿಕಕ್ಕೆ ಹೋಗಿ ಹಡಗಿನಿಂದ ಇಳಿದು ನೆಲದ ಮೇಲೆ ಕಾಲಿಟ್ಟ ತರುವಾಯ ಶೌಚಕ್ಕೆಂದು ಪಕ್ಕದಲ್ಲಿದ್ದ ಸಾರ್ವಜನಿಕ ಸೌಚಗೃಹಕ್ಕೆ ಹೋದದ್ದು ; ಹೊರಕ್ಕೆ ಬರುತ್ತಿದ್ದಾಗ ಅವನ ಬೆನ್ನಿಗೊಂದು ಗೂಟ ಒತ್ತಿದ್ದು; ತಿರುಗಿನೋಡುವುದಕ್ಕೆ ಪ್ರಯತ್ನಿಸಿದಾಗ "ತಿರುಗಿ ನೋಡಬೇಡ! ನಿನ್ನ ಹೆಗಲಿಗೊತ್ತಿರುವುದು ರಿವಾಲ್ವರಿನ ಕೊಳವೆ. ಕೂಗಬೇಡ, ರಿವಾಲ್ವರು ಹೊಗೆಯುಗಿದೀತು! ಕೈಗಳನ್ನು ಮೇಲೆತ್ತು!" ಎಂದು ಒಂದು ಕರ್ಕಶ ದನಿಯ ಆಜ್ಞೆ; ಅವನು ವಿಧೇಯನಾದದ್ದು; ರಿವಾಲ್ವರನ್ನು ಹಿಡಿದು ಮುಖಕ್ಕೆ ಮುಸುಗು ಹಾಕಿಕೊಂಡಿದ್ದ ವ್ಯಕ್ತಿ ಮುಂದೆ ಬಂದು ಇವನ ಜೇಬಿನಲ್ಲಿದ್ದ ಹಣ, ಕೈಗಡಿಯಾರ, ಉಂಗುರಗಳನ್ನು ದರೋಡೆ ಮಾಡಿಕೊಂಡು ಅದೃಶ್ಯನಾದದ್ದು. ಇದಲ್ಲದಿದ್ದರೆ, ಸ್ವಲ್ಪ ಕತ್ತಲೆಯಾದ ಮೇಲೆ ಬೀದಿಯಲ್ಲಿ ಹೋಗುತ್ತಿದ್ದವನೊಬ್ಬ; ಇವನನ್ನು ಅಪರಿಚಿತರೊಬ್ಬಿಬ್ಬರು ಸಂಧಿಸಿ ಸಿಗರೇಟಿನ್ನೇ ದೆಂಕಿ ಕಡ್ಡಿಯನ್ನೋ ಕೇಳಿದ್ದು; ಇವನ ಜೇಬಿಗೆ ಕೈಹಾಕುವ ಸಮಯದಲ್ಲಿ ಬೆನ್ನು ತಲೆಗಳ ಮೇಲೆ ಬಲವಾಗಿ ಗುದ್ದಿ ಪ್ರಜ್ಞೆ ತಪ್ಪಿಸಿ, ನೆಲಕ್ಕೆ ಬೀಳುವಂತೆ ಮಾಡಿದ್ದು; ಇವನ ಮೇಲಿದ್ದ ಹಣ, ಒಡವೆಗಳನ್ನು ಅಪಹರಿಸಿಕೊಂಡು ಪರಾರಿಯಾದದ್ದು.

ನನಗೂ ವಯಸ್ಸಾಗಿ ತಿಳಿವು ಬಂದಂತೆಲ್ಲ ನಾನಿಟ್ಟುಕೊಂಡಿದ್ದ ಅಭಿಪ್ರಾಯವನ್ನು ನಾನೇ ಸಂದೇಹಿಸತೊಡಗಿದೆ. "ಎಲ್ಲಿಯಾದರೂ ಉಂಟೆ? ಅಂಥ ನಾಗರಿಕ ದೇಶದಲ್ಲಿ ಕೊಳ್ಳೆ ದರೋಡೆಗಳಿವೆಯೆಂಬುದನ್ನು ನಂಬುವುದಾದರೂ ಹೇಗೆ? ಅಮೇರಿಕನ್ನರು ಕುಬೇರರು; ಅಮೇರಿಕ ಅವರ ರಾಜ್ಯ. ಅಂಥ ಕಡೆ ಎಲ್ಲಿಯಾದರೂ ಇಂಥ ದುಷ್ಕೃತ್ಯಗಳಿರುವವೇ?" ಎಂದು ಸಂದೇಹಪಟ್ಟೆ. ನನ್ನ ಸಂದೇಹ ಸ್ಥಿರವೆಂಬುದಕ್ಕೆ ನಿದರ್ಶನ ದೊರೆತದ್ದು ನಾನು ಬಾಸ್ಟನ್ನಿನಲ್ಲಿ ಕಾಲಿಟ್ಟು ಒಂದೆರಡು ವಾರಗಳು ಕಳೆದ ಮೇಲೆ.


ದಿನಬೆಳಗಿನಿಂದ ಕಟ್ಟಡದೊಳಗೆ ಕೆಲಸ ಮಾಡಿ ಬಳಲಿದವನಿಗೆ ಬೇಸಗೆಯ ಬೆಳದಿಂಗಳು ನವಚೇತನವನ್ನೂ ಮನಸ್ಸಿಗೆ ಆಹ್ಲಾದವನ್ನೂ ಉಂಟುಮಾಡುವುದನ್ನು ನಾನೆಷ್ಟೋ ಸಲ ಅನುಭವಿಸಿದ್ದೇನೆ. ಇಂಥ ಒಂದು ರಾತ್ರಿ ಹನ್ನೊಂದು ಗಂಟೆವರೆಗೂ ಲ್ಯಾಬೊರೇಟರಿಯಲ್ಲಿಯೇ ಇದ್ದು, ಮನೆಗೆ ಹೊರಡೋಣವೆಂದು ಹೊರಕ್ಕೆ ಬಂದೆ. ಬೆಳದಿಂಗಳಿಗೆ ಮನಸೋತು, ಒಂದರ್ಧ ಗಂಟೆ ಹಾಗೆಯೇ ಸುತ್ತಾಡಿಕೊಂಡು ಮನೆ ಸೇರೋಣವೆಂದು ಬಳಸುದಾರಿಯಲ್ಲಿ ಹೋಗುತ್ತಿದ್ದೆ. ದಾರಿಯಲ್ಲಿ ಜನಸಂಚಾರವಿರಲಿಲ್ಲ. ಅಡ್ಡರಸ್ತೆಯ ಹತ್ತಿರ ಬಂದೆ. 20ರಿಂದ 25 ವಯಸ್ಸಿನ ಮೂವರು ಯುವಕರು ತಡೆದರು ತಬ್ಬಿಬ್ಬಾಗಿ ನಿಂತೆ. ಒಡನೆಯೇ ಒಬ್ಬ ನನ್ನ ಬೆನ್ನ ಹಿಂದೆ ಬಂದು ಏನನ್ನೋ ಒತ್ತಿದ, ಕೋಲಿನ ತಿದಿಯನ್ನು ಒತ್ತಿದಂತೆ ಅನುಭವವಾಯಿತು. ಮೈಯೆಲ್ಲ ಬೆವರಿತು. ಇನ್ನೊಬ್ಬ ನನ್ನ ರಟ್ಟೆಯನ್ನು ಹಿಡಿದುಕೊಂಡ. ಮೂರನೆಯವರ "ಹಲೊ ಡಾಕ್" (ಡಿಸಿಸಿ ಎಂಬುದು ಡಾಕ್ಟರ್ ಎಂಬ ಗೌರವ ಪದದ ಹ್ರಸ್ವರೂಪ; ಗ್ರಾಮ್ಯ ಸಂಭಾಷಣೆಯಲ್ಲಿ ವಿಶೇಷ ಬಳಕೆ). "gimmie the dough " "ನಿನ್ನ ಚುರುಕು ಬುದ್ಧಿ ಉಪಯೋಗಿಸಬೇಡ. ಕೂಗಿಕೊಳ್ಳಬೇಡ. ಪೊಲೀಸರಿಗೆ ದೂರು ಕೊಡಬೇಡ. ನಾವು ಕಣ್ಮರೆಯಾಗುವವರೆಗೂ ಇಲ್ಲಿಯೇ ನಿಂತಿರು. ಇಲ್ಲದಿದ್ದರೆ ರಿವಾಲ್ವರು ಹಾರಿ ನಿನ್ನೆ ಮೈಯನ್ನೆಲ್ಲ ತೂತು ಮಾಡೀತು! ಎಂದು ಹೇಳಿ ಓಡಿ ಮಾಯವಾದರು.



ಪರ್ಸು ಹೋದದ್ದು ನನಗೆ ಯೋಚನೆಯಾಗಲಿಲ್ಲ. ಅದರಲ್ಲಿದ್ದದ್ದು ಉಪಯೋಗಕ್ಕೆ ಬಾರದ ವಿಳಾಸ ಚೀಟಿಗಳು, ಇತರ ಚಿಲ್ಲರೆ ಸಾಮಾನುಗಳು. ಅವರು ಹೂಡಿದ ದರೋಡೆಯ ಪ್ರದರ್ಶನದಲ್ಲಿ ನನ್ನ ಇನ್ನೊಂದು ಜೇಬಿನಲ್ಲಿದ್ದ ಹಣದ ಪರ್ಸನ್ನು ಕೊಡುವ ಬದಲು ಈ ಖಾಲಿ ಪರ್ಸನ್ನು ಕೊಟ್ಟುಬಿಟ್ಟಿದ್ದೆ! ಗಾಬರಿಯಿಂದ. ಸದ್ಯ, ಪಿಸ್ತೂಲು ಹಾರಲಿಲ್ಲವಲ್ಲಾ ಎಂಬ ಸಂತೋಷದಿಂದ ಹಿಗ್ಗಿದೆ. ಇಷ್ಟು ಹೊತ್ತಿಗೆ ಸರಿಯಾಗಿ ದಂಪತಿಗಳಿಬ್ಬರು ಬರುತ್ತಿದ್ದರು ದೂರದಿಂದ ಈ ಚೌಕದಲ್ಲಿ ನಡೆದದ್ದನ್ನು ಕಂಡರೆಂದು ಕಾಣುತ್ತದೆ. ನನ್ನ ಪ್ರವರವನ್ನೂ ನಡೆದ ವಿಷಯವನ್ನೂ ಕೇಳಿ ತಿಳಿದುಕೊಂಡರು. "ಇದು ನಿನಗೆ ಹೊಸ ಜಾಗ. ಇಲ್ಲಿಯ ಲೌಕಿಕ ವ್ಯವಹಾರ ನಿನಗಿನ್ನೂ ಗೊತ್ತಿರಲಾರದು. ಯಾವಾಗಲಾದರೂ ಸರಿಯೆ, ಹೆಚ್ಚು ಹಣ ಇಟ್ಟುಕೊಂಡು ಒಂಟಿಯಾಗಿ ಹೋಗಬೇಡ" ಎಂದೂ ಮುಂತಾದಾಗಿ ತಿಳಿವು ಹೇಳಿ, ನನ್ನ ಮನೆಯವರೆಗೂ ಜತೆ ಬಂದು ಆಮೇಲೆ ಹೋದರು. ಆಗ ರಾತ್ರಿ 12 ಗಂಟೆಯಾಗಿತ್ತು.

ಒಂದರ್ಧ ಗಂಟೆಯಾದ ತರುವಾಯ ಮನೆಬಾಗಿಲು ತಟ್ಟಿದ ಶಬ್ದವಾಯಿತು. ಬಾಗಿಲು ತೆರೆದರು ಹಲ್ಲು ಕಿರಿಯುತ್ತ ನಿಂತಿದ್ದ ನನ್ನ ದರೋಡೆಕಾರರೇ! ಒಳಗೆ ಬರಬಹುದೇ?" ಎಂದರು. ಒಂದು ಗಂಟೆ ಹಿಂದೆ ತಾನೆ ನನ್ನನ್ನು ಹೆದರಿಸಿ ಪರ್ಸು ಕಿತ್ತುಕೊಂಡು ಹೋಗಿದ್ದ ಪುಂಡರು ಮನೆಬಾಗಿಲಿಗೆ ಬಂದು ಒಳಗೆ ಬರಬಹುದೇ ಎಂದು ಕೇಳಿದರೆ ನಾನೇನು ಉತ್ತರ ಕೊಡಲಿ? ನಾನು ಉತ್ತರ ಹೇಳುವ ಮುನ್ನವೇ ಒಳಗೆ ಬಂದರು. ಖಾಲಿಯಿದ್ದ ಆಸನಗಳ ಮೇಲೆ ಕೂತರು. ನನ್ನ ಪರ್ಸು ಕಿತ್ತುಕೊಂಡಿದ್ದವನು ಎದ್ದು, ಹಲ್ಲುಗಳನ್ನು ಇನ್ನಷ್ಟು ಅಗಲ ಪ್ರದರ್ಶಿಸಿ, "ಮನ್ನಿಸಬೇಕು, ನಾನು ರಿಕ್ ಬೆಲ್, ಇವನು ಟಾಮಿ ಹರ್ಸಿ, ಇವನು ಜೊಲ್ಯೀಕ್" ಎಂದು ತನ್ನ ಮತ್ತು ಗೆಳೆಯರ ಪರಿಚಯ ಹೇಳಿ, "ನಾವು ನಿಮ್ಮ ವಿದ್ಯಾರ್ಥಿಗಳು. ಈ ಹೊತ್ತು ನಿಮ್ಮ ಲೆಕ್ಚರು ಬಹಳ ಚೆನ್ನಾಗಿತ್ತು. ನಿಮ್ಮನ್ನು ಸಮಕ್ಷದಲ್ಲಿ ಪರಿಚಯ ಮಾಡಿಕೊಳ್ಳಬೇಕೆಂಬ ಹಂಬಲ ಕಾಡಿತು. ನೀವು ಈ ದೇಶಕ್ಕೆ ಹೊಸಬರಾದದ್ದರಿಂದ ಅಮೇರಿಕದ ಕಪ್ಪು ಮುಖದ ಪರಿಚಯವೂ ನಿಮಗಾಗಲಿ ಎಂದು ಈ ಅಣಕವನ್ನಾಡಿದೆವು. ನೀವು ಅನ್ಯಥಾ ಭಾವಿಸಬಾರದು" ಎಂದು ನಮ್ರತೆಯಿಂದ ಕ್ಷಮಾಪಣೆ ಕೇಳಿಕೊಂಡು ಪರ್ಸನ್ನು ಹಿಂದಕ್ಕೆ ಕೊಟ್ಟ. ನನ್ನ ಶಿಷ್ಯರು ಗುರುದಕ್ಷಿಣೆ ಸಲ್ಲಿಸಿದರೆ ಈ ವಿಚಿತ್ರ ರೀತಿಯನ್ನು ನೆನೆಸಿಕೊಂಡರೆ ನನಗೆ ಈಗ ಕೂಡ ಮೈ ಜುಂ ಎನ್ನುತ್ತದೆ!

ಅಮೆರಿಕದ ಯಾವ ದಿನದ ಯಾವ ವೃತ್ತಪತ್ರಿಕೆ ತೆಗೆದುಕೊಳ್ಳಿ ನಾನು ತುತ್ತಾದ ಅನುಕರಣ ರೀತಿಯ ದರೋಡೆಗಳು ವಾಸ್ತವಿಕ ದರೋಡೆಗಳಾಗಿ, ಜನರ ಆಸ್ತಿಪಾಸ್ತಿ ಪ್ರಾಣಗಳಿಗೆ ಊನ ಬಂದ ಸಂಗತಿಗಳು ಒಂದೆರಡಾದರೂ ಇಲ್ಲದೆ ಇರುವುದಿಲ್ಲ. ಜೀವನೋಪಾಯದ ದೃಷ್ಟಿಯಿಂದ ಹಣಗಳಿಸುವ ಈ ತೆರದ ಹಂಚಿಕೆಗೆ ರ್ಯಾಕೆಟ್ ಎಂದು ಹೆಸರು ಅಮೇರಿಕನ್‌ರಿಟ್ಟಿರುವುದು. ರ್ಯಾಕೆಟ್ ಎಂಬ ಪದದಲ್ಲಿ ಅಡಗಿರುವ ಅರ್ಥವ್ಯಾಪ್ತಿಯನ್ನು ಒಂದು ಮಾತಿನಲ್ಲಿ ಹೇಳುವಂಥ ಕನ್ನಡ ಪದ ಇಲ್ಲ. ಕೆಲವು ಉದಾಹರಣೆಗಳನ್ನು ಗಮನಿಸಿದರೆ ಅಮೇರಿಕನ್ನರು ಆ ಪದವನ್ನು ಎಂಥೆಂಥ ಸಂದರ್ಭಗಳಲ್ಲಿ ಉಪಯೋಗಿಸುವರೆಂಬುದು ತಿಳಿಯುತ್ತದೆ. ಷಿಕಾಗೊ, ಕೊಲರ್ಯಾಡೊ, ಮೊದಲಾದ ಮಧ್ಯ ಪಶ್ಚಿಮದಲ್ಲಿಯ ನಗರಗಳಲ್ಲಿ ಮನುಷ್ಯ ಷಿಕಾರಿಗೆ ಮೊದಲಿಲ್ಲ ಕೊನೆಯಿಲ್ಲ. ಇಲ್ಲಿನ ಜನ ಪಿಸ್ತೂಲು ಬಂದೂಕುಗಳಿಂದ ತಮಗೆ ಆಗದಿರುವವರ ತಲೆಹಾರಿಸದಿರುವುದನ್ನು ಕಂಡರೆ ಅಥವಾ ಕೋಟ್ಯಾಧೀಶ್ವರರ ಎಳೆಮಕ್ಕಳ ಅಪಹರಣವಾಗದಿದ್ದುದನ್ನು ಕಂಡರೆ, ಅಥವಾ ವ್ಯಭಿಚಾರಿಣೀ ಗೃಹಗಳ ಕೊರತೆ ಕಂಡುಬಂದರೆ, ಅದು ಮಹಾ ಆಶ್ಚರ್ಯ. ಇಲ್ಲಿ ಖಾತ್ರಿಯಾಗಿ ಲಾಭ ಕೊಡುವಂಥ ಒಂದೇ ಒಂದು ಕಸಬೆಂದರೆ ರ್ಯಾಕೆಟ್. ಇದನ್ನು ಒಂದು ಕಸಬು ಎಂದು ಕರೆಯಬಹುದಾಗಿದ್ದರೆ ಅಮೇರಿಕದಲ್ಲಿ ರ್ಯಾಕೆಟ್ ಕೈವಾಡಕ್ಕೊಳಪಡದ ಮಾನವ ವ್ಯಾಪಾರಗಳಿಲ್ಲವೆಂದರೂ ಅತಿಶಯೋಕ್ತಿಯಿಲ್ಲ. ಅಗಲವಾದ ಭುಜ. ಬಲಯುತವಾದ ಬಾಹು, ವ್ಯಾಯಾಮದಿಂದ ಮಾಟಗೊಂಡ ಮೈಕಟ್ಟು, ಜಗತ್ತನ್ನು ತಿರಸ್ಕಾರದಿಂದ ನೋಡುವ ದೃಷ್ಟಿ, ಅದೇ ಭಾವವನ್ನು ಪ್ರದರ್ಶಿಸುವ ಕೊಂಕು ಮುಸಿನಗು, ಇವುಗಳಿಂದ ವಿಶೇಷಿತರಾದ ಯುವಕರು ಅಂಗಡಿಯೊಳಕ್ಕೆ ಬರುವುದು, ವರ್ತಕನನ್ನು ಹಣ ಕೇಳುವುದು,



ಕಾವ್ಯಾಲಯ : ಪ್ರಕಾಶಕರು, ಮೈಸೂರು ಇವರ ಪ್ರಕಟಣೆ 'ಅಮೆರಿಕದಲ್ಲಿ ನಾನು'

ಪ್ರತಿ ತಿಂಗಳೂ ಗೊತ್ತಾದ ದಿನಕ್ಕೆ ಸರಿಯಾಗಿ ಸಂಬಳ ಕಟ್ಟುವಂತೆ ಹಣ ಕೊಡೆಂದು ಕೇಳುವುದು. ಪ್ರತಿಫಲವಾಗಿ ವರ್ತಕ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯಲ್ಲಿ ಇಳಿತಾಯವಾಗುವುದಂತೆ! ವರ್ತಕ ಈ ಹೊಂಚಿಕೆಗೆ ಒಪ್ಪಿಕೊಂಡನೋ ಸರಿ. ಇಲ್ಲದಿದ್ದರೆ ಪಿಸ್ತೂಲಿನ ಗುರಿಗೆ ತುತ್ತಾಗುತ್ತಾನೆ. ಈ ಅಂತ್ಯವನ್ನು ಬಯಸದೆ ವರ್ತಕ ಒಪ್ಪಿಗೆ ಕೊಡುತ್ತಾನೆ. ಇದೊಂದು ರ್ಯಾಕೆಟ್. ಇದಾದ ಕೆಲವು ದಿನಗಳಾದ ಮೇಲೆ ಇದೇ ತೆರನಾದ ಬೇರೊಂದು ಯುವಕರ ತಂಡ ಅದೇ ವರ್ತಕನ ಹತ್ತಿರ ಬರುವುದು. ಬಹಳ ವಿನಯದಿಂದ 'ಸಂಬಳ' ಕೇಳುವುದು, ಮೊದಲನೆ ಯುವಕರ ತಂಡದ ಬಾಧೆ ತಪ್ಪಿಸುವುವೆಂದು ವರ್ತಕನಿಗೆ ಆಸೆ ಹುಟ್ಟಿಸುವುದು, ಅವನು ಒಡಂಬಡದಿದ್ದರೆ ಬಲಪ್ರದರ್ಶನ ಮಾಡುವುದು, ಕೊನೆಗೆ ವರ್ತಕ ಬೇರೆ ಉಪಾಯವಿಲ್ಲದೆ ಒಪ್ಪಿಕೊಳ್ಳುವುದು ಇದು ಇನ್ನೊಂದು ರ್ಯಾಕೆಟ್. ಬಂಡವಾಳಗಾರರಿಂದ ಕಾರ್ಮಿಕ ಸಂಘದ ಅಧಿಕಾರಿಗಳು ಮುಷ್ಕರ ಕೊನೆಗಾಣಿಸುತ್ತೇವೆಂದು ಹೇಳಿ ಹಣ ಹೊಡೆಯುವುದು; ಕಾರ್ಮಿಕರಿಗೆ ಕಸಬಿನ ಆಸೆ ಹುಟ್ಟಿಸಿ, ಕೆಲಸ ಕೊಡಿಸುತ್ತೇವೆಂದು ಅವರಿಂದಲೂ ಹಣ ಸುಲಿಯುವುದು ಇವೂ ರ್ಯಾಕೆಟ್ಟುಗಳೇ. ಕುಶಲ ಕಲೆಗಾರರು ತಮ್ಮ ಕೃತಿಗಳನ್ನು ತಾವೇ ವಿಕ್ರಯಿಸಿದರೂ, ಏಜೆಂಟು ಎಂದು ಕೇಳಿಕೊಂಡವನಿಗೆ ಶೇಕಡ ಹತ್ತರಷ್ಟು ರುಸುಮು ಕೊಡುವುದು ಇದು ಇನ್ನೊಂದು ರ್ಯಾಕೆಟ್. ಹೊಟ್ಟೆಗೆ ಔಷಧ ಕೊಡುವ ವೈದ್ಯ ಹೊಟ್ಟೆಗೆ ಸಂಬಂಧಪಟ್ಟ ರೋಗದಿಂದಲೇ ನರಳುತ್ತಿರುವ ರೋಗಿಯನ್ನು ದಂತವೈದ್ಯನೊಬ್ಬನ ಹತ್ತಿರ ಸಲಹೆ ತೆಗೆದುಕೊ ಎಂದು ಕಳುಹಿಸುವುದು, ದಂತವೈದ್ಯ ರೋಗಿಯಿಂದ ವಸೂಲು ಮಾಡಿದ ಹಣದಲ್ಲಿ ಮೊದಲನೇ ವೈದ್ಯ ಶೇಕಡ ನಲವತ್ತರಷ್ಟು ದಕ್ಕಿಸಿಕೊಳ್ಳುವುದು, ಇದೂ ರ್ಯಾಕೆಟ್ಟೇ.

ಅಮೇರಿಕದ ರಾಜಕೀಯವೂ ರ್ಯಾಕೆಟ್‌ಮಯವೇ. ನನಗೂ ರಾಜಕೀಯಕ್ಕೂ ಕೋಣನಿಗೂ, ಕಿನ್ನರಿಗೂ ಇರುವ ಸಂಬಂಧ. ಆದರೆ ಬಾಸ್ಟನ್ ಕಾರ್ಪೊರೇಟರುಗಳ ಚುನಾವಣೆ ಕಾಲದಲ್ಲಿ ನಡೆದ ಒಂದು ಘಟನೆಯಲ್ಲಿ ನಾವು ಸಿಕ್ಕಿಕೊಳ್ಳಬೇಕಾಯಿತು. ಇಲ್ಲಿ ನಾನು ಹೇಳಹೊರಟಿರುವುದು ಬಾಸ್ಟನ್ನಿನ ರಾಜಕೀಯ ವಿಷಯದಲ್ಲಿ ನನ್ನ ಅಭಿಪ್ರಾಯಗಳನ್ನಲ್ಲ. (ನನಗೆ ರಾಜಕೀಯ ವಿಷಯಗಳಲ್ಲಿ ಯಾವ ಅಭಿಪ್ರಾಯ ತೋರುವುದೂ ಇಲ್ಲ!) ಆದರೆ ಅಲ್ಲಿ ನಡೆದ ಒಂದು ಸಂಗತಿಯನ್ನು ಹೇಳಿದಾಗ ಅದರಿಂದ ಅಲ್ಲಿಯ ರಾಜಕೀಯ ವಿಷಯವಾಗಿ ಓದುಗರಿಗೆ ಏನಾದರೂ ಸ್ವಂತ ಅಭಿಪ್ರಾಯಗಳು ಹೊಳೆದರೆ ಅದು ನನ್ನ ತಪ್ಪಲ್ಲ.

ಬಾಸ್ಟನ್ನಿನಲ್ಲಿ ಚುನಾವಣೆಯ ರಭಸ ಪರಮಾವಧಿಯಲ್ಲಿತ್ತು. "ನೀವು ನನ್ನನ್ನು ಚುನಾಯಿಸಿದರಾದರೆ, ನಿಮ್ಮ ಮಕ್ಕಳಿಗೆ ಕಾಲೇಜು ವ್ಯಾಸಂಗವನ್ನು ಉಚಿತವಾಗಿ ಕೊಡಿಸುತ್ತೇನೆ" ಎಂದು ವೋಟು ಕೇಳುವವನು. "ನನ್ನ ಗೆಳೆಯ.... ಡಾಕ್ಟರ್ ಆರ್. ಇದ್ದಾನೆ. ನೀವು ನನಗೆ ಓಟು

ಕೊಡುವಿರಾದರೆ ನಿಮ್ಮ ಮನೆಯವರಿಗೆ ಅವನು ಒಂದು ವರ್ಷ ಉಚಿತ ಚಿಕಿತ್ಸೆ ಕೊಡುವಂತೆ ಮಾಡುತ್ತೇನೆ" ಎಂದು ವೋಟು ಕೇಳುವವನು. "ನನಗೆ ಮುದಿತಾಯಿ ಇದ್ದಾಳೆ. ಅವಳನ್ನು ನರ್ಸಿಂಗ್ ಹೋಮಿನಲ್ಲಿಟ್ಟು ಅತ್ಯಂತ ಪ್ರೀತಿಯಿಂದ ಶುಶ್ರೂಷೆ ಮಾಡುತ್ತಿದ್ದೇನೆ, ನೀವು ನನಗೆ ವೋಟು ಕೊಟ್ಟರೆ ನಿಮ್ಮನ್ನೂ ಅಷ್ಟೇ ಪ್ರೀತಿಯಿಂದ ಶುಶ್ರೂಷೆ ಮಾಡುತ್ತೇನೆ" ಎಂದು ವೋಟು ಕೇಳುವವನು. "ನಾನು ಮಕ್ಕಳೊಂದಿಗ. ನನಗೆ ರೂಪವತಿಯಾದ ಹೆಂಡತಿ ಇದ್ದಾಳೆ. ನಾವಿಬ್ಬರೂ ನಿಮ್ಮ ಸೇವೆ ಮಾಡಲು ಸಿದ್ಧರಾಗಿದ್ದೇವೆ" ಎಂದು ವೋಟು ಕೇಳುವವನು. ಹೀಗೆ, ಯಾವ ಯಾವದಕ್ಕೋ ಬಾದರಾಯಣ ಸಂಬಂಧಗಳನ್ನು ಕಲ್ಪಿಸಿ ವೋಟು ದೊರಕಿಸಿಕೊಲ್ಲುವ ರ‍್ಯಾಕೆಟ್ ಹೂಡಿದ ಉಮೇದುವಾರರು ಕೆಲವರು. "ನಾನು ಹಿಂದೆ ಎದುರುಪಕ್ಷದ ಸದಸ್ಯನೊಬ್ಬನ ಕೆನ್ನೆಗೆ ಛಳೀರೆಂದು ಏಟು ಕೊಟ್ಟು ಹೀರೊ (Hero) ಆದದ್ದು ನಿಮಗೆ ನೆನಪಿರಬಹುದು. ಆ ನಾನೇ ಈಗ ನಿಮ್ಮ ಪರವಾಗಿ ನಿಂತಿದ್ದೇನೆ. ನನಗೇ ವೋಟು ಮಾಡಿರೆಂದು ಬಾಯಿಬಿಟ್ಟು ಕೇಳಬೇಕೇನು?" ಎಂಬ ಧೋರಣೆಯಲ್ಲಿ ಪ್ರಚಾರ ಮಾಡುವವನೊಬ್ಬ; "ಹೋದ ಸಲ ಮಿಸ್ಟರ್..... ಗೆ ವೋಟುಕೊಟ್ಟು ಹಾಳಾದಿರಿ. ಈ ಸಲವಾದರೂ ಸ್ಥಿತಪ್ರಜ್ಞರಾಗಿ ನನ್ನನ್ನು ಚುನಾಯಿಸಿ" ಎಂದು ಘಾಟರಿಸುವವನೊಬ್ಬ; "ಮಂಕುದಿನ್ನೆಗಳಾದ ವೋಟುದಾರರೇ, ಕಣ್ಣು ತೆರೆದು ನೋಡಿ. ಜ್ಯೋತಿಯಂತೆ ನಿಮ್ಮ ಕಣ್ಣೆದುರು ಬೆಳಗುತ್ತಿರುವವರು ಯಾರು? ಫಾದರ್ ಡಿ.! ಏಸು ಕುರಿ ಮುಂದೆಯನ್ನು ಸಲಹಿದಂತೆ ನಾನು ನಿಮ್ಮನ್ನು ಕಾಪಾಡುತ್ತೇನೆ. ನಿಮ್ಮ ವೋಟು ಕೊಡಿ" ಎಂದು ಬೋಧಿಸುವವನೊಬ್ಬ; "ಯಾರಿಗೆ ವೋಟು ಕೊಡುವುದೆಂದು ಸಂಶಯಿಗ್ರಸ್ತರಾಗಬೇಡಿ. ನಾನೇ ಉಮೇದುವಾರನಾಗಿರುವಾಗ! ನಿಮ್ಮ ವೋಟು ನನಗೆ ಬಂದದ್ದಾದರೆ ನಿಮಗೂ ಸೌಖ್ಯ. ಇಲ್ಲದಿದ್ದರೆ ಜೋಕೆ!" ಎಂದು ಹೆದರಿಸಿ ಕಾರ್ಯ ಸಾಧಿಸಹೊರಟಿರುವವನೊಬ್ಬ. ಹೀಗೆ ವೋಟಿನ ಬೇಟೆ ಅಮೆರಿಕದಲ್ಲಿ ಬಹುದೊಡ್ಡ ರ‍್ಯಾಕೆಟ್ ವ್ಯಾಪಾರ.

1949ರಲ್ಲಿ ಇಂಥ ಚುನಾವಣೆ ಪ್ರಚಾರ ಬಾಸ್ಟನ್ನಿನಲ್ಲಿ ನಡೆಯುತ್ತಿತ್ತು. ಹೊಸ ಮೇಯರ್ (Mayor)ನ್ನು ಆರಿಸುವ ಸಲುವಾಗಿ. ಆಗ ನನಗೆ ಮೈ ಹುಷಾರಿರಲಿಲ್ಲ. ಪ್ರತಿದಿನವೂ ಡಾಕ್ಟರೊಬ್ಬನ ಹತ್ತಿರ ಹೋಗಿ ಬರಬೇಕಾಗಿತ್ತು. ಒಂದು ಬೆಳಿಗ್ಗೆ ಆಸ್ಪತ್ರೆಯಲ್ಲಿ ಕುಳಿತಿದ್ದೇನೆ, ಡಾಕ್ಟರೊಂದಿಗೆ ಅದೂ ಇದೂ ಮಾತನಾಡುತ್ತ, ಇನ್ನಾರೂ ಅಲ್ಲಿರಲಿಲ್ಲ. ಹೊರಗಿನಿಂದ ಒಬ್ಬ ಒಳಬಂದ ಅಡ್ಡಡ್ಡವಾದ ಗಿಡ್ಡದೇಹ, ಕಟ್ಟುಮಸ್ತಾದ ಮೈಕಟ್ಟು, ಮುಖದ ಮೇಲಕೆಯನ್ನು ಮುಚ್ಚುವಂಥ ಹ್ಯಾಟು, ಬಲಗೈ ಯಾವಾಗಲೂ ಕೋಟು ಜೇಬಿನಲ್ಲಿ, ತುಟಿಗಳ ನಡುವೆ ಜೋಲಾಡುತ್ತಿರುವ ದೊಡ್ಡದೊಂದು ಸಿಗಾರ್. ಒಳಗೆ ಬಂದ. ನೇರವಾಗಿ ಡಾಕ್ಟರನ ಹತ್ತಿರ ಹೋಗಿ "ಗುಡ್ ಮಾರ್ನಿಂಗ್, ಡಾಕ್" ಎಂದ. ಡಾಕ್ಟರು, ಪಾಪ, ಕಣ್ಣೆತ್ತಿ ಪಿಳಪಿಳನೆ ಇವನನ್ನೇ ನೋಡಲಾರಂಭಿಸಿದ; ಜ್ಞಾಪಿಸಿಕೊಂಡ, ತಲೆ ಕೆರೆದುಕೊಂಡ, ರೋಗಿಗಳ ಪಟ್ಟಿ ನೋಡಿ ತಲೆ ಅಲ್ಲಾಡಿಸಿದ. ಹಿಂದೆಂದೂ ಕಾಣದಿರುವವನು ಆಕಸ್ಮಿಕವಾಗಿ ಎದುರಿಗೆ ಬಂದು ನಿಂತು, ಬಹುಪರಿಚಿತನಂತೆ "ಗುಡ್ ಮಾರ್ನಿಂಗ್, ಡಾಕ್" ಎಂದರೆ, ಆಗಂತುಕನ ಪರಿಚಯ ಡಾಕ್ಟರಿಗೆ ಹೇಗೆ ತಾನೆ ಆಗಬೇಕು?

ಅಮೆರಿಕದಲ್ಲಿ ಎರಡು ಮುಖ್ಯ ರಾಜಕೀಯ ಪಕ್ಷಗಳಿವೆ ಪ್ರಜಾರಾಜ್ಯ ಪಕ್ಷ (Democratic) ಮತ್ತು ಜನತಾಸ್ವಾಮ್ಯ ಪಕ್ಷ (Republican). ಎರಡು ಪಕ್ಷಗಳವರೂ ಚುನಾವಣೆಗಳಿಗೆ ತಮ್ಮ ತಮ್ಮ ಉಮೇದುವಾರರನ್ನು ದಬ್ಬುತ್ತಾರೆ. ಡಾಕ್ಟರ ಹತ್ತಿರ ಬಂದು ಹೊಸಬನು ರಿಪಬ್ಲಿಕ್ ಪಕ್ಷದ ದೂತ. ರಾಜಕೀಯವೊಂದೇ ಇವನ ಕಸುಬು, ಅರ್ಥಾತ್ ಜೀವನೋಪಾಯ ಮಾರ್ಗ. ಕಸಬಿಗೆ ಅವಶ್ಯವಾಗಿರುವ ಗುಣಗಳೆಲ್ಲವೂ ಭಂಡತನ, ಒರಟುತನ, ನಾಚಿಕೆಗೇಡಿತನ ಇವನಲ್ಲಿ ಇದ್ದುವು. ಅಲ್ಲಿ ಕುಳಿತಿದ್ದ ನನ್ನನ್ನು ಗಮನಿಸಿ, "ಇವನಾರು, ಡಾಕ್?" ಎಂದ.

"ಅವನು ನನ್ನ ಗೆಳೆಯ, ಔಷಧಕ್ಕಾಗಿ ಬಂದಿದ್ದಾನೆ. ನೀನಾರೊ?"

"ನಾನಾರಾದರೇನು! ನನ್ನ ಹೆಸರನ್ನು ಕೇಳುತ್ತಿರುವ ಪಕ್ಷಕ್ಕೆ, ಜನ ನನ್ನನ್ನು ಡಿಕ್ ಎನ್ನುತ್ತಾರೆ. ನೀನೂ ಹಾಗೆಯೇ ಕರೆಯಬಹುದು." ಇವನನ್ನು ಬೀದಿಗೆ ಒದ್ದುಬಿಡಲೇ ಎನ್ನುವಷ್ಟು ಕೋಪ ಡಾಕ್ಟರಿಗೆ ಬಂತು, ಆದರೆ ಡಿಕ್ಕನ ಎದೆಯಗಲವನ್ನು ನೋಡಿದೊಡನೆಯೆ ಒದಿಸಿಕೊಂಡು, ಹೊರದೂಡಿಸಿಕೊಳ್ಳುವವನು ಇವನೋ ಅಥವಾ ತಾನೆಯೋ ಎಂಬ ಶಂಕೆ ಹುಟ್ಟಿ, ಅದುಮಿಕೊಂಡ. ಡಿಕ್ಕನು ಇಷ್ಟಕ್ಕೆ ಬಿಡಲಿಲ್ಲ. ಡಾಕ್ಟರನ್ನು ಕುರಿತು, "ನಿನ್ನ ಗೆಳೆಯ ನಮ್ಮಿಬ್ಬರ ಮಾತನ್ನು ಯಾರಿಗೂ ಉಸುರುವುದಿಲ್ಲತಾನೆ? ಅವನು ನಮ್ಮ ಕಡೆ ತಾನೆ?" ಎಂದ. ಕೋಪಗೊಂಡಿದ್ದ ಡಾಕ್ಟರಿಗೆ ಈಗ ಹೆದರಿಕೆಯೂ ಆಯಿತು. ಡಿಕ್ ತನ್ನ ಒಂದು ಕೈಯನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದನೆಂದು ಆಗಲೇ ಹೇಳಿದ್ದೇನೆ. ಜೇಬಿನಲ್ಲಿ ಪಿಸ್ತೂಲಿಟ್ಟುಕೊಂಡಿದ್ದನೆಂದು ನಂಬುವುದಕ್ಕೆ ನಮಗೆ ಸಾಕಾದಷ್ಟು ಸಂಜ್ಞೆಗಳಿದ್ದುವು. ಆದ್ದರಿಂದ ಸದ್ಯಕ್ಕೆ ಇವನಿಂದ ಉಪಾಯಮಾಡಿ ತಪ್ಪಿಸಿಕೊಳ್ಳಬೇಕೇ ವಿನಾ ಎದುರುಹಾಕಿಕೊಳ್ಳುವುದು ಸಾಧುವಲ್ಲವೆಂಬುದನ್ನು ಒಡನೆಯೇ ಮನಗಂಡವು. ಕಣ್ಣುಸನ್ನೆಗಳ ವಿನಿಮಯದಿಂದ ನಾನೂ ಡಾಕ್ಟರೂ ನಿರ್ದೇಶಕ್ಕೆ ಬಂದೆವು. ನಮ್ಮ ಈ ಮೂಕ ಅಭಿನಯಗಳನ್ನು ಕಂಡು ಡಿಕ್ಕನ ಮನಸ್ಸಿನಲ್ಲಿ ಏನೋ ಸಂಶಯ ಮೂಡಿತು. ಒಂದು ಸಲ ಇಬ್ಬರನ್ನೂ ದುರುಗುಟ್ಟಿ ನೋಡಿ ಘಾಟರಿಸಿ. ನನ್ನನ್ನು ಕುರಿತು "ಇಲ್ಲಿ ಬಾ" ಎಂದ. ನಾನೇಳುವಷ್ಟರಲ್ಲಿಯೇ "ಕೂತಿರುವ ದಿಕ್ಕಿನಲ್ಲಿಯೇ ಗೋಡೆಯ ಕಡೆ ಹೋಗು!" ಎಂದ,

ಹೋದೆ,

"ಗೋಡೆಕಡೆ ಮುಖ ತಿರುಗಿಸು!"

ತಿರುಗಿಸಿದೆ.

"ಕೂತುಕೊ, ಅಲ್ಲಿಯೇ!"

ಕೂತೆ.

"ಕಣ್ಣಿಗೆ ಕರ್ಚೀಫು ಕಟ್ಟಿಕೊ!"

ಜೇಬಿನಿಂದ ತೆಗೆದು ಕಟ್ಟಿಕೊಂಡೆ.

"ಹಿಂತಿರುಗಿ ನೋಡಬೇಡ, ಕೂಗಿಕೊಳ್ಳಬೇಡ, ಕಪಿವಿದ್ಯೆಗಳನ್ನು ಮಾಡಬೇಡ. ನಿನಗೆ ಯಾವ ವಿಧವಾದ ತೊಂದರೆಯಾಗಲಿ ಅಪಾಯವಾಗಲಿ ಸಂಭವಿಸುವುದಿಲ್ಲ."

ಹಾಗೆಯೇ ಕೂತುಕೊಂಡೆ, ಇವನ ಆಜ್ಞೆಗಳೆಲ್ಲವನ್ನೂ ಪಾಲಿಸಿದೆ. "ಕಿವಿ ಮುಚ್ಚಿಕೊ" ಎಂದು ಆಜ್ಞೆ ಮಾಡುವುದಕ್ಕೆ ಅವನಿಗೆ ಮೆದುಳಿಲ್ಲದೆ ಹೋಯಿತು. ಆದ್ದರಿಂದ ಇವನಿಗೂ ಡಾಕ್ಟರಿಗೂ ನಡೆದ ಸಂಭಾಷಣೆ ಕೇಳಿಸಿತು.

"ಈ ಸಲ ನೀನಾವ ಉಮೇದುವಾರನಿಗೆ ವೋಟು ಕೊಡುತ್ತಿ. ಡಾಕ್?"

"ನನಗೆ ಇಷ್ಟ ಬಂದ ಉಮೇದುವಾರನಿಗೆ."

"ಹಾಗೋ.... ನಿನಗೊಬ್ಬ ಮಗಳಿದ್ದಾಳೆಯಲ್ಲವೆ? ಕಳೆದ ನಾಲ್ಕು ವರ್ಷಗಳಿಂದಲೂ ಸ್ಕೂಲು ಉಪಾಧ್ಯಾಯ ವೃತ್ತಿಗಾಗಿ ಕಾಯುತ್ತಿರುವಳಲ್ಲವೆ?"

"ಹೌದು, ಅದು ನಿನಗೆ ಹೇಗೆ ಗೊತ್ತಾಯಿತು?"

"ಅದು ಬೇರೆ ವಿಷಯ. ನೀನು ನಮ್ಮ ಉಮೇದುವಾರನಿಗೆ ವೋಟು ಕೊಟ್ಟ ಪಕ್ಷಕ್ಕೆ ನಿನ್ನ ಮಗಳಿಗೆ ಕೆಲಸ ದೊರಕಿಸಲು ಪ್ರಯತ್ನಪಡುತ್ತೇವೆ. ನಾವು ಈಗಲೇ ಏನನ್ನೂ ಖಂಡಿತವಾಗಿ ಪ್ರಮಾಣ ಮಾಡುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ: ನಿನ್ನ ವೋಟನ್ನು ನಮ್ಮ ಪ್ರತಿಸ್ಪರ್ಧಿಗೆ ಕೊಟ್ಟರೆ, ನಿನ್ನ ಮಗಳಿಗೆ ಕೆಲಸವೂ ಸಿಕ್ಕುವುದಿಲ್ಲ, ಅವಳು ಸ್ಕೂಲು ಉಪಾಧ್ಯಾಯಳೂ ಆಗುವುದಿಲ್ಲ. ನಿನಗೆ ಅವಳು ದಕ್ಕುವುದೂ ಇಲ್ಲ!"

ಸಂಭಾಷಣೆ ಮುಗಿಯಿತು. ಬೀಳ್ಕೊಡುವ ಉದ್ದೇಶದಿಂದ "ಬರುತ್ತೇನೆ, ಡಾಕ್. ನಾನು ತಿರುಗಿ ಎಲೆಕ್ಷನ್ ದಿನ ಬಂದು ನೋಡುತ್ತೇನೆ. ಅಷ್ಟರಲ್ಲಿ ಯೋಚನೆ ಮಾಡಿ ನಿರ್ಧರಿಸಕೊ..." ಎಂದು ಅಪ್ಪಣೆ ಮಾಡಿ ನನ್ನನ್ನು ಉದ್ದೇಶಿಸಿ, "ನಮ್ಮ ಸಂಭಾಷಣೆಯನ್ನು ನೀರು ಕೇಳಿಲ್ಲವೆಂದು ತಿಳಿದುಕೊ! ನೀನಿಲ್ಲಿರಲಿಲ್ಲವೆಂದೇ ಭಾವಿಸಿಕೊ! ಎಲ್ಲಾದರೂ ಇದರ ವಿಷಯ ಉಸಿರೆತ್ತೀಯೆ, ಕಪಿವಿದ್ಯೆಗಳನ್ನು ಮಾಡೀಯೇ, ಜೋಕೆ! ನಿನ್ ಕುಲಗೋತ್ರಗಳನ್ನು ತಿಳಿದುಕೊಳ್ಳಲು ನನಗೆ ಮಾರ್ಗಗಳಿವೆ! ಈ ವಿಷಯ ಬಯಲಾದರೆ ನಿನ್ನ ತಲೆ ಭುಜದಿಂದ ಹಾರಿಹೋದೀತು, ಎಚ್ಚರಿಕೆ!" ಎಂದು ಗದರಿಸಿ ಹೊರಟುಹೋದ.

ಡಾಕ್ಟರು ನಡುಗುತ್ತ, "ಇಂಥ ದುಷ್ಟರಿಂದ ಮಾನ ಕಳೆದುಕೊಳ್ಳಬೇಕಾದ ಸ್ಥಿತಿ ಒದಗಿದೆ ನಮಗೆ. ಗೌರವದಿಂದ ಜೀವನ ನಡೆಸುತ್ತಿರುವವರಿಗೆ, ನನಗೇ ನಾಚಿಕೆಯಾಗುತ್ತದೆ. ಆದರೆ ಮಾಡುವುದೇನು? ಬೇರೆ ದಾರಿಯಿಲ್ಲ ನನಗಿರುವ ಸರ್ವಸ್ವವೆಂದರೆ ನನ್ನ ಒಬ್ಬಳೇ ಮಗಳು. ಇವಳಿಗೆ ಜನ್ಮಕೊಟ್ಟು ನನ್ನ ಹೆಂಡತಿ ಪ್ರಾಣಬಿಟ್ಟಳು ಅಂದಿನಿಂದ ನನ್ನ ಆರೈಕೆಯಲ್ಲಿ ಬೆಳೆದಿದ್ದಾಳೆ. ಮದುವೆ ಮಾಡಿಕೊಂಡು ಸುಖವಾಗಿರಮ್ಮ ಎಂದರೆ, ಬೇಡಪ್ಪ, ನೀನಿರುವವರೆಗೂ ನಿನ್ನೊಡನೆಯೇ ಇರುತ್ತೇನೆ, ಎಂದು ಹಟ ಹಿಡಿದಿದ್ದಾಳೆ" ಎಂದೂ ಮುಂತಾದ್ದಾಗಿ ವ್ಯಸನಪಟ್ಟ.

ಇದಾಗಿ ಒಂದು ವಾರವಾಯಿತು. ಎಲೆಕ್ಷನ್ ದಿನ ಬಂತು. ಯಥಾಪ್ರಕಾರ ಡಾಕ್ಟರ ಹತ್ತಿರ ಔಷಧಕ್ಕೆ ಹೋಗಿದ್ದೆ. ಡಾಕ್ಟರು ಹೇಳತೊಡಗಿದ: "ಯೋಚನೆ ಮಾಡಿ ಮಾಡಿ ಕೊನೆಗೂ ಪೊಲೀಸಿನವರಿಗೆ ಆ ದಿನ ನಡೆದದ್ದನ್ನು ತಿಳಿಸಿಬಿಟ್ಟೆ. ಇನ್ನೇನು, ಅವರು ಇಲ್ಲಿಗೆ ಬರುವ ಸಮಯ".

ಹೊರಗಡೆಕಾರೊಂದು ನಿಂತಿತು. ಮೂವರು



ಸಾದಾ ಉಡುಪಿನ ಪೊಲೀಸರು ಒಳಕ್ಕೆ ಬಂದರು. ಡಾಕ್ಟರೊಡನೆ ಅದೇನೇನೋ ಗುಸುಗುಸು ಮಾತನಾಡಿದರು. ಡಾಕ್ಟರು ಎದ್ದುಬಂದು ಪರಸ್ಪರ ಪರಿಚಯ ಮಾಡಿಸಿದ. ಗೂಢಚಾರರಲ್ಲೊಬ್ಬ, "ನಮಗೆ ನಿನ್ನ ಸಹಾಯ ಈಗ ಬೇಕಾಗಿದೆ..." ಎನ್ನುವಷ್ಟರಲ್ಲಿಯೇ ನನಗೆ ಪುಕಪುಕ ಆರಂಭವಾಯಿತು. ಆದರೂ ಪೊಲೀಸು ಡಿಪಾರ್ಟ್‌ಮೆಂಟ್‌ನವರು ತಾನೆ, ಧರ್ಮ ರಕ್ಷಕರಲ್ಲವೆ, ದುಷ್ಟಶಿಕ್ಷಕರಲ್ಲವೆ ಎಂಬ ದೃಷ್ಟಿಯಿಂದಲೋ ಏನೋ ಒಂದು ತೆರನಾದ ಕಳ್ಳಧೈರ್ಯ ಮೂಡಿತು. "ಅಗತ್ಯವಾಗಿ" ಎಂದುಬಿಟ್ಟೆ.

"ನೀನು ಆ ಪುಂಡನನ್ನು ನೋಡಿರುವೆಯಲ್ಲವೆ?"

"ಹೌದು"

"ಈಗ ಪುನಃ ಅವನನ್ನು ನೋಡಿದರೆ ಗುರುತು ಹಿಡಿಯಬಲ್ಲೆಯ?"

"ಓಹೋ."

"ಅವನೀಗ ಬರುವ ಹೊತ್ತಾಯಿತು. ಡಾಕ್ಟರು ಒಳರೂಮಿನಲ್ಲಿ ರೋಗಿಯೊಬ್ಬನನ್ನು ಪರೀಕ್ಷಿಸುತ್ತಿರುವಂತೆ ನಟಿಸುತ್ತಿರಲಿ. ನೀನು ಇಲ್ಲಿಯೇ ಕೂತಿರು. ನಮ್ಮಲ್ಲೊಬ್ಬ ನಿಕ್ಕ ಕಾವಲಿಗಾಗಿ ನಿನ್ನ ಪಕ್ಕದಲ್ಲಿಯೇ ಕೂತಿರುತ್ತಾನೆ. ಆದ್ದರಿಂದ ನಿನಗೆ ಯಾವ ತೆರನಾದ ಹೆದರಿಕೆಯೂ ಬೇಡ. ಉಳಿದ ನಾವಿಬ್ಬರೂ ಬೇರೆ ಬೇರೆ ಆಸನಗಳಲ್ಲಿ ಕುಳಿತು ನ್ಯೂಸ್ ಪೇಪರನ್ನು ಓದುತ್ತಿರುವಂತೆ ನಮ್ಮ ಮುಖಗಳನ್ನು ಮುಚ್ಚಿಕೊಂಡಿರುತ್ತೇವೆ. ಆಗಂತುಕನು ಬರುತ್ತಲೂ ನೀನೇ ಅವನನ್ನು ಸಂಬೋಧಿಸಿ, "ಹಾಯ್ ಮಿಸ್ಟರ್! ಡಾಕ್ಟರ್ ಇನ್ನೊಂದೆರಡು ನಿಮಿಷಗಳಲ್ಲಿ ಬರುತ್ತಾರೆ. ದಯವಿಟ್ಟು ಕೂತುಕೊ!" ಎಂದು ಹೇಳು. ಮುಂದಿನ ಕೆಲಸಗಳನ್ನು ನಾವು ನೋಡಿಕೊಳ್ಳುತ್ತೇವೆ."

ಹತ್ತು ನಿಮಿಷಗಳಾದ ಮೇಲೆ ಬಾಗಿಲ ಹೊರಗಿನಿಂದ ದಪ್ಪ ಸಿಗಾರ್ ಕಾಣಿಸಿತು; ಕ್ರಮೇಣ ಅದನ್ನು ಕಚ್ಚಿಕೊಂಡಿದ್ದ ದಪ್ಪ ವ್ಯಕ್ತಿಯೂ ಒಳಕ್ಕೆ ಬಂದ. ಪೊಲೀಸಿನವರು ಹೇಳಿಕೊಟ್ಟಿದ್ದ ಗಿಣಿಪಾಠವನ್ನು ಒಪ್ಪಿಸುವುದಕ್ಕಾಗಿ ಆಗಂತುಕನನ್ನುದ್ದೇಶಿಸಿ "ಹಾಯ್ ಮಿಸ್ಟರ್!" ಎಂದು ಹೇಳುತ್ತಿದ್ದಾಗಲೇ ಮೂರು ಮೂಲೆಗಳಲ್ಲಿ ಕೂತಿದ್ದ ಗೂಢಚಾರರೂ ಜಿಂಕೆಗಳಂತೆ ಇವನ ಮೇಲೆ ಹಾರಿದರು. ಅವನು ಜೇಬಿನಲ್ಲಿ ಹುದುಗಿಸಿಟ್ಟುಕೊಂಡಿದ್ದ ರಿವಾಲ್ವರನ್ನು ವಶಪಡಿಸಿಕೊಂಡರು. ಅವನ ಕೈಗಳನ್ನು ಬೆನ್ನ ಹಿಂದೆ ತಂದು ಕೋಳಹಾಕಿದರು. ಇಷ್ಟೂ ಮಿಂಚಿನ ವೇಗದಲ್ಲಿ ನಡೆದುಹೋಯಿತು. ಅವನಿಗಂತೂ ಈ ಅನಿರೀಕ್ಷಿತವಾದ ಸಂಘಟನೆಗಳಿಂದ ಕಕ್ಕಾಬಿಕ್ಕಿಯಾಯಿತು. ಸ್ವಲ್ಪ ಚೇತರಿಸಿಕೊಂಡು ಗುಪ್ತ ಪೊಲೀಸಿನವರನ್ನು ದುರುಗುಟ್ಟಿ ನೋಡಿದ. ಅವರ ನಿಜವಾದ ಗುರುತು ಅವನಿಗೆ ಹೊಳೆಯಲಿಲ್ಲ. "ನೀವು ಯಾರ ಕಡೆಯವರಾಗಿ ಬಂದಿರುವಿರೋ? ಆ ಹೆಗ್ಗಣ, ನಮ್ಮ ಪ್ರತಿಸ್ಪರ್ಧಿಯ ದೂತರೆಂದು ಕಾಣುತ್ತದೆ!...." ಎಂದು ಇನ್ನೇನೋ ಹೇಳುವಷ್ಟರಲ್ಲಿದ್ದ ಅಷ್ಟರಲ್ಲಿ ಒಬ್ಬ ಗೂಢಚಾರ ಬಾಯಿ ಹಾಕಿ "ನಾವಿಬ್ಬರು ಪ್ರತಿಸ್ಪರ್ಧಿಗಳ ಪ್ರತಿಸ್ಪರ್ಧಿಯಾಗಿ ಬಂದಿದ್ದೇವೆ. ನಾವು ಕರೆದುಕೊಂಡು ಹೋದೆಡೆಗೆ ಬಾಗ. ನಾವಾರೆಂಬುದು ಪೂರ್ತಿ ಗೊತ್ತಾಗುತ್ತದೆ" ಎಂದು ಡಿಕ್ಕನನ್ನು ಬಾಗಿಲಿನಿಂದ ಹೊರಕ್ಕೆ ದೂಡಿಕೊಂಡು ಹೋದ.

ಇಷ್ಟು ಹೊತ್ತಿಗೆ ಬಚ್ಚಿಟ್ಟುಕೊಂಡಿದ್ದ ಡಾಕ್ಟರೂ ಹೊರಬಂದು ನನ್ನ ಪಕ್ಕದಲ್ಲಿ ನಿಂತ. ಇಬ್ಬರೂ ಒಬ್ಬರ ಮುಖವನ್ನೊಬ್ಬರು ದಿಗ್ವಿಜಯ ದೃಷ್ಟಿಯಿಂದ ನೋಡುತ್ತಿದ್ದವು. ಹೊರಗಡೆ ಪೊಲೀಸ್ ಕಾರು ಹೊರಡುವ ಸದ್ದು ಕೇಳಿಸಿತು ಅದರೊಡನೆ "ಏ! ಹೊರದೇಶದವನೆ! ನೀನೇ ಎಲ್ಲೋ ಈ ಕಾಪರ್‌ಗಳಿಗೆ ಸುಳಿವು ಕೊಟ್ಟಿರುವೆ! ಆಗಲಿ... ಈ ಕಿರಾತರಿಂದ ತಪ್ಪಿಸಿಕೊಂಡ ಮೇಲೆ ನಿನ್ನನ್ನು ಬಂದು ವಿಚಾರಿಸಿಕೊಳ್ಳುತ್ತೇನೆ!" ಎಂದು ಡಿಕ್ಕನ ಕರ್ಕಶವಾದ ಅಬ್ಬರವೂ ಮಿಳಿತವಾಯಿತು.

ಡಾಕ್ಟರ್ ಉಪಸಂಹಾರ ಮಾಡಿದ: "ಷಿಕಾಗೊನಲ್ಲಿ ಹಿಂದೆ ಸೆರ್‌ಮ್ಯಾಕ್ ಎಂಬುವನೊಬ್ಬ ಮೇಯರ್ (Mayor) ಆಗಿ ರಾಜ್ಯಭಾರ ನಡೆಸಿದ ಅವನು ಕೆಲಸಗಾರ; ಸ್ವಲ್ಪ ಕಾಲ ಕಾರ್ಮಿಕರ ಸಂಘದ ಪ್ರತಿನಿಧಿಯಾಗಿದ್ದ: ಕಾರ್ಮಿಕರಿಗೆ ಬೇಕಾದವನಾಗಿದ್ದ. ಏಕೆಂದರೆ ಕಾರ್ಮಿಕರಿಗೆ ಸರಿಬೀಳದ ಬಂಡವಾಳಗಾರರ ಅಥವಾ ದಣಿಗಳ ತಲೆ ಹಾರಿಸುತ್ತಿದ್ದ, ಪ್ರೆಸಿಡೆಂಟ್ ರೂಸ್‌ವೆಲ್ಟ್ ಒಡನೆ ಕೂಡ ಆಪ್ತಸ್ನೇಹವಿಟ್ಟುಕೊಂಡಿದ್ದ! ಅಮೆರಿಕದ ನ್ಯೂಸ್‌ಪೇಪರುಗಳು ಸರಳನಾದ ಕಷ್ಟಪಡುವ ಕಾರ್ಮಿಕನಿಗೂ ದೇಶದ ಅಧ್ಯಕ್ಷನಿಗೂ ಇದ್ದ (ಆದರ್ಶ)touching ಸ್ನೇಹ ಸೌಹಾರ್ದಗಳನ್ನು ಇನ್ನಷ್ಟು ಉತ್ಪ್ರೇಕ್ಷೆ ಮಾಡಿ ಸಂಪಾದಕೀಯ ನ್ಯಾಸಗಳನ್ನು ಬರೆದವು; ದಪ್ಪ ಅಕ್ಷರಗಳಲ್ಲಿ ಶಿರೋನಾಮೆಗಳನ್ನು ಮುದ್ರಿಸಿದವು, ಇದಾದ ಮೂರು ವರ್ಷವಾದ ಮೇಲೆ ಸೆರ್‌ಮ್ಯಾಕ್‌ನನ್ನು ಯಾರೋ ಖೂನಿ ಮಾಡಿದರು. ಸಾಯುವಾಗ ಇವನು ಮೂರು ಮಿಲಿಯನ್ ಡಾಲರುಗಳ ನಗದನ್ನು ತೆರಿಗೆ ಕೊಡದೆ ಶೇಖರಿಸಿಟ್ಟಿದ್ದ; ಐವತ್ತು "ವಿಪರೀತ ಚರಿತ" ಸಂಸಾರಗಳ ದಾತೃವೂ ಪೋಷಕನೂ ಆಗಿದ್ದ; ತನಗೆ ಆಗದ ಮೂವತ್ತು ವ್ಯಕ್ತಿಗಳ ತಲೆಗಳನ್ನು ಹಾರಿಸಿದ್ದ. ಇಂಥವನು ಕೂಡ ಮೇಯರ್ ಆದ, ಆದ್ದರಿಂದ ನೀತಿ ತಿಳಿಯಿತೆ, ಮಗು? ಅಮೇರಿಕದಲ್ಲಿ ಎಂಥವನಾದರೂ ಎಂಥವನು ಬೇಕಾದರೂ ಆಗಬಹುದು! ನಿನ್ನೆ ಷಿಕಾಗೋನಲ್ಲಿ ಒಬ್ಬ ಆಗಿದ್ದ; ಈ ಹೊತ್ತು ಇಲ್ಲಿ, ಬಾಸ್ಟನ್ನಿನಲ್ಲಿ, ಇನ್ನೊಬ್ಬ ಆಗುವ ಸಂಭವವಿತ್ತು; ನಾಳೆ ಇನ್ನೊಂದು ನಗರದಲ್ಲಿ ಮತ್ತೊಬ್ಬ ಆಗುವುದಿಲ್ಲವೆಂಬ ಭರವಸೆಯಂತೂ ಇಲ್ಲ".

ಬಹುಶಃ ಇವೇ ಮೊದಲಾದ ರ‍್ಯಾಕೆಟ್ ವ್ಯಾಪಾರ ವ್ಯವಹಾರಗಳು ಅಮೇರಿಕನ್ ಸಂಸ್ಕೃತಿಯ ಒಂದು ಉದಾಹರಣೆಯೋ ಏನೋ ಎಂದು ಸಂದೇಹಪಡುತ್ತಿದ್ದೇನೆ.

ಶರತ್‌ಚಂದ್ರ

ಯುರೋಪಿನ ವೀಸಾ ರಹಿತ 'ಶೆಂಗನ್ ವಲಯ'ದ ವಿಸ್ತಾರ


'ಶೆಂಗೆನ್ ವಲಯ' ಎಂದು ಕರೆಯಲಾಗುವಯುರೋಪಿನ 'ವೀಸಾ ಇಲ್ಲದ' ಪ್ರದೇಶ ಇತ್ತೀಚೆಗೆ 15 ದೇಶಗಳಿಂದ 24 ದೇಶಗಳಿಗೆ ವಿಸ್ತಾರವಾಯಿತು. ಈ ವಲಯದೊಳಗೆ ಈ ದೇಶಗಳ ನಾಗರಿಕರಿಗೆ ಮುಕ್ತ ಸಂಚಾರದ ಅವಕಾಶ ಇರುತ್ತದೆ. ವೀಸಾದ ಅಗತ್ಯ ಇರುವುದಿಲ್ಲ. ಪಶ್ಚಿಮ ಯುರೋಪಿಗೆ ಈ ವರೆಗೆ ಸೀಮಿತವಾಗಿದ್ದ 'ಶೆಂಗೆನ್ ವಲಯ' ಪೂರ್ವ ಯುರೋಪಿಗೂ ವಿಸ್ತರಿಸಿದೆ. ಪೂರ್ವ ಯುರೋಪಿನ 9 ದೇಶಗಳು ಡಿಸೆಂಬರ್ 21 ರಿಂದ ಈ ವಲಯದ ಭಾಗವಾದವು. 2004 ರ ಮೇ ದಿನದಂದು ಯುರೋಪಿಯನ್ ಒಕ್ಕೂಟ ಸೇರಿದ 9 ದೇಶಗಳೇ ಆ ದೇಶಗಳು. ಎಸ್ಟೋನಿಯಾ, ಲಾಟವಿಯಾ, ಲಿಥುವಾನಿಯಾ, ಪೋಲೆಂಡ್, ಚೆಕ್, ಸ್ಲೋವಾಕಿಯಾ, ಹಂಗೇರಿ, ಸ್ಲೋವೇನಿಯಾ, ಮಾಲ್ಟಾ - ಆ 9 ದೇಶಗಳು.

ಆದರೆ 'ಶೆಂಗೆನ್ ವಲಯ' ಮತ್ತು ಯುರೋಪಿಯನ್ ಒಕ್ಕೂಟ ಒಂದೇ ಅಲ್ಲ. ಯುರೋಪಿಯನ್ ಒಕ್ಕೂಟದಲ್ಲಿ ಇರದ ಐಸ್ ಲ್ಯಾಂಡ್ ಮತ್ತು ನಾರ್ವೆ 'ಶೆಂಗೆನ್ ವಲಯ'ದಲ್ಲಿ ಇವೆ. ಒಕ್ಕೂಟದಲ್ಲಿ ಸೇರಿರುವ ಬ್ರಿಟನ್, ರೊಮೇನಿಯಾ 'ಶೆಂಗೆನ್ ವಲಯ'ದಲ್ಲಿ ಇಲ್ಲ. ಸ್ವಿಟ್ಜರ್ ಲ್ಯಾಂಡ್ ಎರಡರಲ್ಲೂ ಇಲ್ಲ. ಯುರೋಪಿನ ಪಶ್ಚಿಮ ಭಾಗದಲ್ಲಿ ಇರುವ ದ್ವೀಪ ಬ್ರಿಟನ್, ಮತ್ತು ಪರ್ವತ ಆವೃತ್ತವಾಗಿರುವ ಸ್ವಿಟ್ಜರ್ ಲ್ಯಾಂಡ್ ಮತ್ತು ಯುಗೊಸ್ಲಾವಿಯ ಬಿಟ್ಟರೆ ಯುರೋಪಿನ ಹೆಚ್ಚು ಕಡಿಮೆ ಎಲ್ಲಾ ಗಡಿಗಳು ಅಳಿಸಿ ಹೋದಂತೆ ಆಗಿದೆ. ಹಿಂದೆ ಒಂದೇ ಧೇಶದ ಭಾಗವಾಗಿದ್ದು, ಎರಡು ಮಹಾಯುದ್ಧಗಳ ಫಲವಾಗಿ ಬೇರೆ ಬೇರೆ ದೇಶಗಳ ಬಾಗವಾಗಿ ಹೋದ ಮತ್ತು ಶೀತಲ ಸಮರದ ಅಂತರ್‌ರಾಷ್ಟ್ರೀಯ ಸನ್ನಿವೇಶದಲ್ಲಿ ವೀಸಾ ಸಿಗದೆ ಎಷ್ಟೋ ಕುಟುಂಬಗಳು, ಮಿತ್ರರು ಬೇರ್ಪಡಿಸಲ್ಪಟ್ಟಿದ್ದರು. ಮುಖ್ಯವಾಗಿ ಪೋಲೆಂಡ್ ಮತ್ತು ಜರ್ಮನಿಯ ಪೂರ್ವ ಭಾಗ ಹಿಂದೆ ಒಂದೇ ದೇಶವಾಗಿದ್ದವು. ಹಲವು ದಶಕಗಳ ನಂತರ ಮೊದಲ ಬಾರಿಗೆ ವೀಸಾ ಇಲ್ಲದೆ ಪ್ರಯಾಣ ಮಾಡುವುದು ಸಾಧ್ಯವಾಯಿತು. ಜರ್ಮನಿ, ಪೋಲೆಂಡ್ ಮತ್ತು ಚೆಕ್ ದೇಶದ ಪ್ರಧಾನಿಗಳು 'ಗಡಿ ತೆರೆಯುವ' ಸಮಾರಂಭಗಳಲ್ಲಿ ಭಾಗವಹಿಸಿದ್ದರು.


ಜನತೆಯ ಮುಕ್ತ ಸಂಚಾರಕ್ಕೆ ಇದ್ದ ಅಡೆತಡೆಗಳು ಹೋಗಿರುವುದು ಸ್ವಾಗತಾರ್ಹವೇ. ಆದರೆ ಇದು ಆಗುತ್ತಿರುವುದು ಯುರೋಪಿನ ಗುತ್ತೇದಾರಿ ಬಂಡವಾಳಶಾಹಿ (ಮುಖ್ಯವಾಗಿ ಪಶ್ಚಿಮ ಯುರೋಪಿನ ಶ್ರೀಮಂತ ದೇಶಗಳಲ್ಲಿ ಪ್ರಧಾನವಾಗಿರುವ) ವರ್ಗದ ಹಿತಾಸಕ್ತಿ ಎತ್ತಿ ಹಿಡಿಯಲು. ಅಮೆರಿಕನ್ ಮತ್ತು ಇತರ ಜಾಗತಿಕವಾಗಿ ಪ್ರಬಲವಾದ ಗುತ್ತೇದಾರಿ ಬಂಡವಾಳಶಾಹಿಗಳ ಜತೆ ಪೈಪೋಟಿಗೆ ನಿಲ್ಲಲು ಮತ್ತು ತನ್ನನ್ನು ರಕ್ಷಿಸಲು ತನ್ನದೇ ಆದ ದೊಡ್ಡ ಮಾರುಕಟ್ಟೆಯ ಅಗತ್ಯವಿದೆ. ಪಶ್ಚಿಮ ಮತ್ತು ಪೂರ್ವ ಯುರೋಪಿನ ಬಡ ದೇಶಗಳ ಮಾರುಕಟ್ಟೆಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು 'ಗಡಿ ತೆರೆಯುವುದರಿಂದ' ಸುಲಭವಾಗುತ್ತದೆ. ಅಲ್ಲದೆ ಬಡ ದೇಶಗಳಿಂದ ವಲಸೆ ಹೆಚ್ಚಾದಂತೆ ಪಶ್ಚಿಮ ಯುರೋಪಿನ ಸಂಘಟಿತ ಕಾರ್ಮಿಕರ (ಹಲವು ದಶಕಗಳ ಹೋರಾಟದಿಂದ ಪಡೆದ) ಸವಲತ್ತುಗಳನ್ನು ಕಡಿತಗೊಳಿಸುವುದು ಮತ್ತು ಕಿತ್ತುಕೊಳ್ಳುವುದು ಸುಲಭವಾಗುತ್ತದೆ. ಇದರಿಂದಾಗಿಯೇ ಈಗಾಗಲೇ ಪಶ್ಚಿಮ ದೇಶದ ಶ್ರೀಮಂತ ದೇಶಗಳಲ್ಲಿ (ಫ್ರಾನ್ಸ್, ಜರ್ಮನಿ ಇತ್ಯಾದಿ) ಈ 'ಗಡಿ ತೆರೆಯುವು'ದರ ಬಗ್ಗೆ ಆತಂಕ, ಭೀತಿ ಆವರಿಸಿದೆ. ವಿದೇಶಿಯರ ವಲಸೆಯನ್ನು ಹಿಂಸಾತ್ಮಕವಾಗಿ ವಿರೋಧಿಸುವ ಅರೆ-ಫ್ಯಾಸಿಸ್ಟ್ ಪಕ್ಷಗಳು-ಶಕ್ತಿಗಳು ಜನಬೆಂಬಲ ಗಳಿಸುತ್ತಿವೆ. ಬೇರೆ ಬೇರೆ ದೇಶಗಳ ಕಾರ್ಮಿಕರ ನಡುವೆ ವೈರುಧ್ಯ ತಂದಿಡುವ ಯಾವ ಅವಕಾಶವನ್ನು ಬಂಡವಾಳಶಾಹಿಗಳು ಬಿಟ್ಟು ಕೊಡುವುದಿಲ್ಲ.

ನೇಪಾಳ ರಿಪಬ್ಲಿಕ್, ಮಾವೋವಾದಿಗಳು ವಾಪಸು ಸರ್ಕಾರಕ್ಕೆ

ನೇಪಾಳದಲ್ಲಿ ಪ್ರಜಾಸತ್ತೆಗೆ ಮತ್ತೆ ಬಂದಿದ್ದ ಕುತ್ತು ಪುನಃ ಪರಿಹಾರವಾದಂತಾಗಿದೆ. ರಾಜಸತ್ತೆಯನ್ನು ತಕ್ಷಣ ಕೊನೆಗೊಳಿಸುವುದು ಮತ್ತು ಚುನಾವಣೆ ಪದ್ಧತಿ ಬಗ್ಗೆ ಭಿನ್ನಾಭಿಪ್ರಾಯದಿಂದಾಗಿ ಸರ್ಕಾರದಿಂದ ಹೊರ ನಡೆದಿದ್ದ


ಇತಿಹಾಸದ ಕಸದಬುಟ್ಟಿಯತ್ತ ನೇಪಾಳದ ದೊರೆ

ಮಾವೋವಾದಿಗಳು ಪುನಃ ರಾಜಕೀಯದ ಮುಖ್ಯಧಾರೆಗೆ ಮರಳಿದ್ದಾರೆ. ನೇಪಾಳ ಕಮ್ಯುನಿಸ್ಟ್ ಪಕ್ಷದ ನಾಯಕರ ಸಂಧಾನ ದಿಂದ ಸಾಧ್ಯವಾದ ಒಪ್ಪಂದದಂತೆ, ನೇಪಾಳದ ಪ್ರಧಾನಿ ಕೊಯಿರಾಲಾ ಸಂವಿಧಾನ ತಿದ್ದುಪಡಿಯೊಂದನ್ನು ಮಂಡಿಸಿದರು. ಇದರ ಪ್ರಕಾರ ನೇಪಾಳ ಒಂದು 'ಫೆಡೆರಲ್ ಪ್ರಜಾಸತ್ತಾತ್ಮಕ ರಿಪಬ್ಲಿಕ್' ಎಂದು ಘೋಷಿಸಲಾಗುವುದು. ರಿಪಬ್ಲಿಕ್ ನ್ನು ಹೊಸದಾಗಿ ಚುನಾಯಿತವಾದ ಸಂವೈಧಾನಿಕ ಸಭೆ ಮೊದಲ ಸಭೆಯಲ್ಲಿ ಘೋಷಿಸಬಹುದು. ಈಗ ಎಪ್ರಿಲ್ ಗೆ ನಿಗದಿತವಾಗಿರುವ ಸಂವೈಧಾನಿಕ ಸಭೆಯ ಚುನಾವಣೆಯನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನವನ್ನು ರಾಜ ಮಾಡಿದರೆ, ಮೂರನೇ ಎರಡು ಭಾಗದ


ಮಾವೋವಾದಿ ಮುಖಂಡ ಪ್ರಚಂಡ

ಪಾರ್ಲಿಮೆಂಟು ಬಹುಮತದಿಂದ ರಾಜಸತ್ತೆಯನ್ನು ತಕ್ಷಣವೇ ಬರ್ಖಾಸ್ತು ಮಾಡುವ ಅವಕಾಶವಿದೆ. ಈ ತಿದ್ದುಪಡಿ ನಂತರ ರಾಜನಿಗೆ ಸಂವಿಧಾನದತ್ತವಾದ ಯಾವುದೇ ಅಧಿಕಾರ ಇರುವುದಿಲ್ಲ. ಪಾರ್ಲಿಮೆಂಟಿನ 600 ಸೀಟುಗಳಲ್ಲಿ ಶೇ.70 ನ್ನು 'ಅನುಪಾತ ಪದ್ಧತಿ' ಯಲ್ಲಿ ಪಕ್ಷಗಳ ಅಭ್ಯರ್ಥಿ ಪಟ್ಟಿಯ ಆಧಾರದ ಮೇಲೆ ಮತ್ತು ಉಳಿದ ಸೀಟನ್ನು ನೇರ ಚುನಾವಣೆಯಲ್ಲಿ ಆಯ್ಕೆ ಮಾಡುವ ಬಗೆಗೂ ಸಂವಿಧಾನ ತಿದ್ದುಪಡಿ ಮಂಡಿಸಲಾಯಿತು.

ಅಮೆರಿಕನ್ ರಾಡಾರ್ ವಿರುದ್ಧ ಚೆಕ್ ಯುವ ಕಮ್ಯುನಿಸ್ಟರಿಂದ ಒಂದೂವರೆ ಲಕ್ಷ ಸಹಿ ಸಂಗ್ರಹ


ಅಮೆರಿಕ ಚೆಕ್ ರಿಪಬ್ಲಿಕ್ ಮತ್ತು ಪೋಲೆಂಡ್ ಗಳಲ್ಲಿ ಕ್ಷಿಪಣಿ-ವಿರೋಧಿ ರಕ್ಷಣಾ ವ್ಯವಸ್ಥೆ ಸ್ಥಾಪಿಸಲು ಬಯಸುತ್ತದೆ. ಇದು ರಶ್ಯಾ ಮತ್ತು ಇತರ ಮಾಜಿ-ಸೋವಿಯೆಟ್ ದೇಶಗಳ ಮೇಲೆ ಬೆದರಿಕೆ ಹಾಕಿ ಆಕ್ರಾಮಕ ಕ್ಷಮತೆ ಕೊಡುವ ಉದ್ದೇಶದ ವ್ಯವಸ್ಥೆ. ಆದರೆ ಈ ಎರಡು ದೇಶಗಳ ಜನತೆ ಮತ್ತು ಸರ್ಕಾರಗಳನ್ನು ಮರುಳು ಮಾಡಲು, ಇದು ಇರಾನ್ ನಂತಹ 'ದುಷ್ಟ ದೇಶ'ಗಳ ಕ್ಷಿಪಣಿ ದಾಳಿಯಿಂದ ಯುರೋಪನ್ನು ರಕ್ಷಿಸಲು ಎಂದು ಹೇಳುತ್ತದೆ. ಈ ವ್ಯವಸ್ಥೆಯ ಭಾಗವಾದ ರಾಡಾರ್ ಚೆಕ್ ದೇಶದಲ್ಲಿ ಇರುತ್ತದೆ. ರಶ್ಯಾ ಈ ವ್ಯವಸ್ಥೆಯನ್ನು ವಿರೋಧಿಸಿದೆ. ಈ ವ್ಯವಸ್ಥೆಗೆ ಅವಕಾಶ ಮಾಡಿ ಕೊಡದಿದ್ದರೆ ನಾಟೋ, ಯುರೋಪಿಯನ್ ಕೂಟ, ವಿದೇಶಿ ನೆರವು ಇತ್ಯಾದಿ ಸಿಗುವುದಿಲ್ಲ ಎಂದು ಈ ದೇಶಗಳ ಸರ್ಕಾರಗಳನ್ನು ಬೆದರಿಸಿ ಒಪ್ಪಿಸಲಾಗಿದೆ. ಚೆಕ್ ಮತ್ತು ಪೋಲೆಂಡ್ ಜನತೆ ಸಹ ಈ ವ್ಯವಸ್ಥೆಗೆ ವಿರೋಧವಾಗಿದ್ದಾರೆ.

ಚೆಕ್ ದೇಶದಲ್ಲಿ ಮಾಡಿದ ಒಂದು ಸಮೀಕ್ಷೆ ಪ್ರಕಾರ ಶೇ. 70 ಜನ ಇದನ್ನು ವಿರೋಧಿಸಿದರು. ಕೇವಲ ಶೇ.23 ಜನ ಮಾತ್ರ ಅದನ್ನು ಬೆಂಬಲಿಸಿದ್ದಾರೆ. ಯುವ ಕಮ್ಯುನಿಸ್ಟ್ ಲೀಗ್ ನಾಯಕತ್ವದಲ್ಲಿ ಹಲವು ಯುವ ಸಂಘಟನೆಗಳು ಇದರ ವಿರುದ್ಧ ಪ್ರತಿಭಟಿಸುತ್ತಾ ಬಂದಿವೆ. ವಿರೋಧ ಪಕ್ಷಗಳು ಈ ಬಗ್ಗೆ ರಾಷ್ಟ್ರೀಯ ಜನ ಮತಸಂಗ್ರಹ ನಡೆಸಬೇಕೆಂದು ಆಗ್ರಹಿಸಿವೆ. ಈ ಬೇಡಿಕೆಯ ಪರವಾಗಿ ಯುವ ಕಮ್ಯುನಿಸ್ಟ್ ಲೀಗ್ ಒಂದುವರೆ ಲಕ್ಷ ಸಹಿ ಸಂಗ್ರಹ ಮಾಡಿದ್ದು ಅದನ್ನು ಪಾರ್ಲಿಮೆಂಟಿಗೆ ಕೊಡಲಿದೆ.


ಅಮೆರಿಕ ಮತ್ತು ಚೆಕ್ ಸರ್ಕಾರಗಳು ಇಷ್ಟು ವಿರೋಧ ಇದ್ದಾಗ್ಯೂ ರಾಡಾರ್ ಸ್ಥಾಪನೆಯ ಯೋಜನೆ ಮುಂದುವರೆಸಿವೆ. ಇದರ ವಿರೋಧಿಗಳೂ ಯೋಜನೆಯ ನಿವೇಶನಗಳಲ್ಲಿ ಹೋರಾಟ ಮಾಡಲು ಯೋಜಿಸಿವೆ.

ಅಮೆರಿಕ ಅಧ್ಯಕ್ಷೀಯ ಚುನಾವಣೆ - ಬದಲಾವಣೆಯ ಗಾಳಿ ?

ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಬಿಸಿ ಆರಂಭವಾಗಿದೆ. ಎರಡು ಪ್ರಮುಖ ಪಕ್ಷಗಳು ಅವುಗಳ ಆಂತರಿಕ ಪ್ರಾಥಮಿಕ ಚುನಾವಣೆಗಳ ಮೂಲಕ ತಮ್ಮ ಅಭ್ಯರ್ಥಿ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಗಳು ಗಮನ ಸೆಳೆದಿದ್ದಾರೆ. ಎರಡು ರಾಜ್ಯಗಳ ಪ್ರಾಥಮಿಕ ಚುನಾವಣೆಗಳು ಮುಗಿದಿದ್ದು, ಅದರಲ್ಲಿ ಗೆದ್ದ ಎರಡು ಅಭ್ಯರ್ಥಿಗಳಲ್ಲಿ ಯಾರಾಗಲಿ ಅಧ್ಯಕ್ಷೀಯ ಅಭ್ಯರ್ಥಿಯಾದರೂ ಅಮೆರಿಕದ ಮಟ್ಟಿಗೆ ಇದು ಭಾರೀ ಬದಲಾವಣೆ. ಅಮೆರಿಕದಲ್ಲಿ ಬಿಳಿಯೇತರರು (ಕರಿಯರು ಅಥವಾ ಲ್ಯಾಟಿನೋಗಳು) ಅಥವಾ ಮಹಿಳೆಯರು ಪ್ರಮುಖ ರಾಜಕೀಯ ಪಕ್ಷಗಳ ಅಧಿಕೃತ ಅಭ್ಯರ್ಥಿಯಾದದ್ದು ಇಲ್ಲ. ಅಧ್ಯಕ್ಷರಾಗುವ ಪ್ರಶ್ನೆಯೇ ಬರಲಿಲ್ಲ. ಮೊದಲ ಎರಡೂ ಸ್ಥಾನದಲ್ಲಿರುವ ಅಭ್ಯರ್ಥಿಗಳಲ್ಲಿ ಒಬ್ಬ ಕರಿಯ - ಒಬಾಮಾ, ಇನ್ನೊಬ್ಬಾಕೆ ಮಹಿಳೆ - ಹಿಲೆರಿ ಕ್ಲಿಂಟನ್.




ಒಬಾಮಾ ಇರಾಕ್ ಯುದ್ಧವನ್ನು ಮೊದಲಿಂದಲೂ ವಿರೋಧಿಸುತ್ತಾ ಬಂದು ನೀತಿಗಳಲ್ಲೂ ಬದಲಾವಣೆಯ ಭರವಸೆ ಕೊಟ್ಟಿದ್ದಾರೆ. ಅಧ್ಯಕ್ಷರಾದರೆ ಇರಾಕ್ ನಿಂದ ಅಮೆರಿಕನ್ ಸೈನ್ಯ ವಾಪಸು ಕರೆಸುವ ಮಾತನಾಡಿದ್ದಾರೆ. ಹಿಲೆರಿ ನೀತಿಗಳಲ್ಲಿ ಬದಲಾವಣೆಯ ಭರವಸೆ ಕೊಟ್ಟಿಲ್ಲ. ಇರಾಕ್ ನೀತಿಯನ್ನೂ ಮುಂದುವರೆಸುವುದಾಗಿ ಹೇಳಿದ್ದಾರೆ. ಆದರೆ ಮೊದಲ ಮಹಿಳಾ ಅಭ್ಯರ್ಥಿಯನ್ನು ಅಧ್ಯಕ್ಷೆಯಾಗಿ ಆರಿಸುವ ಅವಕಾಶದಿಂದ ಮಹಿಳೆಯರೂ ಪುಳಕಿತರಾಗಿದ್ದಾರೆ. ಯಾರೇ ಅಧ್ಯಕ್ಷರಾಗಲಿ, ಅವರು ಯಾವುದೇ ನೀತಿಗಳು, ಭರವಸೆಗಳ ಆಧಾರದ ಮೇಲೆ ಗೆದ್ದಿರಲಿ, ಅವರನ್ನು ತಮ್ಮ ಮೂಗಿನ ನೇರಕ್ಕೆ ಮಣಿಸುವ ಶಕ್ತಿ ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣ ಮತ್ತು ಆಳುವ ವರ್ಗಗಳಿಗೆ ಇದೆ. ಆದರೂ ಕರಿಯ ಅಥವಾ ಮಹಿಳೆ ಅಧ್ಯಕ್ಷರಾಗಿ ಚುನಾಯಿತರಾಗುವ ಸಾಧ್ಯತೆಯೇ ಸಕಾರಾತ್ಮಕ ಬೆಳವಣಿಗೆ.



ನ್ಯಾನೋ ತಂತ್ರಜ್ಞಾನ ಮತ್ತು ದ್ವಂದ್ವಮಾನ ಭೌತಿಕವಾದ


ಬೆಂಗಳೂರಿನಲ್ಲಿ ಇತ್ತೀಚೆಗಷ್ಟೆ ನ್ಯಾನೋ ಮೇಳ ನಡೆದಿದೆ. ಐಟಿ, ಬಿಟಿ ತಂತ್ರಜ್ಞಾನಗಳಿಗೆ ದೇಶದ ಕೇಂದ್ರವಾಗಿರುವಂತೆ ನ್ಯಾನೋ ತಂತ್ರಜ್ಞಾನದ ಬೆಳವಣಿಗೆಗೂ ಬೆಂಗಳೂರು ಪೂರಕವಾಗುವುದರಿಂದ, ನ್ಯಾನೋ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಬೆಂಗಳೂರಿನಲ್ಲಿಯೇ ಸ್ಥಾಪಿಸಲಾಗಿದೆ. ನ್ಯಾನೋ ತಂತ್ರಜ್ಞಾನವೇನೂ ಒಂದು ಹೊಸ ಆವಿಷ್ಕಾರವಲ್ಲ. ಪ್ರಸ್ತುತದಲ್ಲಿ ಬಳಕೆಯಲ್ಲಿರುವ ತಂತ್ರಜ್ಞಾನವನ್ನು ನ್ಯಾನೋ ಮಟ್ಟಕ್ಕೆ ವಿಸ್ತರಿಸಲಾಗುತ್ತಿದೆ. ಹಾಗೂ ಪ್ರಸ್ತುತ ವಿಜ್ಞಾನದ ವಿಸ್ತರಣೆಯನ್ನು ಒಂದು ಹೊಸ ಆಧುನಿಕ ಹೆಸರಿನಿಂದ ಕರೆಯಲಾಗುತ್ತಿದೆ.



ನ್ಯಾನೋ ಎಂದರೇನು?


1980ರ ದಶಕದಲ್ಲಿ ಡಾ. ಕೆ.ಎರಿಕ್ ಡ್ರೆಕ್ಸ್ಲರ್ ಎಂಬ ವಿಜ್ಞಾನಿಯು ನ್ಯಾನೋ ತಂತ್ರಜ್ಞಾನದ ವ್ಯಾಪಕ ಉಪಯುಕ್ತತೆಗಳ ಕುರಿತು ಮತ್ತು ತಂತ್ರಜ್ಞಾನದ ಕುರಿತು ಹೆಚ್ಚಿನ ಶೋಧನೆ ನಡೆಸಿದರು.

ನ್ಯಾನೋ ಎಂದರೆ ಒಂದು ಮೀಟರ್ ಉದ್ದದ ದಾರವನ್ನು ಒಂದು ನೂರು ಕೋಟಿ ಭಾಗವಾಗಿಸಿದರೆ, ಅದರ ಒಂದು ಭಾಗವೇ ನ್ಯಾನೋ (1 ನ್ಯಾನೋ ಮೀಟರ್ = 10-9 ಮೀಟರ್). ಜೀವಕೋಶದ ಡಿ.ಎನ್.ಎ ಯಲ್ಲಿರುವ 'ಡಬಲ್ ಹೆಲಿಕ್ಸ್' ಎಂದು ಕರೆಯಲಾಗುವ ಆಕೃತಿಯು 2 ನ್ಯಾನೋ ಮೀಟರ್‌ನಷ್ಟು ಗಾತ್ರವಿದೆ. (ಪ್ರತಿಯೊಂದು ಜೀವಿಯ ಜೀವಕೋಶದಲ್ಲೂ ಡಿ ಆಕ್ಸಿ ರೈಬೋಸ್ ನ್ಯೂಕ್ಲಿಯಿಕ್ ಆಸಿಡ್ ಅಥವಾ ಡಿ.ಎನ್.ಎ ಇದ್ದು, ಜೀವಿಯ ಬೆಳವಣಿಗೆ ಮತ್ತು ಕಾರ್ಯನಿರ್ವಹಣೆಗೆ ಅವಶ್ಯವಿರುವ ವಂಶವಾಹಿನಿ ಗುಣಗಳನ್ನು ಇದು ಹೊಂದಿರುತ್ತದೆ). ಜೀವಿಯೊಂದರ ಜೀವಕೋಶ, ಬ್ಯಾಕ್ಟೀರಿಯಾದ ಮೈಕ್ರೋಪ್ಲಾಸ್ಮಾ ಎಂಬ ಭಾಗಗಳು ಸುಮಾರು 200 ನ್ಯಾನೋ ಮೀಟರ್ ಗಾತ್ರ ಇವೆ. ಒಂದು ನ್ಯಾನೋ ಮೀಟರ್‌ನ್ನು ಒಂದು ಮೀಟರ್‌ನೊಂದಿಗೆ ಹೋಲಿಕೆ ಮಾಡಿ ಹೇಳುವುದಾದಲ್ಲಿ, ಒಂದು ಮಾರ್ಬಲ್(ನ್ಯಾನೋ ಎಂದು ಕೊಳ್ಳಿ)ನ್ನು ಇಡೀ ಭೂಮಿ (ಒಂದು ಮೀಟರ್ ಎಂದುಕೊಳ್ಳಿ)ಗೆ ಹೋಲಿಸಿದಂತೆ.



ವಸ್ತುವಿನ ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಬದಲಾವಣೆ:

ವಸ್ತುವಿನ ಅಥವಾ ಪ್ರಕ್ರಿಯೆ ಪರಿಮಾಣಾತ್ಮಕ ಬದಲಾವಣೆಯು ಅದರಲ್ಲಿ ಗುಣಾತ್ಮಕ ಬದಲಾವಣೆಯನ್ನು ಉಂಟು ಮಾಡುತ್ತದೆ. ಇದು ದ್ವಂದ್ವಮಾನ ಭೌತಿಕವಾದದ ನಿಯಮಗಳಲ್ಲೊಂದು. ನ್ಯಾನೋ ತಂತ್ರಜ್ಞಾನದ ಪ್ರಕ್ರಿಯೆಯನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಒಂದು ವಸ್ತುವಿನ ಗಾತ್ರವನ್ನು ಕಡಿತ ಮಾಡುತ್ತಾ ಹೋದಂತೆ ಆ ವಸ್ತುವಿನ ಗುಣ ಲಕ್ಷಣಗಳು ಸಹ ಬದಲಾಗುತ್ತಾ ಹೋಗುತ್ತವೆ. ಉದಾಹರಣೆಗೆ ಘನರೂಪದಲ್ಲಿರುವ ಚಿನ್ನವನ್ನು ಸಹಜ ಗಾತ್ರದಿಂದ ಮೊದಲಿಗೆ ಮೈಕ್ರೋ ಗಾತ್ರಕ್ಕೆ (ಅಂದರೆ 10 ಲಕ್ಷದ ಒಂದು ಭಾಗ) ಇಳಿಸಿದರೆ, ಅದರ ಗುಣಲಕ್ಷಣಗಳು ಬದಲಾಗುವುದಿಲ್ಲ. ಆದರೆ, ಅದನ್ನು ಮತ್ತೂ ಸಣ್ಣ ಗಾತ್ರವಾದ ನ್ಯಾನೋ ಮಟ್ಟಕ್ಕೆ (ಅಂದರೆ 100 ಕೋಟಿಯ ಒಂದು ಭಾಗ) ಇಳಿಸಿದರೆ, ಆ ವಸ್ತುವಿನ ಹಲವಾರು ಭೌತಿಕ ಗುಣಲಕ್ಷಣಗಳು ಬದಲಾಗುತ್ತವೆ. ಘನ ರೂಪದ ಚಿನ್ನವು ದ್ರವರೂಪಕ್ಕೆ ಬರುತ್ತದೆ.




ಹೀಗೆ, ವಸ್ತುವೊಂದರ ಗುಣಲಕ್ಷಣಗಳು ನ್ಯಾನೋ ಗಾತ್ರದಲ್ಲಿ ಬದಲಾಗಿ ಹತ್ತಲವು ಆಕರ್ಷಕ ಗುಣಲಕ್ಷಣಗಳುಳ್ಳ ವಸ್ತುಗಾಗಿ ರೂಪುಗೊಂಡು ಅದರ ಸಹಜ ಗಾತ್ರಕ್ಕೆ ಭಿನ್ನವಾಗಿ ಕಂಡು ಬರುತ್ತವೆ. ಅಲ್ಯೂಮಿನಿಯಂನ್ನು ನ್ಯಾನೋ ಮಟ್ಟಕ್ಕೆ ಇಳಿಸಿದಲ್ಲಿ ಅದು ಹತ್ತಿ ಉರಿಯಲಾರಂಭಿಸುತ್ತದೆ. ಅದರ ಸಹಜ ಗಾತ್ರದಲ್ಲಿ ವಿದ್ಯುತ್ ವಾಹಕವಲ್ಲದ ಸಿಲಿಕಾನ್ ವಿದ್ಯುತ್ ವಾಹಕವಾಗಿ ರೂಪಾಂತರಗೊಳ್ಳುತ್ತದೆ.

ನ್ಯಾನೋ ತಂತ್ರಜ್ಞಾನ

ನ್ಯಾನೋ ಗಾತ್ರದ ಮಟ್ಟದಲ್ಲಿರುವ ಪರಮಾಣುಗಳನ್ನು ಬಳಸಿಕೊಂಡು ತಯಾರಿಸುವ ಉತ್ಪನ್ನಗಳನ್ನು ನ್ಯಾನೋ ತಂತ್ರಜ್ಞಾನ-ಆಧಾರಿತ ಉತ್ಪನ್ನಗಳೆಂದು ಕರೆಯುತ್ತಾರೆ.

ಇಂದಿನ ನ್ಯಾನೋ ಬಳಕೆ

ನ್ಯಾನೋ ತಂತ್ರಜ್ಞಾನದ ಅಭಿವೃದ್ಧಿಯಿಂದ ಅಗಾಧ ಮಟ್ಟದ ಉಪಯುಕ್ತತೆಗಳನ್ನು ಪಡೆಯಬಹುದು. ಮನುಷ್ಯನಿಗೆ ಅಗತ್ಯವಿರುವ ಔಷಧಿಗಳನ್ನು ಅಣುಗಳ ಸೂಕ್ತ ಜೋಡಣೆಯಿಂದ ಆವಿಷ್ಕರಿಸಬಹುದು. ಹಲವಾರು ಆಹಾರೋತ್ಪನ್ನಗಳನ್ನು ಶೋಧಿಸಬಹುದು. ಹಾಗೆಯೇ ವೈದ್ಯಕೀಯ ಕ್ಷೇತ್ರ, ಔಷಧಿ ಉದ್ದಿಮೆಗಳು, ಆಹಾರ ಸಂಸ್ಕರಣೆ ಘಟಕಗಳು, ರೋಬೋಟಿಕ್ಸ್, ರಾಸಾಯನ ಶಾಸ್ತ್ರ, ಯಂತ್ರಶಾಸ್ತ್ರ, ಇತ್ಯಾದಿ ಕ್ಷೇತ್ರಗಳಲ್ಲಿ ಗಣನೀಯ ಬದಲಾವಣೆಗಳನ್ನು ಕಾಣಬಹುದು. ಆದರೆ, ಇಂದು ಅಭಿವೃದ್ಧಿಯಾಗಿರುವ ನ್ಯಾನೋ ತಂತ್ರಜ್ಞಾನವು ಕೇವಲ 'ಮೊದಲ ಪೀಳಿಗೆಯ' ಹಂತದಲ್ಲಿದ್ದು,



ಮಾರುಕಟ್ಟೆಯಲ್ಲಿರುವ ನ್ಯಾನೋ ಉತ್ಪನ್ನಗಳನ್ನು ಈಗಾಗಲೇ ಪ್ರಚಲಿತದಲ್ಲಿರುವ ತಂತ್ರಜ್ಞಾನವನ್ನು ನ್ಯಾನೋ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆಯಷ್ಟೆ.

ನ್ಯಾನೋ ತಂತ್ರಜ್ಞಾನದಿಂದ ಉಪಯುಕ್ತ ವಸ್ತುಗಳನ್ನು ಪಡೆಯುವ ಸಂದರ್ಭದಲ್ಲಿ ಕೆಲವು ಅಪಾಯಕಾರಿ ವಸ್ತುಗಳಾಗಿಯೂ ರೂಪುಗೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಈ ತಂತ್ರಜ್ಞಾನ ಅಭಿವೃದ್ಧಿಯನ್ನು ಹೆಚ್ಚಿನ ಸುರಕ್ಷತೆಗಳು ಮತ್ತು ಮುಂದಾಲೋಚನೆಯಿಂದ ನಡೆಸಲಾಗುತ್ತಿದೆ.



ಬಂಡವಾಳಿಗರಿಗೆ ಬೆಳವಣಿಗೆ - ದುಡಿವ ಜನತೆಗೆ ಬಡತನ

"ಕೋಟಿ ವಿದ್ಯೆಗಳಲ್ಲಿ
ಮೇಟಿ ವಿದ್ಯೆಯೇ ಮೇಲು
ಮೇಟಿಯಿಂದ ರಾಟೆ ನಡೆದುದಲ್ಲದೆ ದೇಶ
ದಾಟವೇ ಕೆಡುಗು ಸರ್ವಜ್ಞ"

ಸರ್ವಜ್ಞನ ಈ ಮಾತು ಇಂದಿಗೂ ನಿಜ. ದೇಶದ ಕೃಷಿ ವಲಯ ಅಭಿವೃದ್ಧಿ ಕಾಣದೆ ಉಳಿದೆಡೆ ಅಭಿವೃದ್ಧಿಯಾದರೆ ಅದರಿಂದ ಒಟ್ಟಾರೆ ಅಭಿವೃದ್ಧಿಯಾದಂತಲ್ಲ.

ಬಂಡವಾಳಶಾಹಿಯ ವಿಚಿತ್ರಗುಣ ನೋಡಿ. ಈ ವ್ಯವಸ್ಥೆಯಡಿ ಆರ್ಥಿಕ ಬೆಳವಣಿಗೆಯಾದರೆ ಅದರಿಂದ ಅಭಿವೃದ್ಧಿಯಾಗುತ್ತದೆ ಎಂದಲ್ಲ. ಬೆಳವಣಿಗೆ ಮತ್ತು ಅಭಿವೃದ್ಧಿ ಎರಡು ಬೇರೆ ಬೇರೆ ಅಂಶಗಳಾಗಿ ನಿಂತುಬಿಡುತ್ತವೆ. ಆದ್ದರಿಂದಲೇ ನಮ್ಮ ಬೂರ್ಜ್ವಾ, ಭೂ ಮಾಲಿಕರ ಸರ್ಕಾರ ದೇಶದ ಆರ್ಥಿಕ ಬೆಳವಣಿಗೆ ಆಗುತ್ತಿದೆ ಎಂದರೆ ಅದರಿಂದ ಅಭಿವೃದ್ಧಿ ಆಗುತ್ತಿದೆ ಎಂದು ಅರ್ಥವಲ್ಲ. ಈ ವ್ಯವಸ್ಥೆಯಡಿ ಬೆಳವಣಿಗೆ ಮತ್ತು ಬಡತನ ಒಟ್ಟೊಟ್ಟಿಗೆ ಇರುತ್ತವೆ ಎಂಬುದನ್ನು ನಾವು ಗಮನಿಸಬಹುದು. ಇದನ್ನೇ ಮುಂದುವರೆಸಿ ಹೇಳಬಹುದಾದರೆ 'ಬಂಡವಾಳಿಗರಿಗೆ ಬೆಳವಣಿಗೆ, ದುಡಿವ ಜನರಿಗೆ ಬಡತನ' ಎಂದು ಹೇಳಬಹುದು.

ಕೇಂದ್ರ ಹಣಕಾಸು ಮಂತ್ರಿಗಳಾದ ಪಿ.ಚಿದಂಬರಂ ಅವರು ಒಸ್ಲೊದಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳಿದ್ದು ಸರಾಸರಿ ವಾರ್ಷಿಕ ಆರ್ಥಿಕ ಬೆಳವಣಿಗೆ ಸ್ವಾತಂತ್ರ್ಯ ನಂತರದ ಮೂವತ್ತು ವರ್ಷಗಳಲ್ಲಿ 3.51 ರಷ್ಟಿತ್ತು. ತೊಂಬತ್ತರ ದಶಕದಲ್ಲಿ ಶೇ.57ಕ್ಕೆ ಏರಿತು. 2003-04 ರ ನಂತರ ಶೇ.8.6ಕ್ಕೆ ಏರಿದೆ. ಈ ಅವಧಿಯಲ್ಲಿ ಉದ್ಯೋಗ ಹೆಚ್ಚಳ ಮಾತ್ರ ಶೇ2.9 ರಷ್ಟು ಮಾತ್ರ. ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ (1977-78ರಲ್ಲಿ) ಶೇ. 51.3 ರಷ್ಟಿದ್ದದ್ದು 2004-05ರಲ್ಲಿ ಶೇ.22ಕ್ಕೆ ಇಳಿದಿದೆ. ಆದರೆ ಒಟ್ಟು ಬಡವರ ಸಂಖ್ಯೆ 25 ಕೋಟಿಗೂ ಮಿಗಿಲು'

ಇನ್ನೊಂದು ಅಂಕಿ ಸಂಖ್ಯೆಯನ್ನು ನೋಡಿ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಒಂದು ಸಮಿತಿಯ ವರದಿಯ ಪ್ರಕಾರ ಶೇಕಡಾವಾರು ಬಡತನ ಕಡಿಮೆಯಾದರೂ (ಇದು ಬಡತನ ರೇಖೆಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ ಮತ್ತು ಈ ರೇಖೆಗೆ ಬಹಳ ಬಡತನವಿದೆ!?) ಆದಾಯ ಬಡತನ ಮೂರು ದಶಕಗಳ ಅವಧಿಯಲ್ಲಿ ವರ್ಷಕ್ಕೆ ಒಂದು ದಶಲಕ್ಷದಷ್ಟು ಮಾತ್ರ ಕಡಿಮೆಯಾಗುತ್ತಿದೆ. ಇದೇ ವೇಗದಲ್ಲಿ ಬಡತನ ಕಡಿಮೆಯಾಗುತ್ತಿದ್ದರೆ ಭಾರತದಲ್ಲಿ ಬಡತನ ತೊಲಗಿಸಲು ಮುನ್ನೂರು ವರ್ಷಗಳು ಬೇಕು!'

ಬಡತನವನ್ನು ಹೇಗೆ ನಿರ್ಮೂಲನಗೊಳಿಸಬೇಕೆಂಬ ಪ್ರಶ್ನೆಗೆ ಬಂಡವಾಳಶಾಹಿ ನೀತಿ ನಿರೂಪಕರಲ್ಲಿ ಒಮ್ಮತವಿಲ್ಲ. ವಿಶ್ವ ಬ್ಯಾಂಕು ಬಡತನ ನಿರ್ಮೂಲನ ಮಾಡುವಲ್ಲಿ ಕೃಷಿಯ ಮೇಲೆ ಗಮನ ಕೇಂದ್ರೀಕರಿಸಿದರೆ ಮಾತ್ರ ಸಾಧ್ಯ ಎನ್ನುತ್ತದೆ. ಬರೀ ದೊಡ್ಡ ಜಮೀನುದಾರರು ಮಾಡುವ ಕೃಷಿ ಅಭಿವೃದ್ಧಿ ಮಾಡಿದರೆ ಬಡತನ ತೊಲಗಿಸಬಹುದೇ ಎಂದು ಪ್ರಶ್ನಿಸಬೇಕಾಗುತ್ತದೆ. ಯಾಕೆಂದರೆ ಸರ್ಕಾರಗಳು ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಅಭಿವೃದ್ಧಿಯತ್ತ ಗಮನಹರಿಸಿಲ್ಲ.

ದೇಶದ ಕೃಷಿ ವಲಯದಲ್ಲಿ ಹಲವು ಅಡೆತಡೆಗಳಿರುವುದರಿಂದ ಕೃಷಿ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದು ಒಂದು ಅಭಿಪ್ರಾಯ ಇವರು ಹೇಳುವುದು. ಕೃಷಿ ಭೂಮಿಯನ್ನು ಯಾರೂ- ಬೇಕಾದರೂ ಕೊಂಡುಕೊಳ್ಳುವಂತೆ ಮಾಡಿ ಕೃಷಿ ಕ್ಷೇತ್ರದ ರಕ್ಷಣೆಗೆ ಮಾಡಿರುವ ಕಾನೂನುಗಳನ್ನು ತೆಗೆದುಹಾಕಿ ಎಂದು ಈಗಾಗಲೇ ಉದಾರೀಕರಣದ ಹೆಸರಿನಲ್ಲಿ ಇಂತಹ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಆರ್ಥಿಕ ಬೆಳವಣಿಗೆ ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ ಎಂಬುದು ಇನ್ನೊಂದು ಕಠೋರ ಸತ್ಯ. ಇಂದು ಅಂದಾಜಿನ ಪ್ರಕಾರ ಭಾರತದ ದುಡಿವ ಜನರ ಅರ್ಧದಷ್ಟು ಪ್ರಮಾಣದ ಜನ ನೇರ ಮಾಲೀಕರಡಿ ಕೆಲಸ ಮಾಡುವುದಿಲ್ಲ. ಅಂದರೆ ಯಾರೋ ಗುತ್ತಿಗೆದಾರರ ಕೆಳಗೆ ಕೆಲಸ ಮಾಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಕೂಲಿಯ ಬಗ್ಗೆ ಚೌಕಾಸಿ ಮಾಡುವ ಸಾಧ್ಯತೆಯು ಕಡಿಮೆ ಇರುತ್ತದೆ.

ಭಾರತದಲ್ಲಿ ಗುಳೇ ಹೋಗುವ ಕೆಲಸಗಾರರ ಸಂಖ್ಯೆಯೂ ಬಹಳ ದೊಡ್ಡದಾಗಿದೆ. ಸುಮಾರು 10.3 ಕೋಟಿ ಜನ ಕೆಲಸಗಾರರು ಗುಳೇ ಹೋಗುವಂತಹವರು(ಕೆಲಸಕ್ಕಾಗಿ ಹುಡುಕಾಡುತ್ತಾ ಸ್ಥಳದಿಂದ ಸ್ಥಳಕ್ಕೆ ಹೋಗುತ್ತಿರುವವರು)

ಹನ್ನೊಂದನೇ ಪಂಚವಾರ್ಷಿಕ ಯೋಜನೆಗಳ ಅವಧಿ ಆಗಲೇ ಪ್ರಾರಂಭವಾಗಿ ಬಿಟ್ಟಿದೆ. ಭಾರತದ ನಿಜವಾದ ಅಭಿವೃದ್ಧಿಯ ಬಗ್ಗೆ ಇಂತಹ ಭಿನ್ನಮತದ ಅಭಿಪ್ರಾಯಗಳಿವೆ-ಎಂದರೆ ಆಳುವ ವರ್ಗಕ್ಕೆ ಸ್ಪಷ್ಟತೆ ಇಲ್ಲ. ಬಡತನ ತೊಗಲಿಸುವ ಬಗ್ಗೆ ನಿಜವಾದ ಕಾಳಜಿಯಿಲ್ಲ.

ಬೆಳವಣಿಗೆಯ ದರ ದೊಡ್ಡದಾಗಿಯೂ ಇದೆ ಎಂಬ ಬೊಬ್ಬೆ ಮಾತ್ರ ಹಾಕುತ್ತಲೇ ಇದ್ದಾರೆ. ಆದರೆ ಈ ಬೆಳವಣಿಗೆ ದೇಶಕ್ಕೆ ಅಭಿವೃದ್ಧಿ ನೀಡುತ್ತಿಲ್ಲ ಎಂಬುದು ವಾಸ್ತವ.

ನಾಟಕ: 'ಉಷಾಹರಣ' ಯುದ್ಧ ಕರಾಳತೆಯ ಅನಾವರಣ



150 ವರ್ಷಗಳ ಹಿಂದಿನ ಈ ಕೃತಿಯನ್ನು ಈಗ ಮತ್ತೆ ರಂಗ ಪ್ರಯೋಗದತ್ತ ತರುವುದರ ಮೂಲಕ ಆಗಿನ ಕಾಲದ ಕಲೆ, ಸಂಗೀತ, ನಾಟಕದ ಬಗ್ಗೆ ಚಿಂತಿಸುವಂತೆ ಮಾಡಿದ್ದಾರೆ ಯುವ ನಿರ್ದೇಶಕರಾದ ಡಾ: ಶ್ರೀಪಾದ ಭಟ್ಟರು.

2008ರ ಜನವರಿ ತಿಂಗಳು ಬೆಂಗಳೂರು ರಂಗಾಸಕ್ತರಿಗೆ ಸುಗ್ಗಿಯ ಕಾಲ. ಸದಾ ಸಿನಿಮಾಗಳ ಜೊತೆಗೆ 'ಹೈಟೆಕ್' ಸಂಗೀತ, ನೃತ್ಯಗಳಲ್ಲಿ ಮುಳುಗಿದವರಿಗೆ ಸದಭಿರುಚಿಯ ರಂಗಭೂಮಿಯ ಪ್ರಯೋಗಗಳು ಹೊಸತನ್ನು ನೀಡುತ್ತಿವೆ. ಮಾಯಾನಗರಿಯ ಮಧ್ಯೆ ಸಿಲುಕಿದವರನ್ನು ಸೆಳೆಯುತ್ತಿವೆ. ನವದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಯೋಜನೆಯಂತೆ ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಗಳ ಸಂಯುಕ್ತಾಶ್ರಯದಲ್ಲಿ ನಡೆದ 'ರಂಗ ಪ್ರತಿಭಾ -2008' ಎಂಬ ನಾಟಕೋತ್ಸವವು ರವೀಂದ್ರ ಕಲಾಕ್ಷೇತ್ರದಲ್ಲಿ ಜನವರಿ 6-14, 2008ರವರೆಗೆ ಹತ್ತು ದಿನಗಳ ಕಾಲ ನಡೆಯುತ್ತಿದೆ.

1850ರ ಮೊದಲು ರಚಿತವಾದ ಹಾವೇರಿಯ ಶಾಂತಕವಿಗಳ ಮೊದಲ ಕೃತಿ 'ಉಷಾಹರಣ'. ಮರಾಠಿ ನಾಟಕದ ಪ್ರಭಾವ ಗಾಢವಾದ ಕಾಲದಲ್ಲಿ ಅದಕ್ಕೆ ಪ್ರತಿಯಾಗಿ ಬಂದ ಕೃತಿ. 150 ವರ್ಷಗಳ ಹಿಂದಿನ ಈ ಕೃತಿಯನ್ನು ಈಗ ಮತ್ತೆ ರಂಗ ಪ್ರಯೋಗದತ್ತ ತರುವುದರ ಮೂಲಕ ಆಗಿನ ಕಾಲದ ಕಲೆ, ಸಂಗೀತ, ನಾಟಕದ ಬಗ್ಗೆ ಚಿಂತಿಸುವಂತೆ ಮಾಡಿದ್ದಾರೆ ಯುವ



ನಿರ್ದೇಶಕರಾದ ಡಾ: ಶ್ರೀಪಾದ ಭಟ್ಟರು. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಧಾರೇಶ್ವರದವರಾದ ಇವರು ವೃತ್ತಿಯಲ್ಲಿ ಕನ್ನಡ ಶಿಕ್ಷಕರಾಗಿ ಹಾವೇರಿಯ ಕಚವಿ ಗ್ರಾಮದ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಾರೆ. ನಾಟಕವನ್ನು ಶೇಷಗಿರಿ ಕಾಲ ತಂಡ, ಹಾವೇರಿಯವರು ಅಭಿನಯಿಸಿದರು.


'ಉಷಾಹರಣ' ಪುರಾಣದ ಕಥಾವಸ್ತು. ಶಿವಭಕ್ತನಾದ ಬಾಣಸುರ ಮತ್ತು ಆತನ ಮಗಳಾದ ಉಷಾಳ ಸುತ್ತಾ ಹೆಣೆಯಲಾಗಿದೆ. ಬಾಣಸುರನು ಶಿವಪಾರ್ವತಿಯರು 'ಸಾರಂಗಪಟ್ಟ' ಆಟವಾಡುವಾಗ ಬಾಣನು ಶಿವನನ್ನು ಕುರಿತು ತನ್ನ ರಾಜ್ಯದಲ್ಲಿ ಉತ್ಪಾದನೆಯಾದ ಅಗಾಧ ಪ್ರಮಾಣದ 'ಅಸ್ತ್ರಗಳು ಕೆಲಸವಿಲ್ಲದೆ ಬಿದ್ದಿರುವುದರಿಂದ', ಹಾಗೂ ತನ್ನ ಭಾರಿ ಬಾಹುಬಲದಿಂದ ತನಗೆ ಹೊರೆ ಹೆಚ್ಚಾಗಿರುವುದರಿಂದ ಅದಕ್ಕೆ ಸಮರ್ಥನಾದ ಎದುರಾಳಿಯನ್ನು ಯುದ್ಧದಲ್ಲಿ ಎದುರಾಗುವಂತೆ ವರ ಬೇಡುತ್ತಾನೆ. ಶಿವನು ನಿನ್ನ ಸರ್ವನಾಶದ ಜೊತೆಗೆ ಜಗತ್ತಿನ ನಾಶಕ್ಕೆ ಕಾರಣವಾಗುವ ಈ ವರ ನೀಡಲಾಗುವುದಿಲ್ಲವೆಂದರೂ ಪಾರ್ವತಿಯು ಭಕ್ತನ ಬಯಕೆಯನ್ನು ಈಡೇರಿಸುವಂತೆ ಕೋರುತ್ತಾಳೆ. ಆಗ ಶಿವ 'ನಿನ್ನ ರಾಜ್ಯದ ಧ್ವಜ ಎಂದು ಕೆಳಗೆ ಇಳಿಯುತ್ತದೆಯೋ ಅಂದು ನಿಮ್ಮ ಬಯಕೆ ಈಡೇರಲಿ' ಎಂದು ವರ ನೀಡುತ್ತಾನೆ. ಇತ್ತ ಉಷಾಗೆ ಪಾರ್ವತಿಯು ವೈಶಾಖ ಶುದ್ಧ ದ್ವಾದಶಿಯಂದು ಕನಸಿನಲ್ಲಿ ಬರುವ ಸುಂದರನು ನಿನ್ನ ಬಾಳಸಂಗಾತಿಯಾಗುವನೆಂದು ತಿಳಿಸುತ್ತಾಳೆ. ಉಷಾ ತನ್ನ ಸಖಿಯಾದ ಚಂದ್ರಲೇಖಗೆ ಈ ವಿಷಯ ತಿಳಿಸಿ ಆ ಕನಸಿನ ರಾಜಕುಮಾರನನ್ನು ಹುಡುಕಿಸುತ್ತಾಳೆ. ದ್ವಾರಕದ 'ಅನಿರುದ್ಧ'ನೇ ಆ ರಾಜಕುಮಾರ. ಅನಿರುದ್ಧ್‌ನೊಂದಿಗಿನ ಪ್ರೇಮದಿಂದಾಗಿ ಉಷಾ ಮದುವೆಯಾಗದೆ ತಾಯಿಯಾಗಲಿರುವ ಸುದ್ದಿ ರಾಜ್ಯದಲ್ಲೆಲ್ಲ ಸುತ್ತಿ ಕೊನೆಗೆ ಉಷಾಳ ತಂದೆ ಬಾಣಸುರನಿಗೂ ತಿಳಿದು ಕೋಪಿಷ್ಠನಾದ ಬಾಣನು ಯುದ್ಧ ಸಾರಿ ಅನಿರುದ್ಧ್‌ನನ್ನು ಬಂಧಿಸುತ್ತಾನೆ. ಈ ಸುದ್ದಿ ತಿಳಿದ ಶ್ರೀ ಕೃಷ್ಣನು ರಣರಂಗ ಪ್ರವೇಶಿಸಿ ಬಾಣಸುರನ ಬಾಹುಬಲವನ್ನು ಕುಗ್ಗಿಸುತ್ತಾನೆ. ಸೋತು ಶರಣಾದ ಬಾಣಾಸುರನು ಅನಿರುದ್ಧ್‌ನನ್ನು ಬಿಡುಗಡೆಗೊಳಿಸಿ ತನ್ನ ಮಗಳಾದ ಉಷಾಳೊಂದಿಗೆ ವಿವಾಹ ಮಾಡುತ್ತಾನೆ ಇದು ನಾಟಕದ ಕಥಾವಸ್ತು.



ನಾಟಕವೆಂಬುದು ಪ್ರತಿಯೊಂದು ಪ್ರಯೋಗದಲ್ಲಿ ಹೊಸತನ್ನು ಕಟ್ಟುತ್ತದೆ, ಕೊನೆಗೊಳಿಸುತ್ತದೆ, ಹೊಸ ಕಾಲಘಟ್ಟದೊಂದಿಗೆ ಬೆಳೆಸುತ್ತಾ, ಮುಂದೆ ಸಾಗುತ್ತದೆ. ಒಂದು ಪುರಾಣದ ಎಳೆಯ ಸುತ್ತಾ ಹೆಣೆಯಲಾದ ಕಥೆಗೆ ನಿರ್ದೇಶಕ ಯಾವುದೇ ಸಂಪ್ರದಾಯ ಬದ್ಧವಾದ ಉಡುಗೆ ತೊಡಿಗೆಯ ವೈಭವವಿಲ್ಲದೆ ಸರಳವಾಗಿ ರಂಗಭೂಮಿಗೆ ಅಳವಡಿಸಿರುವುದು ಮೆಚ್ಚುವಂತಹದು. ಸೌಮ್ಯ ವರ್ಣದ ವಸ್ತ್ರ ವಿನ್ಯಾಸವು ಮೊಗಲ್ ಆಸ್ಥಾನದ ನೃತ್ಯಗಾರ್ತಿಯರನ್ನು ನೆನಪಿಸುವಂತಿದೆ. ರಂಗ ಸಜ್ಜಿಕೆ ಹಾಗೂ ರಂಗ ಪರಿಕರಗಳನ್ನು ಸಾಂಕೇತಿಕವಾದ ಅಂಶಗಳನ್ನೊಳಗೊಂಡು ಅರ್ಥಪೂರ್ಣವಾಗಿದೆ. ಬೆಳಕಿನ ವ್ಯವಸ್ಥೆಯು ನಟರ ಅಭಿನಯವನ್ನು ಪ್ರೇಕ್ಷಕನಿಗೆ ಪರಿಣಾಮಕಾರಿಯಾಗಿ ತೆರೆದಿಡುವಲ್ಲಿ ಸ್ವಲ್ಪ ಅಸಮರ್ಪಕವಾಗಿತ್ತು ಎನ್ನಬಹುದು. ಹಿನ್ನೆಲೆ ಸಂಗೀತವು ಪೂರಕವಾಗಿದ್ದು, ಹಲವು ದಿನಗಳವರೆಗೆ ಮನಸ್ಸಿನಲ್ಲಿ ಉಳಿಯುತ್ತದೆ. ಪ್ರತಿಪಾತ್ರಗಳ ಅಭಿನಯ, ಹಾವಭಾವಗಳ ಜೊತೆಗೆ ಶಾರೀರಿಕ ಭಾಷೆಯನ್ನು ಕಲಾವಿದರು ಜೀವಂತಗೊಳಿಸಿದ್ದಾರೆ.

ಮರಾಠಿ ಪ್ರಭಾವದ ನಾಟಕಗಳ ವಿರುದ್ಧ ಕನ್ನಡದ ಸ್ವಂತ ಪ್ರಭಾವ ಬೀರಲು ಮೂಡಿಬಂದ ಈ ನಾಟಕವು 'ಯುದ್ಧ' ವೆಂಬುದರಸುತ್ತಾ, ಹೆಣೆಯಲ್ಪಟ್ಟಿದೆ. ಇಷ್ಟು ದೀರ್ಘ ವರ್ಷಗಳ ಹಿಂದೆ ಶಾಂತಕವಿಯು ಚಿತ್ರಿಸಿದಂತೆ ಯುದ್ಧವು ಸರ್ವಕಾಲಕ್ಕೂ ವಿನಾಶಕಾರಿಯಾದದ್ದು. ವರ್ತಮಾನದಲ್ಲಿ ಸಹ ಸಾಮ್ರಾಜ್ಯಶಾಹಿ ಪ್ರೇರಿತ ಯುದ್ಧದಿಂದ ನಡೆಯುತ್ತಲೇ ಇರುವ ಕ್ರೌರ್ಯ, ಹಿಂಸೆಗಳನ್ನು ಗಮನಿಸಿದವರಿಗೆ ಅದು ಅರ್ಥವಾಗುವಂತಹದ್ದು. ಪುರಾಣದ ಕಥಾವಸ್ತುವನ್ನು ಆಧರಿಸಿದ ಕಥೆಯಾದರೂ ನಮ್ಮ ವರ್ತಮಾನ ಕಾಲದ ಯುದ್ಧಗಳ ಕರಾಳತೆಯನ್ನು ನೆನಪಿಸುವಂತಹದು ಈ ನಾಟಕ ಈ ಪ್ರಯೋಗಗಳು ರಂಗಭೂಮಿಯ ಯುವ ನಿರ್ದೇಶಕರ ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಹಾಗೂ ಸಮಾಜಕ್ಕೆ ಸದಭಿರುಚಿಯ ಕಲೆಯನ್ನು, ಉತ್ತಮ ಹೊಸ ಕಲಾವಿದರ ಸಮೂಹವನ್ನು ನೀಡಲಿದೆ ಎಂದು ಆಶಿಸೋಣ.

– ವೀರಣ್ಣ ಕಲ್ಮನಿ
ಬಾಚಿಗೊಂಡನಹಳ್ಳಿ



ಉಳಿಸೀತೆ ಬದುಕು?

ಕೇಳಿಸಬಹುದು ನಿಮಗೆ
ಚರಿತ್ರೆಯ ಪುಟಗಳ ತುಂಬ
ಖರಪುಟದ ಸದ್ದು
ನೋವಿನ ಬಿಕ್ಕಳಿಕೆ
ಮದ್ದು ಗುಂಡಿನ ಗುದ್ದು


ಕೂಗಿದಾಗ ಗೂಗೆ
ಸಂಭವಿಸಿರಬಹುದು ಹೀಗೆ
ಅಲ್ಲೊಂದು ಇಲ್ಲೊಂದು
ಸಾವು - ನೋವು.

ವರ್ತಮಾನದ ಪುಟಗಳ ತುಂಬ
ತುಂಬಿ ಹರಿದಿದೆ
ಕೆಂಪು ನದಿಯೊಂದು
ಗಾಂಧಿಯ ನಾಡಿನಿಂದ
(ಮೋದಿಯ ಗೂಡಿನಿಂದ)

ಸತ್ತರೆ ಸಾಯಲಿ
ಬಂದೂಕು
ಮತ್ತೆ ಚಿಗುರಿಸಬಹುದು
ಬದುಕು

ಕೇಸರಿಯ ಮಬ್ಬಿನ
ವಿಷದ ಗಾಳಿಸೋಂಕು
ಉಳಿಸೀತೆ
ನಮ್ಮ ನಿಮ್ಮೆಲ್ಲರ ಬದುಕು?

ಬಿ.ಶ್ರೀನಿವಾಸ,
ಹಾವೇರಿ



JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH